ಕನ್ನಡ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮಾಸಪತ್ರಿಕೆ

ಸಂಪುಟ ೨೫] ಸಂಪಾದಕರು : ಅನ್ನದಾನಯ್ಯ ಪುರಾಣಿಕ, ಬಿ.ಕಾಮ್., ಎಲ್‌ಎಲ್.ಬಿ. [ಸಂಚಿಕೆ ೨

ರವೀಂದ್ರನಾಥ ಠಾಕೂರರ ಶತಮಾನೋತ್ಸವ ಸಪ್ತಾಹ



ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಾಂಸ್ಕೃತಿಕ ಪುರೋಭಿವೃದ್ಧಿ ಇಲಾಖೆಯ ಆಶ್ರಯದಲ್ಲಿ ರವೀಂದ್ರನಾಥ ಠಾಕೂರರ ಶತಮಾನೋತ್ಸವ ಸಪ್ತಾಹ ಜ. ದಿನಾಂಕ ೨೭ರಂದು ಆರಂಭವಾಗಿ ಫೆ. ೨ರ ತನಕ ನಡೆಯಿತು. ಆರಂಭೋತ್ಸವವನ್ನು ರಾಜ್ಯಪಾಲ ಶ್ರೀ ಜಯಚಾಮರಾಜೇಂದ್ರ ಒಡೆಯರು ನೆರವೇರಿಸಿದರು. ಆಗ್ಗೆ ತೆಗೆದ ಚಿತ್ರವಿದು. ಇಲ್ಲಿ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಮಾತನಾಡುತ್ತಿದ್ದಾರೆ. ಕ. ಸಾ. ಪ. ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, ರಾಜ್ಯಪಾಲರು, ಶಿಕ್ಷಣಮಂತ್ರಿ ಶ್ರೀ ಅಣ್ಣಾರಾವ್ ಗಣಮುಖಿ ಅವರು ಮತ್ತು ಶ್ರೀ ಕೆ.ಎಸ್. ಧರಣೇಂದ್ರಯ್ಯ ಇವರನ್ನು ಚಿತ್ರದಲ್ಲಿ ಕಾಣಬಹುದು.

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮

ವಿಷಯ ಸೂಚಿಕೆ

೧.	'ಕಳ'ದಲ್ಲಿ 'ಕರ್ಣ' "ಶಿವಶ್ರೀ"	೨೭
೨.	ಸ್ತ್ರೀಧರ್ಮ ಮತ್ತು ಸಮಸ್ಯೆಗಳು ಶ್ರೀಮತಿ ಹೆಚ್. ವೈ. ಸರಸ್ವತಮ್ಮ	೨೮
೩.	ಭಾಷಾ ಬಾಂಧವ್ಯ ಗೋಷ್ಠಿಯ ಭಾಷಣಗಳು	೩೨
೪.	ಸಂಶೋಧನಾ ಮತ್ತು ವಿಮರ್ಶಾಗೋಷ್ಠಿ	೪೦
೫.	ಗ್ರಂಥಾವಲೋಕನ	೫೨
೬.	ಪರಿಷತ್ತಿನ ಸುದ್ದಿಗಳು	೫೫
೭.	ಸಂಕ್ರಾಂತಿ–ಗೀತ	೫೫
೮.	ಕನ್ನಡದ ಸುದ್ದಿಗಳು	೫೬
೯.	ಸಂಪಾದಕೀಯ	೫೭

ಕನ್ನಡನುಡಿ



ಸಂಪುಟ ೨೫] ಫೆಬ್ರವರಿ ೧೯೬೨ [ಸಂಚಿಕೆ ೨

'ಕಳ'ದಲ್ಲಿ 'ಕರ್ಣ'*

"ಶಿವಶ್ರೀ"

ರು "ಅಸ್ತ್ರ"ಗಳಲ್ಲಿ ನಾಲ್ಕು "ಬಳಸಿದು"ದಾಯ್ತು
ಎರಡಕ್ಕೆ "ಮಂತ್ರ"ವೇ ಬಾರದಲ್ಲ!
ತುರಿಕೆ, ಬೇಸರಿಕೆ, ಆಕಳಿಕೆ, ಮುತ್ತಿಹವು
ಫಲುಗುಣನಿಗಿದ್ದಂಥ ಕೃಷ್ಣನಿಲ್ಲ
ಭೀಷ್ಮ ದ್ರೋಣರದಾಯ್ತು, ನನ್ನ ಬಾರಿಯು ಬಂತು
ಒಳ್ಳೆ ಸಮಯದಿ ನನಗೆ ಕೈಕೊಟ್ಟುದಾಯ್ತು
ನೋರಥ ಚಕ್ರವೇ ಭೂಮಿಯಲಿ ಹೂತಿಹುದು
ಮೇಲಕೆತ್ತಲು ಸಮಯವಿಲ್ಲವಾಯ್ತು
ಯಾರು ಬಿದ್ದರು ಇಲ್ಲ, ಯಾರು ಗೆದ್ದರು ಇಲ್ಲ
ಸಮಯ ಕಂತೂ ಮೊದಲೆ ಬುದ್ಧಿ ಇಲ್ಲ
ಳ'ದ ಮಧ್ಯದಲಿಂದು ಕೈಚೆಲ್ಲಿ ಕುಳಿತಿರುವ
ನನ್ನ ಮೇಲದಕಂತು ಕರುಣೆಯಿಲ್ಲ
ದುರಭಿ ಸಂಧಿಯಲಿ ಕಾಲ ಫಲುಗುಣ ನೆನಗೆ
ಮೃತ್ಯುರೂಪಾಗಿಹನು ಕೃಷ್ಣನೆಡೆಯಲ್ಲಿ
"ಇದು ಸಮಯ, ನೆರನೋಡಿ, ಬಾಣಬಿಡು, ಸೋಲದಿರು"
ಎಂದು ಬೋಧಿಸುತಿಹನು ಶೌರಿ ರಥದಲ್ಲಿ
"ಸ್ವಲ್ಪ ನಿಲ್ಲೈ ವಿಜಯ, ಕೃಪೆದೋರು ಎನಗೀಗ
ನಿನ್ನ ಉಪಕೃತಿಯನ್ನು ಮರೆಯಲಾರೆ

ಮೂರು ತಾಸಿನ ಅವಧಿ ಮುಗಿಯೆ ಬರುತಿಹುದೀಗ
ನನ್ನ 'ಸಾವ'ನು ನಾನು ಕರೆಯಲಾರೆ"
ಹಿಂದು ಮುಂದಿನ ವೀರ ಯೋಧರೆಲ್ಲರು ತಮ್ಮ
"ಹಸ್ತ ಕೌಶಲ"ವನ್ನು ತೋರುತಿಹರು
ಹರಿತ "ಅಸ್ತ್ರದ" ಹತಿಗೆ ಹಲರು ಹಿಮ್ಮೆಟ್ಟಿದರು
ನನ್ನಂತೆ ಹಲಕೆಲರು ಚಿಂತೆಯಿಂದಿಹರು
ಗುರು ಕೊಟ್ಟ ಶಾಪವೊ, ನನ್ನ ಪ್ರಾರಬ್ಧವೊ?
ಏನು ಹೊಳೆಯದು ನನಗೆ ಈ ಹೊತ್ತಿನಲ್ಲಿ!
ಶ್ರೀಗುರುವೆ, ವರಗುರುವೆ, ದೀನರಕ್ಷಾಮಣಿಯೆ
"ಜ್ಯೋತಿ" ಮೂಡಿಸು ಗುರುವೆ ಚಿತ್ತದಲ್ಲಿ
ಹರಮುನಿಯೆ ಗುರುಕಾವ, ಗುರುಮುನಿಯೆ ಹರಕಾಯ
ನಿನ್ನ ಕೃಪೆ ನನಗಿಂದು ರಕ್ಷೆಯಾಗಿರಲಿ
ಕಾಲ "ವಿಜಯ"ನ ಮೇಲೆ ವಿಜಯ ಸಾಧಿಸಲೆನಗೆ
ನಿನ್ನ ರಕ್ಷೆಯು ನನ್ನ ತಲೆಯ ಮೇಲಿರಲಿ
ವರದ ಹಸ್ತದೆ ನಿನ್ನ, ಮಂತ್ರ ಸಿದ್ಧಿಯಂ ತೋರೆ
ಚರಣ ಪಂಕೇರುಹಕೆ ಶಿರವ ಬಾಗುವೆನು
ಪ್ರಶ್ನೆಗುತ್ತರ ಬಿಡಿಸಿ, ರೋಲು ನಂಬರು ಬರೆದು
ತುಂಬುಹರ್ಷದಿ ನಾನು ಮನೆಗೆ ಹೋಗುವೆನು.

* ಗದಗ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜರುಗಿದ ಕವಿಗೋಷ್ಠಿಯಲ್ಲಿ ಶ್ರೀಯುತರು ಓದಿದ ಕವನ.

ಸ್ತ್ರೀಧರ್ಮ ಮತ್ತು ಸಮಸ್ಯೆಗಳು*

ಶ್ರೀಮತಿ ಹೆಚ್. ವೈ. ಸರಸ್ವತಮ್ಮ

ಧಾರಯತೇ ಧರ್ಮ ; ಯಾವುದು ಸ್ಥಿರವಾಗಿ ನಿಲ್ಲತಕ್ಕದ್ದೋ ಅದೇ ಧರ್ಮ. ಅನಾದಿಕಾಲದಿಂದ ಪ್ರಪಂಚ ನಡಕೊಂಡು ಬಂದಿರುವುದು ಧರ್ಮದಿಂದಲೆ ಆಗಿರುವಾಗ ಧರ್ಮ ಧರ್ಮ ಎಂದು ನಾವು ಪದೇಪದೇ ಆ ಬಗ್ಗೆ ಚರ್ಚಿಸುವುದು ಏಕೆ? ಇದು ವಿಚಾರ ಮಾಡಿದಂತೆಲ್ಲ ವಿಸ್ತಾರವಾಗುತ್ತದೆ.

ನೈಸರ್ಗಿಕಧರ್ಮ, ಕಾಲಧರ್ಮ, ಋತುಧರ್ಮ, ಯುಗಧರ್ಮ, ದೇಶಧರ್ಮ, ಪ್ರಾಣಿಧರ್ಮ, ಮಾನವಧರ್ಮ, ಪಶುಧರ್ಮ ಹೀಗೆ ಎಷ್ಟೋ ಇವೆ. ನಾವು ಮುಖ್ಯವಾಗಿ ಗಮನಿಸುವುದು ಮಾನವಧರ್ಮ ; ಅದರಲ್ಲೂ ಧರ್ಮ ಎಂದಕೂಡಲೆ ಮತ ಎಂಬುದು ರೂಢಿಯಾಗಿದೆ. ಧರ್ಮವೆಂಬುದು ಬರಿಯ ಮತವೋ ಪಂಥವೋ ಅಲ್ಲ. ಅದರ ಉದ್ದೇಶ್ಯ ಮಾನವರ ಸಂಸ್ಕಾರ ಪರಿಷ್ಕರಣ. ಆ ಮೂಲಕ ಪುರುಷಾರ್ಥ ಸಾಧನೆ. ಎಲ್ಲ ಮತಗಳಿಗೂ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಇವು ಸಮಾನ ಧರ್ಮಗಳಾಯಿತು. (Fundamental Dharmas) ನಮ್ಮದು ಸನಾತನ ಧರ್ಮ. ವೇದಗಳಲ್ಲಿಯೂ ಮನು ಹೇಳಿದ ಧರ್ಮಗಳಿಗೆ ಮಾನ್ಯತೆ ಇದೆ. ಮನು ಧರ್ಮ ಎಂದರೆ ಹೀಗೆ ಹೇಳಿದಾನೆ :—

ವಿದ್ವದ್ಭಿಃ ಸೇವಿತಃ ಸದ್ಭಿಃ ನಿತ್ಯಂ ಅದ್ವೇಷರಾಗಿಭಿಃ |
ಹೃದಯೇನ ಚಾಭ್ಯನುಜ್ಞಾತೋಯೋಧರ್ಮಃ
ತಂನಿಬೋದತ ||

ಧರ್ಮಶಾಸ್ತ್ರದಲ್ಲಿ ಹೇಳಿರುವ ಈ ವಿಷಯ ಬಾಳಿನ ಯಾವತ್ತು ಭಾಗಕ್ಕೂ ಅನ್ವಯಿಸುತ್ತದೆ. ಮಾನವ ವ್ಯಕ್ತಿಯಾಗಿಯೂ ಸಮಾಜದ ಅಂಗವಾಗಿಯೂ ಅನುಸರಿಸಬೇಕಾದ ನೀತಿ ನಿಯಮವೇ ಧರ್ಮ. ಶೃತಿ ಸ್ಮೃತಿ ಶಿಷ್ಟಾಚಾರಗಳಲ್ಲಿ ಈ ವಿಧಿಗಳನ್ನು ವಿವರವಾಗಿ ಹೇಳಿದೆ.

ಮಾನವಧರ್ಮ ಹೀಗಿದ್ದರೂ ಸ್ತ್ರೀ ಪುರುಷ ಧರ್ಮಗಳೆಂಬ ಎರಡು ವಿಭಾಗಗಳ ನಿಯಮವಿದೆ. ಪ್ರಪಂಚದ ಯಾವ ಭಾಗದಲ್ಲಿ ನೋಡಿದರೂ ಹೆಣ್ಣು ಜಾತಿಗೆ ಮೀಸಲಾದ ಪುರಾತನವೂ ಸರ್ವ ವ್ಯಾಪಿಯೂ ಆದ ಧರ್ಮ ಮಾತೃತ್ವ. ಅದಕ್ಕೇ ಮಾತೆ ಜಗದ್ಧಾತ್ರಿ ಎನ್ನುವುದು. ಆ ಧರ್ಮವನ್ನು ಮಾತ್ರ ಈ ವರೆಗೆ ಯಾರೂ ಬದಲಾಯಿಸಿಲ್ಲ. ಮುಂದೆಯೂ ಆಗಲಾರದು. ಅದು ತ್ರಿಕಾಲಾತೀತವಾದುದು.

ಸ್ತ್ರೀ ಕುಮಾರಿಯಾಗಿ—ಸತಿಯಾಗಿ—ಮಾತೆಯಾಗಿ ಗೃಹಸ್ವಾಮಿಣಿಯಾಗಿ ಆಚರಿಸಬೇಕಾದ ಧರ್ಮಗಳು ಹಲವಿವೆ. ಜಗತ್ತಿಗೆ ಮುಂದಿನ ಜನಾಂಗವನ್ನು ನೀಡಬೇಕಾದ ಅವಳ ಧರ್ಮ ಚಕ್ರದಂತೆ ಸದಾ ಸುತ್ತುತ್ತಲೇ ಇರಬೇಕಷ್ಟೆ. ಸ್ತ್ರೀ ಧರ್ಮದಲ್ಲಿ ಪತ್ನೀಧರ್ಮ, ಮಾತೃಧರ್ಮ, ಸತೀಧರ್ಮ, ವಿಧವಾಧರ್ಮ, ವೇಶ್ಯಾಧರ್ಮ ಇತ್ಯಾದಿಗಳಿವೆ. ಮತ್ತು ಪತ್ನಿ ಮಾತೃ ಆಗದೆ ಕುಮಾರಿಯರಾಗಿಯೇ ಉಳಿದು ಬ್ರಹ್ಮವಾದಿನಿಯರಾಗಲಿಕ್ಕೂ ಹೆಂಗಸಿಗೆ ಹಕ್ಕುಂಟು. ಇವೆಲ್ಲದರಲ್ಲಿ ಸ್ತ್ರೀಗೆ ಮುಖ್ಯವಾದ್ದು ಪತ್ನೀಧರ್ಮ. ಪತಿವ್ರತೆಯಾದ ಮಾತೆಗೆ ಎಲ್ಲ ಶೃತಿ ಸ್ಮೃತಿಗಳಲ್ಲಿಯೂ ತುಂಬಾ ಗೌರವ ;

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾ |
ಯತ್ರೈತಾಸ್ತು ನ ಪೂಜ್ಯಂತೆ ಸರ್ವಾಸ್ತತ್ರಾ
ಫಲಾಃ ಕ್ರಿಯಾಃ ||

ಎಂದು ಬಣ್ಣಿಸಿ ಸ್ತ್ರೀಯನ್ನು ಸದಾ ಅಲಂಕಾರಾದಿ ವಸ್ತುಗಳಿಂದ ಸಂತೃಪ್ತಿಗೊಳಿಸಬೇಕೆಂದು ಹೇಳಿದೆ. ಸ್ತ್ರೀಹತ್ಯೆ ಮಹಾಪಾಪವೆಂದಿದಾರೆ. ಆದರೆ ಅದೇ ಸ್ಮೃತಿಗಾರರು ಮತ್ತೊಂದೆಡೆ ನಸ್ತ್ರೀ ಸ್ವಾತಂತ್ರ್ಯಮರ್ಹಸಿ—ಎಂದಿದಾರಲ್ಲ! ಅದಕ್ಕೆ ಬಹುಶಃ ಹೆಂಗಸು ಒಂಟಿಯಾಗಿದ್ದು ದುಡಿದು ಹೊಟ್ಟೆ ಹೊರೆದುಕೊಳ್ಳುವ ಕೆಲಸಕ್ಕೆ ಹಚ್ಚಬಾರದು ಎಂಬರ್ಥದಲ್ಲಿ ಹೇಳಿರಬಹುದು. ಇವೆಲ್ಲ ಹಿಂದಲ ಮಾತು. ಈಗ ಈ ಧರ್ಮಗಳಿಗೇ ಅಂಟಿ ಕೂತರೆ ಹೇಗಾದೀತು ಎಂಬ ಪ್ರಶ್ನೆ ಇದ್ದೇ ಇದೆ. ಹೌದು, ಕಾಲಕ್ರಮದಲ್ಲಿ ಪ್ರಕೃತಿಯೇ ಬದಲಾಗುತ್ತಿರುವಾಗ ಮಾನವರ ನಡೆ ನುಡಿ ಧರ್ಮ ಆಚಾರಾದಿಗಳೂ ಬದ

* ಕಳೆದ ಡಿಶೆಂಬರು ದಿನಾಂಕ ಎರಡು ಕ. ಸಾ. ಪ. ಆಶ್ರಯದಲ್ಲಿ ಮಾಡಿದ ಕುಂತಳಮ್ಮ ಸ್ಮಾರಕೋಪನ್ಯಾಸವಿದು.

ಲಾಗದೆ ಉಂಟೆ! ಹಾಗೆ ಬದಲಾವಣೆ ಹೊಂದಿದಾಗಿನ ಪರಿಸ್ಥಿತಿಗಳ ಉಲ್ಲೇಖವೂ ನಮಗೆ ಸಿಕ್ಕಿದೆ. ಸೀತಾ, ಅಹಲ್ಯ, ತಾರಾ, ಮಂಡೋದರಿ, ಅನಸೂಯ, ಕಾತ್ಯಾಯನೀ, ಮೈತ್ರೇಯಿ, ಗಾರ್ಗಿ, ರೇಣುಕ, ದ್ರೌಪದಿ, ಕುಂತಿ ಮೊದಲಾದ ಮಹಾಸತಿಯರು ನಡೆದ ದಾರಿ ಅನುಸರಿಸಿದ ಧರ್ಮ ಅವರಿಗೆ ಒದಗಿದ ದುರಂತ ಮತ್ತು ಅದರ ಪರಿಹಾರಗಳ ಬಗ್ಗೆ ಅವರು ತಳೆದ ಧೃಢಧೋರಣೆ ಪುರಾಣೇತಿಹಾಸಗಳಲ್ಲಿ ವಿವರಿಸಿದಾರೆ. ಮತ್ತು ಈಗಿನ ನಮ್ಮ ಹಿರಿಯ ಕವಿಗಳಾದ ಶ್ರೀ ಡಿ. ವಿ. ಜಿ. ಅವರ "ಶ್ರೀರಾಮ ಪರೀಕ್ಷಣಂ" ಮತ್ತು ಕುವೆಂಪು ರವರ "ರಾಮಾಯಣ ದರ್ಶನ"ದಲ್ಲಿನ ಸ್ತ್ರೀ ಪಾತ್ರ ಪೋಷಣೆಯಿಂದ ಬೆಳಕಿಗೆ ಬಂದಿದೆ.

ದ್ರೌಪದಿಯ ಕಾಲಕ್ಕೆ ಅನೇಕ ಬದಲಾವಣೆಗಳು ತಲೆದೋರಿತು. ಅವಳು ಅನುಭವಿಸಿದ ರಾಜಕೀಯ ಆರ್ಥಿಕ-ಸಾಮಾಜಿಕ ಧರ್ಮ ಸಂಕಟಗಳು ನಮ್ಮಂಥ ಸಾಮಾನ್ಯರಿಗೆ ಒದಗಿದ್ದರೆ ಖಂಡಿತ ನಾವದನ್ನು ತಡಕೊಳ್ಳದೆ ಹೋಗುತ್ತಿದ್ದವು. ದ್ರೌಪದಿಯಂಥ ದಿಟ್ಟೆಯರಿಗೆ ಮಾತ್ರವೇ ಅದು ಸಾಧ್ಯ. ಶ್ರೀಕೃಷ್ಣನ ಮೋಹದ ಮಡದಿ ಸತ್ಯಭಾಮೆಯೇನೂ ಸಾಮಾನ್ಯಳಲ್ಲ. ನರಕಾಸುರ ವಧೆಗೆ ಕೃಷ್ಣ ಹೊರಟಾಗ ಆಕೆಯೇ ಸಾರಥಿಯಾಗಿರಲಿಲ್ಲವೆ? ಅಂಥ ಸತ್ಯಭಾಮೆ ಒಮ್ಮೆ ದ್ರೌಪದಿಯ ವನವಾಸ ಸಮಯದಲ್ಲಿ ಬಂದು ಒಂದು ಆತ್ಮೀಯ ಸಂಭಾಷಣೆಗೆ ತೊಡಗುತ್ತಾಳೆ. "ಸ್ತ್ರೀಲೋಲನಾದ ನನ್ನ ಪತಿಯನ್ನು ನಾವು ಅಷ್ಟಮಹಿಷಿಯರಿದ್ದೂ ಮೆಚ್ಚಿಸಲಾರದೆ ಇದೀವಿ. ವೀರಾಧಿವೀರರಾದ ಐವರು ಪತಿಯರನ್ನು ಸಾಮಾನ್ಯಳಾದ ನೀನು ಈ ವನವಾಸದ ಕಷ್ಟ ಕಾರ್ಪಣ್ಯದಲ್ಲಿಯೂ ಸಂತೋಷವಾಗಿರಿಸಿದ್ದೀಯಲ್ಲಾ, ಇದರ ಗುಟ್ಟೇನು ಹೇಳೆ ಅಕ್ಕ!" ಎಂದು ಕೇಳುತ್ತಾಳೆ. ಆಗ ದ್ರೌಪದಿ ಸತ್ಯಭಾಮೆಗೆ ಬೋಧಿಸಿದ ನೀತಿಧರ್ಮ ಸೂಕ್ಷ್ಮಗಳು ಸುಂದರವಾಗಿವೆ. ಸಂಚಿ ಹೊನ್ನಮ್ಮನ ಹದಿಬದೆಯ ಧರ್ಮ, ಪಂ|| ರಮಾಬಾಯಿ ಸರಸ್ವತಿಯವರ ಸ್ತ್ರೀಧರ್ಮನೀತಿ ಮುಂತಾದ ಗ್ರಂಥಗಳಿಗೆ ಅದೇ ಆಧಾರವಾಗಿದೆ. ವೇದಕಾಲದಲ್ಲಿ ಸ್ತ್ರೀಗಿದ್ದ ಗೌರವ ಸ್ವಾತಂತ್ರ್ಯ ಸಮಾನತೆಗಳು ಕ್ರಮೇಣ ಸಡಿಲಾಯಿತು. ಉಪನಯನ, ವಿದ್ಯಾಭ್ಯಾಸ ವೇದಾಭ್ಯಾಸಕ್ಕೆ ತಳಹದಿ. ವೇದಾಧ್ಯಯನ ಪೂರೈಸಲು ಹನ್ನೆರಡು ವರ್ಷ ಬೇಕು. ಆದ್ದರಿಂದ ಆಗ ಪ್ರೌಢವಿವಾಹ ಇತ್ತು. ವಿದ್ಯೆ ಮುಗಿಸಿ ಮನಸ್ಸಿಗೆ ಮೆಚ್ಚಿದವರನ್ನು ವರಿಸುವ ಛಾತಿ ಹೆಂಗುಸಿಗೆ ಬಂದಿರುತ್ತಿತ್ತು. ಅಥವ ಆ ಜನ್ಮ ಬ್ರಹ್ಮಚಾರಿಣಿಯಾಗಿ ಪರಾವಿದ್ಯೆಯನ್ನಭ್ಯಸಿಸಿ ಬ್ರಹ್ಮವಾದಿನಿಯರಾಗುವ ಅವಕಾಶವೂ ಇತ್ತು. ಇಂದಿಗೂ ಸಹ ನಮ್ಮ ಧರ್ಮ ಉಳಿದಿರುವುದು ಸ್ತ್ರೀಯರಿಂದಲೆ.

ಗೃಹಿಣಿಯಾದವಳೂ ಸಹ ಗಂಡನ ವೃತ್ತಿಯಲ್ಲಿ ಸಮಭಾಗಿಯಾಗಿ ಕುಶಲ ಕಲೆಗಳಲ್ಲಿ ಪರಿಶ್ರಮ ತೋರುತ್ತಿದ್ದರು. ಬಿಲ್ಲುಬಾಣಗಳಂಥಾ ಯುದ್ಧಾಸ್ತ್ರ ತಯಾರಿಕೆಯಲ್ಲಿಯೂ ಸಹ ಪ್ರವೀಣರಾಗಿರುತ್ತಿದ್ದರಂತೆ. ಹೆಂಗಸು ಗಂಡಸರಿಗೆ ಹೊರೆಯೆನಿಸದೆ ಸಹಧರ್ಮಚಾರಿಣಿಯಾಗಿದ್ದಳು. ಎಲ್ಲ ಆಶ್ರಮಗಳಿಗೂ ಶ್ರೇಷ್ಠವಾದದ್ದು ಗೃಹಸ್ಥಾಶ್ರಮವಾಗಿತ್ತು.

ಆದರೆ ಯಾವ ದುರ್ವಿಧಿಯಿಂದಲೋ ಮಧ್ಯೆ ಅಂದರೆ ಮಹಾಭಾರತದ ಯುದ್ಧದಿಂದೀಚೆಗೆ, ಆ ಭೀಕರ ಯುದ್ಧದ ಪರಿಣಾಮದಿಂದಲೇ ಇರಬೇಕು ಪರಿಸ್ಥಿತಿ ಬದಲಾಯಿತು. ಮೂಢನಂಬಿಕೆ ಮೂಢಾಚಾರಗಳು ಪ್ರಬಲವಾಗಿ ಧರ್ಮದಲ್ಲಿ ಕ್ರಾಂತಿಕಾರಕ ಬದಲಾವಣೆ ಆಗಲೇಬೇಕಾಯಿತು. ಆಗ ಹುಟ್ಟಿದ್ದೇ ಬೌದ್ಧ ಜೈನಧರ್ಮಗಳು. ತ್ಯಾಗ, ಸನ್ಯಾಸ-ವಿರಕ್ತ ಜೀವನಕ್ಕೆ ಬೆಲೆ ಹೆಚ್ಚಿತು. ಹೆಂಗಸರು ತ್ಯಾಗಜೀವನಕ್ಕೆ ಅಡ್ಡಿ ಎಂಬ ಭಾವನೆ ಬೆಳೆಯಿತು. ನಿಜವಾಗಿ ವಿಚಾರ ಮಾಡಿದರೆ ಹೆಂಗಸು ಹೆಚ್ಚು ತ್ಯಾಗಮಯಿ. ಗಂಡಸಿನ ಮನೋನಿಶ್ಚಯವನ್ನು ಅವಳೆಂದೂ ಸಡಲಿಸಿಲ್ಲ. ಅಂತೂ ಹೆಣ್ಣು ಪಾಪಕ್ಕೆ ದಾರಿ ಮುಂತಾದ ಅಪವಾದ ಅವಳ ಪಾಲಿಗೆ ಬಂತು. ಹೆಂಗಸಿಗೆ ವೇದಾಧ್ಯಯನ ನಿಂತಿತು. ವಿದ್ಯೆ ಇಲ್ಲದ್ದರಿಂದ ಕೂಪಕೂರ್ಮವಾಗಿ ಮನೆಯಲ್ಲೇ ಕೂತು ಮೂಢಳೂ ಪರಾಧೀನಳೂ ಆದಳು.

ಇವೆಲ್ಲ ಹಿಂದಲದು. ನಾವು ಯಾವಾಗಲೂ ಗತಗೋಷ್ಠಿ ಚರ್ವಿತ ಚರ್ವಣದಲ್ಲಿಯೇ ನಿಸ್ಸೀಮರು. ಮಾಡಬೇಕಾದ್ದನ್ನು ಬಿಟ್ಟು ಹಿಂದಿನದನ್ನೇ ಹೇಳಿಕೊಳ್ಳುವುದರಿಂದ ಏನು ಪ್ರಯೋಜನ. ನಮ್ಮ ಭರತ ಭೂಮಿ ಪ್ರಕೃತಿದತ್ತವಾಗಿ ತುಂಬಾ ಭದ್ರವಾಗಿತ್ತು. ಮೂರು ಕಡೆ ಸಮುದ್ರ, ತಲೆ ಕಡೆ ಉನ್ನತವಾದ ಹಿಮಾಲಯ ಕಾವಲಿದ್ದುದರಿಂದ ಹೊರಗಿನ ಜನರು ಬರುವುದಕ್ಕೆ ಅವಕಾಶವಿಲ್ಲದೆ ಇದ್ದು ನಾಡು ಶಾಂತಿಯಿಂದಿದ್ದುದರಿಂದ ಆಶ್ರಮ ನೀತಿ ನಿಯಮಗಳು ಚಾಚೂತಪ್ಪದೆ ಜರುಗಿಕೊಂಡಿತ್ತು.

ಪರಕೀಯ ಧಾಳಿ ಬರಬರುತ್ತ ಜೋರಾಗಿ ಸಮಾಜದಲ್ಲಿ ಆಂದೋಳನ ಎದ್ದಿತು. ರಾಜ್ಯಗಳು ತಲೆಕೆಳ

ಗಾದವು. ಆದರೂ ಧರ್ಮ ಬಲವಾಗಿಯೇ ನಿಂತಿತ್ತು. ಕಾಲಕ್ಕೆ ತಕ್ಕ ಆಪದ್ಧರ್ಮ ಹುಟ್ಟಿತು. ಹಾಗೆ ಬಂದುದೇ ಬಾಲ್ಯವಿವಾಹ, ಪರದಾ ಮತ್ತು ಜೋಹರುಗಳಿರಬೇಕು.

ಪಾಶ್ಚಾತ್ಯರ ರಾಜ್ಯಭಾರ ತೊಡಗಿ ಕ್ರೈಸ್ತ ಮಿಷನರಿಗಳು ಶಾಲೆಗಳನ್ನು ತೆರೆದು ಜನಸಾಮಾನ್ಯಕ್ಕೆ ಓದು ಬರಹ ಕಲಿಸಿದ್ದು ದೊಡ್ಡ ಬದಲಾವಣೆಗೆ ಮೊದಲಾಯಿತು. ಸ್ತ್ರೀ ವಿದ್ಯಾಭ್ಯಾಸ ಹರಡಿದಂತೆಲ್ಲ ಸ್ತ್ರೀಯರ ನಡವಳಿಕೆಯಲ್ಲೂ ಹಲವು ಮಾರ್ಪಾಡುಗಳಾಗಲೇ ಬೇಕಾಯಿತು. ಅದುವರೆಗೂ ಮನೆಯ ಒಳಗೇ ಇದ್ದ ಹೆಣ್ಣುಮಕ್ಕಳು ಹೊರಗೆ ಬಂದರು. ಶ್ರೀ ರಾಮಕೃಷ್ಣಪರಮಹಂಸರು ಶ್ರೀ ಶಾರದಾಮಣಿದೇವಿಯವರದು ಒಂದು ಅಪೂರ್ವ ಮಾರ್ಗವಾಯಿತು. ರಾಜಾರಾಮ ಮೋಹನರಾಯರು, ಈಶ್ವರಚಂದ್ರವಿದ್ಯಾಸಾಗರ ಮೊದಲಾದ ಮಹನೀಯರು ಸ್ತ್ರೀಧರ್ಮಶಾಸ್ತ್ರವನ್ನು ಪರಿಷ್ಕರಿಸಿ ಕಾಲಕ್ಕೆ ತಕ್ಕ ಮಾರ್ಪಾಟುಗಳನ್ನು ಸೂಚಿಸಿದರು. ವಿಧವಾ ವಿವಾಹ, ಪ್ರೌಢವಿವಾಹ, ಬಾಲ್ಯವಿವಾಹ ನಿರ್ಮೂಲನಗಳಿಗಾಗಿ ಆಂದೋಳನ ಜೋರಾಗಿಯೇ ನಡೆಯಿತು. ಶಾರದಾ ಕಾನೂನು ತರಬೇಕೆಂದಾಗ ಎದ್ದ ಕೂಗು ಸಾಮಾನ್ಯದ್ದಲ್ಲ. ಆದರೆ ಅದರ ಬೆನ್ನಿಗೇ ಯುದ್ಧ ಬಂದದ್ದು ಈಗ ಶಾರದಾ ಕಾನೂನು ಯಾಕೆ ಬೇಕಾಯಿತು ಎಂಬುದು ಕೂಡಾ ಮರೆತಿದಾರೆ.

ಎರಡು ಮಹಾಯುದ್ಧಗಳು ತಂದ ಬದಲಾವಣೆ ಬಹುಶಃ ಎರಡು ಯುಗಗಳಲ್ಲೂ ಆಗದಷ್ಟಾಯಿತು. ಜತೆಗೆ ನಮ್ಮ ಸ್ವಾತಂತ್ರ್ಯ ಹೋರಾಟ. ಅದರಲ್ಲಿ ಮಹಿಳೆಯರ ಪಾತ್ರ! ಮಹಾತ್ಮಾಜೀ ಮಹಿಳೆಯರಿಗೆ ಕೊಟ್ಟ ಮಾನ್ಯತೆ ಅಸಾಧಾರಣವಾದುದು. ವೋಟಿನ ಹಕ್ಕಿಗಾಗಿ ನಾವು ಯೂರೋಪಿನ ಹೆಂಗಸರಂತೆ ಹೊಡೆದಾಡಲಿಲ್ಲ. ನಮ್ಮ ರಾಷ್ಟ್ರನಾಯಕರು ನಮ್ಮ ರಾಜಕೀಯ ಪ್ರಣಾಳಿಕೆಯಲ್ಲಿ, ಹೆಂಗಸಿಗೆ ಸರಿಸಮಾನ ಹಕ್ಕು ಬಾಧ್ಯತೆಗಳನ್ನು ನೀಡಿದರು. ಆಸ್ತಿವಿಭಾಗ, ವಿವಾಹ ವಿಚ್ಛೇದ ಮುಂತಾದ ಕಾನೂನುಗಳನ್ನೂ ಮಾಡಿದಾರೆ· ಧರ್ಮಶಾಸ್ತ್ರದ ಕೆಲ ಕಾನೂನುಗಳಿಗೂ ತಿದ್ದುಪಡಿಮಾಡಿ ಕೇವಲ ಗ್ರಂಥಸ್ಥವಾಗಿದ್ದ ಯತ್ರನಾರ್ಯಸ್ತು ಪೂಜ್ಯಂತೆ ಎಂಬುದನ್ನು ಕಾರ್ಯಗತ ಮಾಡಿದರು. ಮಹಿಳೆಯರು ಮಂತ್ರಿ, ರಾಯಭಾರಿ, ರಾಜ್ಯಪಾಲ ಸ್ಥಾನಗಳಲ್ಲಿ ಈಗ ವಿರಾಜಿಸುತ್ತಾರೆ. ರಾಜ್ಯವಿಭಜನೆಯ ಪರ್ವಕಾಲ ಮೊದಗಿತಲ್ಲ ಆಗ ಹೆಂಗಸರಿಗೆ ಮತ್ತೊಂದು ಗಂಡಾಂತರ ಪ್ರಾಪ್ತಿಸಿತು. ನಿರಾಶ್ರಿತೆಯರು ಪುನರ್ವಸತಿ ಶಿಬಿರಗಳಿಗೆ ಬರುವ ಮುಂಚಿ ಪಟ್ಟಪಾಡು, ಸಮಾಜ ಅವರ ಬಗ್ಗೆ ಆಡಿದ ನಿಷ್ಠುರತೆ ಇವುಗಳನ್ನು ಎದುರಿಸಿ ಎಷ್ಟೋ ಜನ ಈಗಲೂ ಆದರ್ಶಪ್ರಾಯರಾಗಿದ್ದಾರೆ.

ಇಂಥ ವಿಪರೀತ ಸಂದರ್ಭಗಳು ಬಂದಾಗ ನಾವು ಧರ್ಮಚ್ಯುತರಾದೆವೆ? ಎಂಬ ಪ್ರಶ್ನೆ ಬರುತ್ತೆ. ಉದ್ದೇಶಪೂರ್ವಕ ಯಾರೂ ಕೆಟ್ಟದಾರಿಗೆ ಹೋಗರು. ಧರ್ಮ ಬಿಡರು. ಧರ್ಮ ಕಾಪಾಡುವುದಕ್ಕೆ ಸರ್ವಸಾಹಸ ಪಟ್ಟು ಉಳಿಸಿದಾರೆ. ವಿಧಿಯಿಲ್ಲದ ಸಂದರ್ಭಗಳಲ್ಲಿ ಸ್ವಲ್ಪ ಏರು ಪೇರಾದರೂ ಮತ್ತೆ ಅದನ್ನು ಸರಿಪಡಿಸಿಕೊಂಡುದೇ ಹೆಚ್ಚಾಗಿದೆ.

ಈಗ One world Policy ಕಾಲ. ಬರಿ ನಮ್ಮ ನಾಡು, ನಮ್ಮ ದೇಶ, ನಮ್ಮ ಧರ್ಮ ಎಂಬ ಕಾಲ ಹೋಯಿತು. ೩೦ ಗಂಟೆಗಳಲ್ಲಿ ಪ್ರಪಂಚವನ್ನೆಲ್ಲ ಸುತ್ತಿ ಬರಬಹುದು. ಒಂದು ನಿಮಿಷದಲ್ಲಿ ಪ್ರಪಂಚದ ಸುದ್ದಿಯನ್ನೆಲ್ಲ ತಿಳಕೊಳ್ಳಬಹುದು. ತಾಂತ್ರಿಕ–ವೈಜ್ಞಾನಿಕ ಪ್ರಗತಿಗೆ ತಕ್ಕಂತೆ ಜೀವನ ಮಟ್ಟ ಏರಿದೆ. ಅದಕ್ಕೆ ತಕ್ಕ ಆರ್ಥಿಕ ಪರಿಸ್ಥಿತಿ ಮುಗ್ಗಟ್ಟೊ ಬಂದಿದೆ. ಈಗ ಮಧ್ಯಮವರ್ಗದ ಜನ ಜಾಸ್ತಿ. ಪ್ರಪಂಚ ವೇದಕಾಲದ ಹತ್ತರಷ್ಟು ಜನನಿಬಿಡವಾಗಿದೆ. ಇವರೆಲ್ಲರ ಹೊಟ್ಟೆಗೆ ಸಾಕಷ್ಟು ಆಹಾರ ಒದಗಿಸುವುದೇ ಸಮಸ್ಯೆಯಾಗಿರುವಾಗ ಆರ್ಥಿಕ ಮುಗ್ಗಟ್ಟು ಸಹಜ. ಜನ ಜೀವನದ ಪ್ರಗತಿಗೆ ತಕ್ಕಂತೆ ಮಧ್ಯಮ ವರ್ಗದ ಕುಟುಂಬಗಳು ಸಾಗಬೇಕಾದರೆ ಹೆಂಗಸರೂ ಸಹ ದುಡಿಯಬೇಕಾಗಿದೆ. ಐವತ್ತು ವರ್ಷದ ಹಿಂದೆ ಉಪಾಧ್ಯಾಯಿನಿಯರಾಗಿ ಮಾತ್ರ ಕೆಲಸಕ್ಕೆ ಸೇರುತ್ತಿದ್ದವರು ಗಂಡು ದಿಕ್ಕಿಲ್ಲದ ವಿಧವೆಯರೇ ಹೆಚ್ಚು. ಆದರೆ ಈಗ ಹಾಗಲ್ಲ. ತಂದೆಗೆ ನೆರವಾಗಬೇಕೆಂಬ ಕಾರಣದಿಂದ ಓದು ಮುಗಿದ ಹೆಣ್ಣುಮಕ್ಕಳು ನೌಕರಿಗೆ ಸೇರುತ್ತಿದ್ದಾರೆ. ವರದಕ್ಷಿಣೆ ಪಿಡುಗಿನ ಸಲುವಾಗಿ ಹೆಣ್ಣುಮಕ್ಕಳ ಮದುವೆ ನಿಧಾನವಾಗುತ್ತಿದೆ. ಸ್ವಜನರಲ್ಲಾದರೆ ವರದಕ್ಷಿಣೆ, ವರೋಪಚಾರದ ಕಟ್ಟೆಗೆ ಬೀಳಬೇಕಲ್ಲ ಎಂದು ಬೇರೆ ಬೇರೆ ಕಡೆ ಅಂತರ್ಜಾತೀಯ ವಿವಾಹ ಹೆಚ್ಚುತ್ತಿದೆ. ಇಷ್ಟು ಬದಲಾವಣೆಗಳನ್ನೂ ತಡಕೊಂಡು ಹಿಂದೂ ಮಹಿಳೆಯರು ಆದರ್ಶಸ್ತ್ರೀ ಎಂಬ ಕೀರ್ತಿಯನ್ನು ಕಾಪಾಡಿಕೊಂಡು ಬರಬೇಕಾದ್ದು ನಮ್ಮ ಧ್ಯೇಯ. ಇವೇ ಸಮಸ್ಯೆಗಳು. ಈ ಸಮಸ್ಯೆಗಳನ್ನು ಪರಿಶೀಲನೆ ಮಾಡಿ ಆಗಾಗ ವಿಚಾರ ವಿನಿಮಯ ಮಾಡಿಕೊಳ್ಳಬೇಕು.

ನಮ್ಮದು ಪ್ರಜಾರಾಜ್ಯ. ರಾಜ್ಯಕ್ಕೆ ತಕ್ಕ ಪ್ರಜೆಗಳನ್ನು ನಾವು ಸಿದ್ಧಗೊಳಿಸುವುದು ಮೊದಲ ಕರ್ತವ್ಯ.

ಗಂಡಹೆಂಡಿರಿಬ್ಬರೂ ದುಡಿತಕ್ಕೆ ಹೊರಗೆ ಹೋಗುವಾಗ ಮಕ್ಕಳನ್ನು ಆಳುಗಳ ವಶದಲ್ಲಿ ಅಥವ ಹಾಸ್ಟೆಲುಗಳಲ್ಲಿ ಬಿಡಬೇಕಾದ ಸ್ಥಿತಿ ಬರುತ್ತಿದೆ. ಇದೊಂದು ದೊಡ್ಡ ಸಮಸ್ಯೆ. ಹೆತ್ತವರ ಸಂಪರ್ಕ ಮಕ್ಕಳಿಗೆ ಕಡಿಮೆಯಾಗುವುದರಿಂದ ಮಕ್ಕಳ ಮನಸ್ಸಿನ ಪರಿಣಾಮ ಬದಲಾಗದಂತೆ ನೋಡಿಕೊಳ್ಳಬೇಕು.

ಉತ್ತಮ ಪೌರಧರ್ಮವನ್ನು ನಮ್ಮ ದೇಶದಲ್ಲಿ ನೆಲೆಗೊಳಿಸಬೇಕು. ರಾಜಕೀಯ ಪಟುಗಳ ಕೈಗೊಂಬೆಯಾಗಿ ಶಾಸನ ಸಭೆಗಳಿಗೆ ಹೋಗುವ ಬದಲು ನಾವು ಸ್ವತಃ ನಮ್ಮ ಹಕ್ಕುಬಾಧ್ಯತೆ ಆಗುಹೋಗುಗಳನ್ನು ಅಧ್ಯಯನ ಮಾಡಿಕೊಳ್ಳುವುದು ಇತ್ಯಾದಿ ಸಮಸ್ಯೆಗಳು ಇವೆ. ಮುಂದೂ ಬರಲಿವೆ. ಅವುಗಳನ್ನೆಲ್ಲ ಪರಿಶೀಲಿಸಿ ಕೊಳ್ಳುವ ತಾಳ್ಮೆ ಜಾಣ್ಮೆ ಬರಬೇಕಾದರೆ ವಿದ್ಯಾ ವ್ಯಾಸಂಗಗಳನ್ನು ಹೆಚ್ಚಿಸಿಕೊಳ್ಳಬೇಕು. ಸದ್ಧರ್ಮವನ್ನು ನಾವು ಕಂಡುಕೊಳ್ಳಬೇಕು. ಹಳತು-ಹೊಸತುಗಳನ್ನು ಮೇಳೈಸಿದ ಉತ್ತಮ ಹಾದಿಯಲ್ಲಿ ಬಾಳನ್ನು ಹಸನು ಮಾಡಿಕೊಳ್ಳಬೇಕು.

೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಭಾಷಾ ಬಾಂಧವ್ಯ ಗೋಷ್ಠಿಯ ಭಾಷಣಗಳು

[ಕಳೆದ ಡಿಶೆಂಬರ್ ತಿಂಗಳಲ್ಲಿ ಗದುಗಿನಲ್ಲಿ ನಡೆದ ೪೩ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ವಿವಿಧ ಗೋಷ್ಠಿಗಳ ಭಾಷಣಗಳ ಪೈಕಿ ಎರಡನ್ನು ಇಲ್ಲಿ ಕೊಡಲಾಗಿದೆ.]

ಸ್ವಾಗತ ಭಾಷಣ

ಶ್ರೀ ಎಸ್. ಬಿ. ಸಂಕನಗೌಡ್ರ ಅವರು ಸ್ವಾಗತ ಭಾಷಣ ಮಾಡುತ್ತಾ ಹೀಗೆ ನುಡಿದರು.

ಕೃತಪುರದ ಈ ಪುಣ್ಯ ಭೂಮಿಯಲ್ಲಿ ನೆರವೇರುತ್ತಿರುವ ೪೩ ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಂಗವಾಗಿ ಈಗ ಪ್ರಾರಂಭವಾಗಲಿರುವ ಭಾಷಾ ಬಾಂಧವ್ಯ ಗೋಷ್ಠಿಗಾಗಿ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತ ಸಮಿತಿಯ ಪರವಾಗಿ ಸ್ವಾಗತಿಸುತ್ತೇನೆ. ಭಾರತದ ಪ್ರಾಚೀನ ಕಾಲದಿಂದ ಅರ್ವಾಚಿನಕಾಲದ ಇತಿಹಾಸವನ್ನು ಅವಲೋಕಿಸಿದಾಗ, ಅಲ್ಲಿಯ ಭಾಷಾ ಬಾಂಧವ್ಯವು ತನ್ಮೂಲಕ ದೇಶದ ಸಾಂಸ್ಕೃತಿಕ ಐಕ್ಯತೆಯು ಒಡೆದೆದ್ದು ಕಾಣುತ್ತದೆ. ಗುಪ್ತರ ಹಾಗೂ ಮೊಘಲರ ಕಾಲಗಳ ನವರತ್ನಗಳನ್ನೊಳಗೊಂಡು, ಅಷ್ಟೇ ಏಕೆ ಇಂದಿನ ನಮ್ಮ ಜನತಾ ಸರಕಾರದಲ್ಲಿ ಎಲ್ಲ ಭಾಷೆಗಳ ಪಂಡಿತರಿಗೆ, ವಿವಿಧ ಕಲೆಗಳಲ್ಲಿ ಪಾರಂಗತರಾದವರಿಗೆ ಮೆಚ್ಚುಗೆ ಕೊಡುವುದು ಒಂದು ಸಾಂಪ್ರದಾಯಕವೇ ಆಗಿದೆ. ಪುರಾತನ ಕಾಲದಿಂದ ಬಂದ ಈ ಉಚ್ಚ ಪರಂಪರೆಯ ಪ್ರತೀಕವು ನಮ್ಮ ದೇಶದ ಹಳ್ಳಿ, ಪಟ್ಟಣಗಳ ಇತಿಹಾಸದಲ್ಲಿಯೂ ಅಡಗಿದೆ. ಗದಗು ವಿವಿಧ ಭಾಷೆಗಳ, ವಿವಿಧ ಧರ್ಮಗಳ, ಧರ್ಮ ಗುರುಗಳ, ಹೆಸರಾಂತ ರಾಜಮನೆತನಗಳ, ಯತಿಪುಂಗವರ, ಉದ್ದಾಮ ಕವಿವರ್ಯರ ಹಾಗೂ ಶಿಲ್ಪಾಚಾರ್ಯರ ರಂಗ ಭೂಮಿಯಾಗಿ ತನ್ನ ಹಿರಿಮೆಯನ್ನು ಕನ್ನಡ ನಾಡಿನಲ್ಲಿ ಅಷ್ಟೇ ಅಲ್ಲದೆ ಭಾರತದಾಚೆಗೂ ಬಿತ್ತರಿಸಿವೆಂಬ ಮಾತನ್ನು ಬಲ್ಲಿದವರಾದ ತಮಗೆ ನೆನಪಿಗೆ ತರಬೇಕೆಂಬ ಅವಶ್ಯಕತೆ ಇಲ್ಲವೆಂದೇ ನಾನು ಬಯಸುತ್ತೇನೆ.

ಕೆಲ ದಶಕಗಳ ಹಿಂದೆ ನಮ್ಮಲ್ಲಿ ಮೋಡಿ, ಮರಾಠಿ, ಉರ್ದು, ಗುಜರಾಥಿ, ಭಾಷೆಗಳು ಕನ್ನಡಮ್ಮನೊಂದಿಗೆ ಪೋಷಣೆ ಹೊಂದುತ್ತ ಬಂದಿರುವುದು ನಮ್ಮ ವಿಶಾಲ ದೃಷ್ಟಿಯ, ಭಾಷಾ ಬಾಂಧವ್ಯದ ಅರುವಿನ ದ್ಯೋತಕವಾಗಿದೆಯೆನ್ನಬೇಕು. ಇತ್ತಿತ್ತಲಾಗಿ ಇಂಗ್ಲೀಷ ಹಾಗೂ ಹಿಂದಿ ಭಾಷೆಗಳಿಗೂ ಬೆಳವಣಿಗೆಯ ಸೌಲಭ್ಯಗಳು ವ್ಯಾಸಂಗ ಕ್ಷೇತ್ರದಲ್ಲಿ ದೊರೆಯುತ್ತಿವೆಯೆಂಬುದು ಎಲ್ಲರಿಗೂ ಬಲ್ಲ ಮಾತಾಗಿದೆ. ಈ ವಿಚಾರವನ್ನೇ ಉದಾರ ಹೃದಯದಿಂದ ವಿಶಾಲ ದೃಷ್ಟಿಯಿಂದ ನಮ್ಮ ನಾಡಿಗೂ, ದೇಶಕ್ಕೂ ಅನ್ವಯಿಸಬೇಕಾದುದಲ್ಲಿದೆ. ಅಂತರಾಷ್ಟ್ರೀಯ ರಂಗದಲ್ಲಿಯೂ ಸಾಧಿಸಬೇಕೆಂಬುದನ್ನು ತಾವು ವಿವೇಚಿಸಿ, ಈ ವಿಚಾರಧಾರೆಗೆ ಕಳೆತಂದು ಎಲ್ಲರ ಹೃದಯಗಳನ್ನು ಬೆಳಗುವಂತೆ ಮಾಡುವಿರೆಂದು ನಾನು ನೆರೆ ನಂಬಿದ್ದೇನೆ.

ವಿಶ್ವ ಬಾಂಧವ್ಯದ ವಿಚಾರ, ಭಾವೈಕ್ಯದ ವಿಚಾರ, ಮಾನವ ಜನಾಂಗವನ್ನು ಒಂದುಗೂಡಿಸುವುದು ವಿಚಾರ, ಇಷ್ಟೇ ಅಲ್ಲದೆ ಅಂತರ್ ಗ್ರಹಗಳೊಡನೆ ಸ್ನೇಹ ಸಂಬಂಧವನ್ನು ಬೆಳೆಸುವ ವಿಚಾರ ನಡೆದಿರುವಾಗ ಇಂದು ನಾವು ಚರ್ಚಿಸಬೇಕಾದ ವಿಷಯ ಸಕಾಲಿಕವೂ ಮಹತ್ವಪೂರ್ಣವೂ ಆಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಇಂಥ ವಿಚಾರಗಳು ರಾಜಕೀಯ ರಂಗದಮೇಲೆ ಸೆಣಸುವ ರಾಜಕಾರಣಿಗಳಿಂದ ಸಾಧ್ಯವಿಲ್ಲ ಎಂಬ ಮಾತು ಸಂಯುಕ್ತ ರಾಷ್ಟ್ರಸಂಘ ಹಾಗೂ ಅದರ ಮುಖ್ಯ-ಉಪಾಂಗವಾದ ಭದ್ರತಾ ಮಂಡಳದಿಂದ ಸಾಧ್ಯವಾಗದಿರುವದನ್ನು ಇಲ್ಲಿ ನೆನೆಯಬಹುದು. ಆದರೆ ಸಂಯುಕ್ತ ರಾಷ್ಟ್ರಸಂಘದ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ (Unesco) ಚಟುವಟಿಕೆಗಳ ಕೇಂದ್ರದ ಮುಖಾಂತರವಾಗಿ, ವಿಶ್ವಬಾಂಧವ್ಯವು ಬೆಳೆಯುತ್ತಿರುವದು ಗಮನಾರ್ಹವಾಗಿದೆ. ಆಧುನಿಕ ಜಗತ್ತಿಗೆ ಭಾರತದ ಕೊಡುಗೆಯಾದ "ಪಂಚಶೀಲ ತತ್ವವು" ವೈವಿಧ್ಯತೆಯಿಂದ ತುಂಬಿದ ಜಗತ್ತಿನಲ್ಲಿ ಐಕ್ಯತೆಯನ್ನು ಸಾಧಿಸುವ ತಾರಕ ಮಂತ್ರವಾಗಿದೆ. ಮಹತ್ತರವಾದ ಕೃತಿಗಳು, ವಿಚಾರಗಳ,

ಒಂದು ರಾಷ್ಟ್ರಕ್ಕೆ ಸಂಬಂಧಿಸಿದ್ದರೂ, ಅವುಗಳ ಸಾರ ವಿಶ್ವವ್ಯಾಪಿಯಾಗಿಯೇ ಇರುತ್ತದೆ.

ಪ್ರಾಚೀನ ಭಾರತದಲ್ಲಿ ಸಂಸ್ಕೃತ ಹಾಗೂ ದ್ರಾವಿಡ ಭಾಷೆಗಳು ಪ್ರಚಲಿತವಾಗಿದ್ದವೆಂದು ತಿಳಿದುಬರುತ್ತದೆ. ಆದರೆ ಮಾನವನು ತನ್ನ ಉದರ ಪೋಷಣೆಗಾಗಿ ಗುಂಪು ಕಟ್ಟಿಕೊಂಡು ಅಲೆಯತೊಡಗಿದಂತೆ, ಅಲೆದಲೆದು ಅಲ್ಲಲ್ಲಿ ನೆಲೆಸಿದಂತೆ ತನ್ನ ಪರಿಸರಣ ಹಾಗೂ ನೂತನ ವಾದ ಜೀವನಕ್ಕೆ ಹೊಂದಿಕೊಂಡು ಹೋಗುವಾಗ್ಗೆ ಹೊಸ ಹೊಸ ಭಾಷೆಗಳು ಹುಟ್ಟಿಕೊಂಡವೆಂದು ತೋರುತ್ತದೆ. ಹೀಗೆಯೇ ಪ್ರಸ್ತುತ ಪ್ರಚಲಿತವಿರುವ ಅನೇಕ ಭಾಷೆಗಳು, ಉಪಭಾಷೆಗಳು ಹುಟ್ಟಿಕೊಂಡು ಬಂದವೆಂಬುದು ಎಲ್ಲರೂ ಒಪ್ಪಲೇಬೇಕಾದ ಮಾತು.

ಭಾಷೆ ಮಾನವನ ಮನೋ ವ್ಯಾಪಾರಗಳನ್ನು ವ್ಯಕ್ತಪಡಿಸುವ ಸಾಧನೆಯೆಂದು ಬಲ್ಲವರ ಬಲ್ಲಮಾತು. ಮನುಷ್ಯನು ತನ್ನ ಅನುಭವಗಳನ್ನು, ಅನಿಸಿಕೆಗಳನ್ನು, ಭಯ–ಭಕ್ತಿಗಳನ್ನು, ಪ್ರಾರ್ಥನೆ–ಕೃತಜ್ಞತೆಗಳನ್ನು ದೌರ್ಜನ್ಯ–ದೌರ್ಬಲ್ಯತೆಗಳನ್ನು, ರಾಗ–ವಿರಾಗಳನ್ನು, ಭೋಗ ತ್ಯಾಗಗಳನ್ನು, ರತಿ–ವಿರತಿ ಭಾಗಗಳನ್ನು ಕೇವಲ ಶಾಬ್ದಿಕವಾಗಿ ವ್ಯಕ್ತಪಡಿಸುವದಲ್ಲದೆ, ಅವು ಮುಂದಿನ ಪೀಳಿಗೆಗೆ ಮಾರ್ಗದರ್ಶಕವಾಗಲೆಂದು, ದಾರಿದೀಪವಾಗಲೆಂದು ಬರವಣಿಗೆಯಲ್ಲಿ ಅಮೌಲ್ಯವಾದ ನಿಧಿಯ ರೂಪದಲ್ಲಿ ನಮ್ಮ ಹಿಂದಿನ ಹಿರಿಯರು ಅರ್ಪಿಸುತ್ತ ಬಂದಿದ್ದಾರೆ. ಈ ವಿಚಾರ ಸರ್ವಕಾಲದಲ್ಲಿಯೂ ದೇಶ, ಭಾಷೆ, ಜನಾಂಗಗಳಿಗೂ ಅನ್ವಯಿಸುತ್ತದೆಂಬುದು ಸರ್ವಮಾನ್ಯವಾಗಿದೆ.

ಮಾನವನು ಅವನು ಎಲ್ಲಿಯೇ ಇರಲಿ, ಯಾವ ಬುಡಕಟ್ಟಿನವನೇ ಇರಲಿ– ಅವನ ಮನೋ ವ್ಯಾಪಾರಗಳು ಒಂದೇ ಹೃದಯದ ತಂತಿಯನ್ನು ಮಿಡಿಯುವದೆಂದಮೇಲೆ ಆ ತಂತಿ ಯಾವ ಧಾತುವಿನಿಂದಲೂ ಆಗಿರಬಹುದು– ಅದರ ಗಾತ್ರ ಹೇಗಾದರೂ ಎಷ್ಟಾದರೂ ಇರಬಹುದು– ಆದರೆ ಅದು ಮಿಡಿಯುವದು ಮಾನವನ ಹೃದಯವೆಂಬ ಮಾತು ಮಾತ್ರ ನಿತ್ಯ ಸತ್ಯವಾಗಿದೆ. ಈ ಮಿಡಿತ ಯಾವ ಭಾಷೆಯ ಮುಖಾಂತರವಾಗಿ ಬಂದರೂ ಅದರ ಭಾವ ಮಾತ್ರ ಒಂದೇ ಆಗಿದೆ. ಆನಂದ–ದುಃಖ; ಸಂವೇಗ ಮೊದಲಾದುವುಗಳನ್ನು ಯಾವ ಭಾಷೆಯಲ್ಲಿ ವ್ಯಕ್ತ ಪಡಿಸಿದರೂ ಅವುಗಳ ಪರಿಣಾಮ ಒಂದೇ. ಅದು ನೇರವಾಗಿ ಹೃದಯಕ್ಕೆ ತಟ್ಟುವಂಥದ್ದು. ಭ್ರಮರವು ಎಲ್ಲ ಹೂಗಳಿಂದ ಮಕರಂದವನ್ನು ಕೂಡಿಸಿ ಮಧುವನ್ನು ತಯಾರಿಸುವಂತೆ ವಿವಿಧ ಭಾಷಾ ಪಂಡಿತರು, ತಮ್ಮ ಸಣ್ಣದಾದ ಇಲ್ಲವೆ ದೊಡ್ಡದಾದ ಸಾಹಿತ್ಯಗಳಲ್ಲಿ ಹುದುಗಿದ ಸತ್ಯವನ್ನು ಸತ್ವವನ್ನು ಒಂದುಗೂಡಿಸಿ ಮಾನವ ಕೋಟಿಗೆ ಅದರ ಬೆಳಕನ್ನು ಕೊಡಬೇಕು.

ನರ್ಮದೆಯ ದಕ್ಷಿಣಕ್ಕೆ ದ್ರಾವಿಡ ಭಾಷೆ ಪಂಚದ್ರಾವಿಡವಾಗಿ, ತಮಿಳು, ತೆಲುಗು, ಕನ್ನಡ, ತುಳು, ಮಲಯಾಳ ಹೀಗೆ ಕವಲೊಡೆದರೂ ಅವು ಪರಸ್ಪರ ಸಂಬಂಧವನ್ನು ಬೆಳೆಸಿಕೊಂಡು ಬಂದುದು ಮಹತ್ಪೂರ್ಣವಾಗಿದೆ. ಭಾಷೆಯ ದೃಷ್ಟಿಯಿಂದ ಕನ್ನಡ, ತಮಿಳು, ಲಿಪಿಯ ದೃಷ್ಟಿಯಿಂದ ಕನ್ನಡ, ತೆಲುಗುಗಳಲ್ಲಿ ಸಾಮ್ಯತೆ ಇಂದಿಗೂ ಕಂಡು ಬರುತ್ತಿರುವುದು ಇವುಗಳ ಏಕತ್ವವನ್ನು ಸೂಚಿಸುತ್ತದೆ. ಮರ, ಅಮ್ಮ, ಕಣ್, ಕಾಲ, ತಲೆ, ಕೈ ಮುಂತಾದ ನಾಮಪದಗಳೂ, ಬಾ, ಹೋಗು ಮುಂತಾದ ಕ್ರಿಯಾಪದಗಳಲ್ಲಿಯೂ, ಬ್ರಹ್ಮ, ಬಸವ ಮುಂತಾದ ದೇವತೆಗಳ ಹೆಸರುಗಳಲ್ಲಿಯೂ, ಒಂದು ಎರಡು ಮೊದಲಾದ ಸಂಖ್ಯಾವಾಚಕಗಳಲ್ಲಿಯೂ ಸಾಮ್ಯತೆಯು ಒಡೆದೆದ್ದು ಕಾಣುವದು ಅರಿತ ಮಾತಾಗಿದೆ.

ಆರ್ಯಾವರ್ತದ ಭಾಷೆ ಸಂಸ್ಕೃತವಾಗಿದ್ದರೂ ಧರ್ಮ, ಸಂಸ್ಕೃತಿ, ಸಾಹಿತ್ಯಗಳಿಗೆಲ್ಲ ಸಂಸ್ಕೃತವೇ ಮಾತೃಸ್ಥಾನದಲ್ಲಿದೆಯೆಂದೆನಿಸಿದರೂ ಆಗಿನ ಗ್ರಾಮ್ಯ ಭಾಷೆಗಳೆಂದು ಕರೆಯಬಹುದಾದ ಪ್ರಾಕೃತ ಭಾಷೆಯ ಪ್ರಬೇಧಗಳಾದ ಮಾಗಧಿ, ಅರ್ಧಮಾಗದಿ, ಪಾಲಿ, ಪೈಶಾಚಿಕ ಮೊದಲಾದ ಪುರಾತನ ಭಾಷೆಗಳೂ, ಅರ್ವಾಚೀನ ಭಾಷೆಗಳಾದ ಉತ್ತರ ಭಾರತದ ಇನ್ನಿತರ ಭಾಷೆಗಳೂ ಸಂಸ್ಕೃತ ಜನ್ಯಭಾಷೆಗಳೆಂದೂ, ಮಾತೃ ಭಾಷೆಯ ಕಾರ್ಯವನ್ನೇ ಗುರಿಯನ್ನಾಗಿಟ್ಟುಕೊಂಡು ಸಾಕಷ್ಟು ಪ್ರಗತಿ ಪಥದಲ್ಲಿ ಅಡಿಯನ್ನಿಟ್ಟವೆಯೆಂದೂ, ಅಡಿಯನ್ನಿಡಹತ್ತಿವೆಯೆಂದೂ ಕಂಡು ಬರುತ್ತಿದೆ.

ಸಂಸ್ಕೃತ ಜನ್ಯಯಾವ ಭಾಷೆಯನ್ನು ಅಭ್ಯಾಸ ಮಾಡುವಾಗಲೂ, ಮಾತೃಭಾಷೆಯ ಮೂರ್ತಿ ಎದುರಿಗೆ ಬರದಿರದು, ಅಂತೆಯೇ ದ್ರಾವಿಡ ಜನ್ಯ ಪಂಚ ದ್ರಾವಿಡ ಭಾಷೆಗಳಲ್ಲಿ ಯಾವದೊಂದನ್ನು ಓದುವಾಗಲೂ ಮಾತಾಡುವದನ್ನು ಕೇಳುವಾಗಲೂ ಪರಸ್ಪರ ದ್ರಾವಿಡ ಭಾಷೆಗಳಲ್ಲಿಯ ಸಂಬಂಧ ವಿದಿತವಾಗದಿರದು. ಇದೇ ವಿಚಾರವನ್ನು ಇನ್ನಷ್ಟು ಮುಂದೊರಿಸಿದಾಗ ಇಂಗ್ಲೀಷು ಭಾಷೆಯಲ್ಲಿ ಅದರ ಪೋಷಕಭಾಷೆಗಳ ಅಂತಃಶಕ್ತಿ ಹಾಗೂ ಮೆರಗು ಕಾಣದಿರದು. ಭಾರತದ ದಕ್ಷಿಣೋತ್ತರಗಳ ಕಲ್ಪನೆ ಅಳಿದು ಭಾರತದ ಸೀಮೆ ಆಸೇತು ಹಿಮಾಚಲವಾದಾಗ

ಜನಾಂಗಗಳ, ಭಾಷೆಗಳ ಸಾಮರಸ್ಯ ಬೆಳೆವಹಾಗೆ, ಸಾಹಿತ್ಯ ಸಂಸ್ಕೃತಿಗಳ ಸಂಗಮವಾದಾಗ ದ್ರಾವಿಡ ಭಾಷೆಗಳು ತಮ್ಮ ಬೆಡಗನ್ನು, ಅಂದ ಚೆಂದವನ್ನು, ವೈಭವವನ್ನು, ಸಂಸ್ಕೃತದ ಅಮೌಲ್ಯವಾದ ಹೊಂದೊಡಿಗೆಗಳಿಂದ ಅಲಂಕೃತವಾಗಿ ಕಳೆಯೇರಲು ಸಾಧ್ಯವಾಯಿತು. ಹೀಗೆಯೇ ಇಂದು ಸಾಹಿತ್ಯಮಟ್ಟಕ್ಕೇರಿದ ಹದಿನಾಲ್ಕು ಭಾಷೆಗಳು ನಮ್ಮ ಭಾರತದ ರಾಜ್ಯ ಘಟನೆಯಲ್ಲಿ ವಿದಿತವಾಗಿದೆ. 'ತನು ಬೇರೆಯಾದರೂ ಮನವೊಂದು' ಎಂಬ ಉಕ್ತಿಯಂತೆ ಎಲ್ಲ ಭಾಷೆಗಳ ಅಂತಃಶಕ್ತಿ ಒಂದೇಯಾಗಿದೆ ಎಂಬುದು ನಿರ್ವಿವಾದವಾದ ಮಾತಾಗಿದೆ.

ಸಾಹಿತ್ಯಶಕ್ತಿಯು ಹಿಂದಿನ ಸಂಸ್ಕೃತಿಗೆ ಧ್ವನಿಗೊಡುವ, ಇಂದಿನದನ್ನು ಪ್ರಕಟಿಸುವ, ಮುಂದಿನದನ್ನು ಮಾರ್ಪಡಿಸುವ ಒಂದು ಆದರ್ಶವನ್ನು ಇಟ್ಟುಕೊಳ್ಳುವದಾಗಬೇಕು. ಜಗತ್ತಿನ ಭಾಷೆಗಳಲ್ಲಿ ಶಬ್ದ, ಪದ, ಭಾವ, ಅಲಂಕಾರ, ಸೌಂದರ್ಯ ಮೊದಲಾದವುಗಳೆಲ್ಲ ಬೆಳೆದು, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸ್ಥಾನಮಾನ ಭಾಷೆಗಳಾಗಬೇಕು. ಸಂಸ್ಕೃತದಲ್ಲಿ ವೇದಗಳು, ನಾಟಕಗಳು ಪಂಚತಂತ್ರದ ನೀತಿಯ ಕಥೆಗಳು ಜಗತ್ತಿನ ವಿವಿಧ ಭಾಷೆಗಳಲ್ಲಿ ಬೆಳಕಿಗೆ ಬಂದಿವೆ. ಸಂಸ್ಕೃತದ ಕಾಂತಿಯಲ್ಲಿಯೇ ಹಿಂದಿಯು ರಾಷ್ಟ್ರಭಾಷೆಯಾಗಿ ದಿನೇ ದಿನೇ ಅಭಿವೃದ್ಧಿ ಹೊಂದಹತ್ತಿದೆ; ಭಾರತೀಯರ ಐಕ್ಯದ ಮುಖ್ಯ ಸಾಧನವಾಗಹತ್ತಿದೆ. ಉರ್ದು ಭಾಷೆಯು ಕಳೆದ ನಾಲ್ಕೈದು ಶತಮಾನಗಳಿಂದ ಬಂದಿದ್ದರೂ, ಜನಾಬ ಮೀರ ಅನಿಸ, ಗಾಲಿಬ ಮೊದಲಾದ ಕವಿಗಳ ಕೃತಿಗಳಿಂದ ಸರ್ವೋತ್ತಮ ಭಾಷೆಗಳಲ್ಲಿ ಒಂದಾಗಿದೆ. ಬೆಂಗಾಲಿಯು ರವೀಂದ್ರರ ಗ್ರಂಥಗಳಿಂದಲೂ, ಶರಚ್ಚಂದ್ರರ ಕಾದಂಬರಿಗಳಿಂದಲೂ ಅಮರವಾಗಿದೆ. ಗುಜರಾಥಿಯಲ್ಲಿ ಮಹಾತ್ಮಾಜಿಯವರ ಆತ್ಮಚರಿತ್ರೆ, ಮರಾಠಿಯಲ್ಲಿ ಟಿಳಕರ ಗೀತಾರಹಸ್ಯಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಗೌರವ ದೊರಕಿದೆ. ಕನ್ನಡದ ವಚನ ಸಾಹಿತ್ಯವು ಅಂತರಾಷ್ಟ್ರೀಯ ಸಾಹಿತ್ಯದ ಸ್ಥಾನದಲ್ಲಿ ಉನ್ನತಸ್ಥಾನ ಗಳಿಸಿಕೊಳ್ಳಹತ್ತಿದೆ. ಆಂಗ್ಲ ಸಾಹಿತ್ಯದ ಸಣ್ಣಕಥೆಗಳು, ಭಾವಗೀತೆಗಳು ನಮ್ಮ ಭಾರತೀಯ ಭಾಷೆಗಳಲ್ಲಿ ಪ್ರಭಾವ ಬೀರಿವೆ. ಹೀಗೆಯೇ ಸಾಹಿತ್ಯ ರಂಗದಲ್ಲಿ ಪರಸ್ಪರ ಭಾಷಾಬಾಂಧವ್ಯ ಬೆಳೆದು ಅವುಗಳಲ್ಲಿ ಹೊರಸೂಸುವ ಸೌರಭ, ಸುಗಂಧಗಳಿಂದ ನಾವು ಆನಂದ ಪಡೆಯುತ್ತಿದ್ದೇವೆ. ಪ್ರತಿಯೊಂದು ನುಡಿಯು ಯಾವ ಭಾಷೆಯದೆ ಇರಲಿ ಅದು

" ನುಡಿದರೆ ಮುತ್ತಿನ ಹಾರದಂತಿರಬೇಕು |
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು |
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು |
ನುಡಿದರೆ ಲಿಂಗಮೆಚ್ಚಿ ಅಹುದೆನ್ನಬೇಕು " ||

ಎಂದು ಅಣ್ಣ ಬಸವಣ್ಣನವರು ಹೇಳಿದಂತೆ ಪ್ರೌಢಿಮೆ ಪ್ರತಿಭೆಗಳಿಂದ ಕೂಡಿಕೊಂಡಿರಬೇಕು. ಸ್ವಯಂ ಜ್ಯೋತಿಯಾಗಿರಬೇಕು. ಅಂಥ ನುಡಿಗಳನ್ನೊಳಗೊಂಡ ಭಾಷೆಗಳಿಗೆ, ಅವುಗಳ ಸಾಹಿತ್ಯಕ್ಕೆ ಗೌರವ, ಉಚ್ಚಸ್ಥಾನಗಳು ದೊರೆಯದೆ ಇರಲಾರವು. ಅಂಥ ಭಾಷೆಗಳಲ್ಲಿ ಬರೆದ ಕೃತಿಗಳು ಅಮರವಾದವುಗಳು. ಶಾಸ್ವತವಾದವುಗಳು ; ಚಿರನೂತನವಾದವುಗಳು. ಕಾಳಿದಾಸನ ಹಾಗೂ ಶೇಕ್ಸಪಿಯರನ ನಾಟಕಗಳು ಒಂದು ರಾಷ್ಟ್ರಕ್ಕೆ ಒಂದು ಜನಾಂಗಕ್ಕೆ ಸಂಬಂಧಿಸಿದ ಸಾಹಿತ್ಯರತ್ನಗಳಾಗಿರದೆ, ವಿಶ್ವ ವ್ಯಾಪಕತೆಯನ್ನು ಪಡೆದ ಅಮೋಘ ಕೃತಿಗಳೆಂಬುದನ್ನು ನಾವು ಮರೆಯಬಾರದು.

ಮಾನ್ಯರೇ, ಭಾಷೆಗಳ ಅಂತಃಶಕ್ತಿಯು ಒಂದೆಂದು ಒಡೆದು ಕಾಣುವಾಗ, ಭಾಷೆ ಮಾನವನ ಮನೋವ್ಯಾಪಾರಗಳ ವಾಹಕವೆಂದು ಒಪ್ಪಿಕೊಂಡಾಗ ಮಾನವರಾದ ನಾವುಗಳೆಲ್ಲ, ಮನುಕುಲಕ್ಕೆ ಸೇರಿದವರೆಂದಮೇಲೆ ವಿಶ್ವಬಾಂಧವ್ಯ, ಮಾನವ ಕುಟುಂಬಗಳೆಂಬ ಆದರ್ಶಗಳನ್ನು ಮುಂದಿಟ್ಟುಕೊಂಡಿರುವಾಗ, ಭಾಷೆ ಭಾಷೆಗಳ ನಾಡು ನಾಡುಗಳ ತರತಮ ಭಾವನೆಗಳನ್ನು ತೊರೆದು, ಎಲ್ಲ ಭಾಷೆಗಳ, ಎಲ್ಲ ಸಾಹಿತ್ಯಗಳ ಗುರಿಯು ಒಂದೇಯಾಗಿರುವಾಗ ನಮ್ಮ ಸರಕಾರವು ಸರ್ವಭಾಷೆಗಳಿಗೂ ಬೆಳೆಯಲು ಅನುವುಮಾಡಿ ಮಾಡಿಕೊಡುತ್ತಿರುವಾಗ, ಪ್ರತಿ ಭಾಷೆಯ ಮಹೋನ್ನತ ಕೃತಿಗಳನ್ನು ಇತರ ಭಾಷೆಗಳಿಗೂ ತರ್ಜುಮೆಗೊಳಿಸಿ, ಅದರ ರಸದೂಟವನ್ನು ಎಲ್ಲರಿಗೂ, ಉಣಬಡಿಸಲು ಪ್ರಯತ್ನಿಸುತ್ತಿರುವಾಗ ವಿವಿಧ ಭಾಷೆಗಳ ಸಾಹಿತ್ಯದಲ್ಲಿ ಐಕ್ಯತೆಯನ್ನು ತಂದುಕೊಳ್ಳುವದು, ಕೊನೆಗೆ ಐಕ್ಯತೆಯನ್ನು ತರುವದಕ್ಕೆ ಬದ್ಧಕಂಕಣರಾಗಲು ಈಗ ಸೇರಿರುವ ಈ ವಿದ್ವತ್‌ಸಭೆಯು ಶ್ರಮಿಸುವದೆಂದೂ, ಮಾರ್ಗದರ್ಶನ ಮಾಡುವದೆಂದೂ ನಾನು ಹಾರೈಸಿ, ಇನ್ನೊಮ್ಮೆ ಸ್ಥಾನಿಕ ಸ್ವಾಗತ ಸಮಿತಿಯ ಪರವಾಗಿ ಸುಸ್ವಾಗತವನ್ನು ಕೋರಿ ಗುರುತರವಾದ ಮುಂದಿನ ಕಾರ್ಯಕ್ರಮಕ್ಕೆ ಅನುವು ಮಾಡಿಕೊಡಲು ಬಯಸುತ್ತೇನೆ.

ಪ್ರಾಸ್ತಾವಿಕ ಭಾಷಣ

ಪ್ರಾಸ್ತಾವಿಕ ಭಾಷಣ ಮಾಡುತ್ತಾ ಡಾ|| ಆರ್. ಸಿ. ಹಿರೇಮಠ ಅವರು ಹೀಗೆ ನುಡಿದರು.

ಕ್ರಿ.ಶ. ೧೦೨ನೆಯ ವರ್ಷದ ಶಾಸನವೊಂದರಲ್ಲಿ[೧] ಗದುಗನ್ನು 'ಕರ್ದುಗು' ಎಂದು ಕರೆದಿರುವರು. ಇದು ರೂವಾರಿಯ ದೋಷವಲ್ಲವೆಂಬಂತಿದೆ. ಏಕೆಂದರೆ ಅದೇ ಶಾಸನದಲ್ಲಿ ನಾಲ್ಕು ಸಲ ಈ ಊರ ಹೆಸರು 'ಕರ್ದುಗು' ಎಂದೇ ಬಂದಿದೆ. ಕ್ರಿ. ಶ. ೧೧೦೨ ನೆಯ ಇಸ್ವಿಯ ಗದುಗಿನ ಇನ್ನೊಂದು ಶಾಸನದಲ್ಲಿ ಈ ಊರನ್ನು 'ಗಬ್ದುಗು' ಎಂದೂ ಕರೆಯಲಾಗಿದೆ.[೨] ನೆರೆಯ ಬೆಟಗೇರಿಯ ಹೆಸರು ಕ್ರಿ. ಶ. ೮೯೩ ನೆಯ ವರ್ಷದ ಶಾಸನವೊಂದರಲ್ಲಿ[೩] 'ಒಟ್ಟಕೆಱೆ' ಎಂದಿದೆ.

ಗದುಗಿನ ಸುತ್ತುಮುತ್ತಣ ಪ್ರದೇಶವು 'ಬೆಳ್ವೊಲ ಮೂನೂಱು' ಎಂದು ಶಾಸನದಲ್ಲಿ ನೆಗಳ್ತೆವಡೆದಿದೆ. 'ಬೆಳ್ವೊಲ ನಾಡೊಳಗಣ ಅಗ್ರಹಾರ ಕರ್ದುಗು....' ಎಂದು ಇಲ್ಲಿಯ ತ್ರಿಕೂಟೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಶಾಸನದಲ್ಲಿ[೩] ಬಂದಿದೆ. 'ಬೆಳ್ವೊಲ ಮೂನೂಱು' ನೆರೆಯ ಪ್ರಾಂತ 'ಪುಲಿಗೆಱೆಯ ಮೂನೂಱು.' 'ಕನ್ನಡಮೆರಡಱುನೂಱು ಕನ್ನಡಮಾತಿರುಳ ಕನ್ನಡಂ[೪]' ಎಂದು ಖ್ಯಾತಿಗೊಂಡಿರುವ 'ಎರಡಱುನೂಱು ಕನ್ನಡ' 'ಬೆಳ್ವೊಲ ಮೂನೂಱು' ಪುಲಿಗೆಱೆ 'ಮೂನೂಱು' ಇವುಗಳ ಕನ್ನಡಕ್ಕೆ ಅನ್ವಯಿಸುತ್ತದೆ. 'ಬೆಳ್ವೊಲ ಮೂನೂಱುಮಂ ಪುಲಗೆಱೆ ಮೂನೂಱುಮನಂತೆರಡಱು ನೂಱುಮಂ' ಎಂದು ಶಾಸನಗಳಲ್ಲಿ[೫] ಸ್ಪಷ್ಟವಾಗಿ ಹೇಳಲಾಗಿದೆ. ಗದಗು ನಗರವನ್ನೊಳಗೊಂಡ 'ಬೆಳ್ವೊಲ ಮೂನೂಱು' ಪ್ರಾಂತ ಇತಿಹಾಸ ಪ್ರಸಿದ್ಧವಾಗಿದೆ. ಈ ನಗರದ ನೆರೆಹೊರೆಯ ಬೆಂತೂರು, ಮೇವುಂಡಿ ಸರಟವೂರು (ಸೊರಟೂರು), ಗಾವರವಾಡ (ಗಾರವಾಡ), ಸಿಸುಳಹಾಳ (ಶಿಶುವಿನಹಳ್ಳಿ) ಮೊದಲಾದ ಸ್ಥಳಗಳಲ್ಲಿ ಅನುಕ್ರಮವಾಗಿ ರಾಷ್ಟ್ರಕೂಟ ದೊರೆ ನೃಪತುಂಗನ ಕಾಲದ ಕ್ರಿ. ಶ. ೮೬೪, ೮೬೫, ೮೬೭, ೮೬೯, ೮೭೨'ರ ಶಾಸನಗಳು ದೊರೆತಿವೆ. ಶಿಶುವಿನಹಳ್ಳಿಯಲ್ಲಿ ಅಯ್ವದಿಂಬರು ಮಹಾಜನರು ಶ್ರುತಿ, ಸ್ಮೃತಿ, ವ್ಯಾಕರಣ, ಕಾವ್ಯ, ನಾಟಕ, ತರ್ಕ, ಆಗಮಗಳಲ್ಲಿ ಬ್ರಹ್ಮನಿಗೆ ಸರಿಸಮಾನರಾಗಿದ್ದರಂತೆ.[೬] ಚಿಂಚಲಿಯಲ್ಲಿ ೫೬ ಜನ ಮಹಾಜನರು ಇದ್ದರಂತೆ. 'ಬೆಳ್ವೊಲ ಮೂನೂಱು' ಭಾಗವು ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣನ ಮಹಾಮಾಂಡಲಿಕ ಪೆರ್ಮಾಡಿ ಬೂತರಾಯನ ಆಳಿಕೆಗೆ ಒಳಗಾಗಿತ್ತೆಂದು ರೋಣದ ಶಾಸನದಿಂದ ತಿಳಿದು ಬರುತ್ತದೆ. ಈ ಬೂತರಾಯನೆಂದರೆ ಗಂಗಮನೆತನದ ಪ್ರಸಿದ್ಧ ಬೂತುಗನು. ಆತನು ಗಂಗವಾಡಿ ೯೬೦೦೦, ಬೆಳ್ವೊಲಮೂನೂಱು, ಪುಲಿಗೆಱೆ ಮೂನೂಱು ಪ್ರಾಂತಗಳನ್ನು ಕ್ರಿ. ಶ. ೯೪೨ರಲ್ಲಿ ಆಳುತ್ತಿದ್ದನೆಂದು ಅದೇ ಶಾಸನ ಹೇಳುತ್ತದೆ.[೭] ಈ ಗಂಗ ಬೂತುಗನು ಕ್ರಿ. ಶ. ೯೪೬ರಲ್ಲಿ ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣನ ಮಾಂಡಲಿಕನಾಗಿ 'ಬೆಳ್ವೊಲ ಮೂನೂಱು' 'ಪುಲಿಗೆಱೆ ಮೂನೂಱು' ಭಾಗಗಳನ್ನು ಆಳುತ್ತಿದ್ದುದು ಕುರ್ತಕೋಟಿಯ ಶಾಸನದಲ್ಲಿ ವ್ಯಕ್ತವಾಗಿದೆ.[೮] ಬೂತುಗನ ರಾಜ್ಯವು ಪೆರ್ದೊರೆಯವರೆಗೆ (ಕೃಷ್ಣಾನದಿಯವರೆಗೆ) ಹಬ್ಬಿತ್ತೆಂದು ನರೇಗಲ್ಲ ಶಾಸನ ಹೇಳುತ್ತದೆ.[೯] ಬೆಳ್ವೊಲ ಮೂನೂಱು ಪ್ರಾಂತವು ರಾಷ್ಟ್ರಕೂಟ ಕೊಟ್ಟಿಗದೇವನ ಆಳಿಕೆಯೊಳಗೆ ಕ್ರಿ. ಶ. ೯೭೦ರಲ್ಲಿ ಆತನ ಮಾಂಡಲಿಕ ಗಂಗ ಮಾರಸಿಂಘ ಪೆರ್ಮಾಡಿಯ ಆಳಿಕೆಗೆ ಒಳಗಾಗಿತ್ತೆಂದು ಹಿರೇಹಂದಿಗೋಳ ಶಾಸನದಿಂದ ತಿಳಿದುಬರುತ್ತದೆ.[೧೦] ರಾಷ್ಟ್ರಕೂಟರನ್ನು ಜಯಿಸಿ ಅವರ ಉತ್ತರಾಧಿಕಾರಿಗಳಾಗಿ ಬಂದ ಕಲ್ಯಾಣ ಚಾಲುಕ್ಯರ ಆಳಿಕೆಗೆ ಬೆಳ್ವೊಲ ಮೂನೂಱು ಪ್ರಾಂತವು ಒಳಗಾಗಿದ್ದಿತು. ಮಹಾಕವಿ ರನ್ನನಿಗೆ ಆಶ್ರಯದಾತನಾದ ಕಲ್ಯಾಣ ಚಾಲುಕ್ಯ ದೊರೆ ಇಱಿವ ಬೆಡಂಗದೇವನ ಕಾಲದ ಒಂದು ಶಾಸನವು ಗದುಗಿನ ತ್ರಿಕೂಟೇಶ್ವರ ದೇವಾಲಯದ

---

೧ Bombay Karnatak Inscriptions Vol, I Part I No. 10
೨ ,, ,, ,, No. 5 of 1926—27
೩ ,, ,, ,, No. 20 of 1926—27
೪ ಗದಾಯುದ್ಧ ಆ ೧. ಪ ೪೨
೫ Epigraphica Indica XV P. 339
೬ B. K. No. 246 of 1928—29
೭ ,, ,, ,, 175 of 1926—27
೮ ,, ,, ,, 126 of 1926—27
೯ ,, ,, ,, 182
೧೦ ,, ,, ,, 149

ಪ್ರಾಕಾರದಲ್ಲಿದೆ.೧೧ ಇಜಿುವ ಬೆಡಂಗದೇವನ ಪಾದ ಪದ್ಮೋಪಜೀವಿ ಮಹಾಸಾಮಂತ ಸೋಭನರಸರು 'ಬೆಳ್ವೊಲ ಮೂನೂಱು' 'ಪುರಿಗೆಱೆ ಮೂನೂಱು' 'ಕುಣ್ಡೂರ್ರೈನೂಱು' 'ಕುಕ್ಕನೂಱು ಮೂವತ್ತು' ಈ ಭಾಗಗಳನ್ನು ಆಳುತ್ತಿದ್ದನು. ಆತನು ಕ್ರಿ. ಶ. ೧೦೦೨ ನೆಯ ಇಸ್ವಿಯ ಆದಿತ್ಯವಾರ "ಬೆಳ್ವೊಲ ನಾಡೊಳಗಣ ಅಗ್ರಹಾರ ಕರ್ದುಗಿನ ಸ್ವಯಂಭುದೇವರ ದೇಗುಲದ ಪೂಲಿಯ ಪಂಡಿತರ ವಿದ್ಯಾಶಿಷ್ಯಕ್ರೋಪಿನ ವಖ್ಖಾಣ ಜೀಯರ ಶಿಷ್ಯರಪ್ಪ ವಖ್ಖಾಣ ಜೀಯರ್ಗೆ ಧಾರಾಪೂರ್ವಕಂ ವಿದ್ಯಾದಾನವಾಗೆ...." ದತ್ತಿಯನ್ನು ಬಿಟ್ಟು ಕೊಟ್ಟಿರುವನು. ತ್ರಿಕೂಟೇಶ್ವರ ದೇವಾಲಯದಲ್ಲಿ ಸ್ವಯಂಭೂ ಸೋಮನಾಥಲಿಂಗ ನೆಲೆಸಿರುವುದು ಗಮನಾರ್ಹವಾಗಿದೆ.೧೨ ತ್ರಿಕೂಟೇಶ್ವರ ದೇವಾಲಯದಲ್ಲಿ ಸೋಮನಾಥ ಲಿಂಗವಿದ್ದುದು ಈಗ ಯಾರ ಕಲ್ಪನೆಯಲ್ಲಿಯೂ ಇಲ್ಲ. ಸಾಮಾನ್ಯವಾಗಿ ತ್ರಿಕೂಟೇಶ್ವರ ಎಂಬ ಹೆಸರೇ ರೂಢವಾಗಿದೆ. ಈ ತ್ರಿಕೂಟೇಶ್ವರ ದೇವಾಲಯದೊಳಗಿರುವ ಕ್ರಿ.ಶ. ೧೧೦೨ ನೆಯ ವರ್ಷದ ಇನ್ನೊಂದು ಶಾಸನದಿಂದ ಈ ದೇವಾಲಯದ ಬಗೆಗೆ ಅತ್ಯಂತ ಗಮನಾರ್ಹವಾದ ವಿಷಯಗಳು ತಿಳಿದು ಬರುತ್ತವೆ. ಗದುಗಿನ ಸ್ವಯಂಭೂ ತ್ರಿಕೂಟೇಶ್ವರ ದೇವಾಲಯದ ಸೋಮನಾಥ ದೇವರಿಗೆ ಆ ದೇವಾಲಯಕ್ಕೆ ಸಂಬಂಧಪಟ್ಟ ಮಠದ ಸಾವಾಸಿಗಳಾದ ಕ್ರಿಯಾಶಕ್ತಿ ಪಂಡಿತಾಚಾರ್ಯರ ಪಾದವನ್ನು ತೊಳೆದು ದತ್ತಿಯನ್ನು ಬಿಡಲಾಗಿದೆ. ಇದರಿಂದ ತ್ರಿಕೂಟೇಶ್ವರ ದೇವಾಲಯ ಹಾಗೂ ಅದಕ್ಕೆ ಸಂಬಂಧಪಟ್ಟ ಮಠ ಇವು ಕಾಳಾಮುಖ ಪಂಥಕ್ಕೆ ಸೇರಿದ್ದವೆಂದು ಸಿದ್ಧವಾಗುತ್ತದೆ. ಏಕೆಂದರೆ ಕ್ರಿಯಾಶಕ್ತಿಪಂಡಿತ ಎಂಬ ಹೆಸರು ಕಾಳಾಮುಖ ಆಚಾರ್ಯರಿಗೆ ಮಾತ್ರ ಇದ್ದುದಾಗಿ ಶಾಸನಗಳಿಂದಲೂ ಸಾಹಿತ್ಯದಿಂದಲೂ ವಿದಿತವಾಗುತ್ತದೆ. ಕಾಳಾಮುಖ ಪಂಥವು ವೀರಶೈವ ಧರ್ಮದ ಪುನರುತ್ಥಾನವಾದೊಡನೆ ಅದರಲ್ಲಿ ಸಮಾವೇಶವಾಗಿದೆ. ಅವರ ಮಠಗಳೂ ದೇವಾಲಯಗಳೂ ವೀರಶೈವರಲ್ಲಿ ಪರಿವರ್ತನೆ ಹೊಂದಿವೆ. ಹೂಲಿಯಮಠ, ಕೊಪ್ಪಳ ಗವಿಮಠ, ಮುಂತಾದವು ಇದಕ್ಕೆ ನಿದರ್ಶನ. ಕರ್ನಾಟಕದ ಹಳ್ಳಿಗಳಲ್ಲಿ ಕಾಣುವ ಕೆಲವು ಹಿರಿಯ ಮಠಗಳೂ, ಚಿಕ್ಕಮಠಗಳೂ ಮೊದಲು ಪ್ರಾಯಶಃ ಈ ಪಂಥಕ್ಕೆ ಸೇರಿದ್ದವೆಂದು ತೋರುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಗದುಗಿನ ತ್ರಿಕೂಟೇಶ್ವರ ದೇವಾಲಯದ ಪರಿವರ್ತನೆಯು ತೀರ ಭಿನ್ನರೀತಿಯಾಗಿ ಕಂಡು ಬರುತ್ತದೆ. ಯಾವುದೋ ಒಂದು ಕಾಲದಲ್ಲಿ ಈ ದೇವಾಲಯವು ಕಾಳಾಮುಖರ ಉತ್ತರಧಿಕಾರಿಗಳ ಕೈಬಿಟ್ಟು ಹೋದಂತೆ ಊಹಿಸಬಹುದಾಗಿದೆ. ಇದು ಅವರ ಕೈ ಬಿಟ್ಟೊಡನೆಯೇ ಇಲ್ಲಿರುವ ಸ್ವಯಂಭೂ ಸೋಮನಾಥ ಲಿಂಗದ ಕಲ್ಪನೆಯೂ ಮಾಯವಾಗಿರಬೇಕು. ಇನ್ನು ಈ ದೇವಾಲಯಕ್ಕೆ ಸಂಬಂಧಪಟ್ಟ ಮಠವೇನಾಯಿತು? ತ್ರಿಕೂಟೇಶ್ವರ ದೇವಾಲಯದ ಪೂರ್ವ ದಿಕ್ಕಿನ ಪ್ರಾಕಾರಕ್ಕೆ ಹತ್ತಿ ಹಸಿರು ಕೆರೆಯ ಹತ್ತಿರ ಈ ಊರ ಹಿರಿಯ ಮಠವಿದೆ. ಈ ಮಠವೇ ಪೂರ್ವದಲ್ಲಿ ಕ್ರಿಯಾಶಕ್ತಿ ಪಂಡಿತಾಚಾರ್ಯರ ಮಠವಾಗಿರಬೇಕು. ಒಂದೇ ಸಂಸ್ಥೆಯ ಅಂಗವಾಗಿದ್ದ ಮಠ, ದೇವಾಲಯಗಳೆರಡೂ ಕಾಲಾಂತರದಲ್ಲಿ ಭಿನ್ನ ಭಿನ್ನ ಪಂಥಗಳಿಗೆ ಒಳಪಟ್ಟಂತೆ ತೋರುತ್ತದೆ.

ಹೀಗೆ ಸಂಶೋಧನೆ ಮಾಡುತ್ತ ಹೊರಟರೆ ಗದುಗಿನ ಇತಿಹಾಸದ ಮೇಲೆ ಇನ್ನೂ ಹೆಚ್ಚಿನ ಬೆಳಕು ಬೀಳುವ ಸಂಭವವಿದೆ. ಈಗ ನಾನು ವೀರನಾರಾಯಣ ದೇವಾಲಯ, ತೋಂಟದಾರ್ಯ ಮಠ ಮೊದಲಾದವುಗಳ ಚರಿತ್ರೆಯ ಬಗೆಗೆ ಸಮಯಾಭಾವದ ಮೂಲಕ ಕೈ ಹಾಕುವುದಿಲ್ಲ.

ಇಂದು ಇಂತಹ ಮಹತ್ವದ ನಗರದಲ್ಲಿ ಈ ಸಮ್ಮೇಲನವೂ ಅದರ ಅಂಗವಾದ ಭಾಷಾಬಾಂಧವ್ಯ ಗೋಷ್ಠಿಯೂ ನೆರವೇರುತ್ತಿವೆ. ಭಾಷಾಬಾಂಧವ್ಯ, ಸಾಹಿತ್ಯಬಾಂಧವ್ಯಗಳ ಸಿದ್ಧಿಯನ್ನು ಈ ಊರು ಅನೇಕ ಶತಮಾನಗಳ ಹಿಂದೆಯೇ ಪಡೆದಿದೆಯೆಂದು ಹೇಳಬಹುದು. ಮಹಾಕವಿ ಚಾಮರಸನ ಪ್ರಭುಲಿಂಗಲೀಲೆ ಸಂಸ್ಕೃತ, ತೆಲುಗು, ಮರಾಠಿ ಭಾಷೆಗಳಿಗೆ ಪರಿವರ್ತನೆ ಹೊಂದಿರುವುದು ಭಾಷಾಬಾಂಧವ್ಯದ ದ್ಯೋತಕವಲ್ಲವೆ?

ಭಾಷೆ ಮಾನವಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನಾಡುತ್ತಿದೆ. ಭಾಷೆ ಇಲ್ಲದಿದ್ದರೆ ಜಗತ್ತಿನ ಸ್ಥಿತಿ ಏನಾಗುತ್ತಿತ್ತೆಂಬುದನ್ನು ದಂಡಿಯು ತನ್ನ ಕಾವ್ಯಾದರ್ಶನದಲ್ಲಿ ಹೀಗೆ ಹೇಳಿರುವನು.

> ಇದಮಂಧತಮಃ ಕೃತ್ಸ್ನಂ ಜಾಯೇತ್ ಭುವನತ್ರಯಂ।
> ಯದಿಶಬ್ದಾಹ್ವಯಂ ಜ್ಯೋತಿರಾಸಂಸಾರಂ ನದೀಪ್ಯತೇ ॥

ಭಾಷೆಯೆಂಬ ಜ್ಯೋತಿ ಇಲ್ಲದಿದ್ದರೆ ಭುವನತ್ರಯವೆಲ್ಲ ಕಗ್ಗತ್ತಲೆಯಲ್ಲಿ ಮುಳುಗಿ ಹೋಗುತ್ತಿತ್ತೆಂದು

---

೧೧ B. K. No. 10

೧೨ ಆದಯ್ಯನು ಪುಲಿಗೆಱೆಯಲ್ಲಿ ಕ್ರಿ. ಶ. ೧೧೦೦ರಲ್ಲಿ ಸ್ಥಾಪಿಸಿದ ಸೌರಾಷ್ಟ್ರ ಸೋಮನಾಥನನ್ನು ಸ್ವಯಂಭೂ ಸೋಮನಾಥನೆಂದು ಕರೆಯಲಾಗಿದೆ.

ದಂಡಿಯಮತ. ಪ್ರಭುದೇವರು, 'ಮಾತೆಂಬುದು ಜ್ಯೋತಿಲಿಂಗ'ವೆಂದು ಭಾಷೆಯ ಮಹತಿಯನ್ನು ಬಣ್ಣಿಸಿರುವರು. ಮಾತಿನ ಮರೆಯಲ್ಲಿ ಹುದುಗಿ ಕುಳಿತಿರುವ ಅರ್ಥವೇ ನಮಗೆ ಬೆಳಕು ತೋರುತ್ತದೆಯೆಂದು ಅನುಭಾವಿಗಳ ಮತ. ಅಂತೆಯೇ 'ವಾಕ್' ಎಂಬುದು ನಮ್ಮಲ್ಲಿ ದೇವತ್ವದ ಸ್ವರೂಪವನ್ನು ಪಡೆದಿದೆ. ವಾಕ್, ಇಳಾ, ಸರಸ್ವತಿ, ಭಾರತಿ ಇವೆಲ್ಲ ವಾಗ್ದೇವಿಯ ಪರ್ಯಾಯ ನಾಮಗಳು. ಋಗ್ವೇದದ ಕಾಲದಲ್ಲಿಯೇ 'ವಾಕ್' ದೇವತ್ವದ ಸ್ವರೂಪವನ್ನು ಪಡೆದಿದೆ.

ದೇವೀಂವಾಚಮಜನಯಂತ ದೇವಾಸ್ತಾಂ ವಿಶ್ವರೂಪಃ
ಪಶವೋವದಂತಿ ೧೩

ಎಲ್ಲರೂ ಮಾತನಾಡುವ ವಾಗ್ದೇವಿಯನ್ನು ದೇವತೆಗಳು ನಿರ್ಮಿಸಿದರೆಂದು ಋಗ್ವೇದದ ಅಭಿಮತ. ವಾಕ್ ಶಕ್ತಿಯ ಮಹಿಮೆಯನ್ನು ಜೈನಧರ್ಮವು ಹೀಗೆ ವಿವರಿಸುತ್ತದೆ:

ತೀರ್ಥಂಕರನು ಸಮವಸರಣಮಂಟಪದಲ್ಲಿ ಗಂಧಕುಟಿಯ ಮೇಲೆ ಕುಳಿತು ವಾಯು ಮಾರ್ಗದಲ್ಲಿ ಸಂಚರಿಸುತ್ತ ಮಾಡುವ ತತ್ತ್ವೋಪದೇಶವು ಕೇವಲ ನಾದಮಯವಾಗಿದೆ. ಆ ನಿನಾದವು ಭಿನ್ನ ಭಿನ್ನ ಭಾಷೆಯವರಿಗೆ ಅವರವರ ಭಾಷೆಯಲ್ಲಿಯೇ ಅರ್ಥವನ್ನೀಯುತ್ತಿದೆ ಎಂದು ಜೈನರ ಕಲ್ಪನೆ. ಎಲ್ಲ ಭಾಷೆಗಳನ್ನೂ ಧ್ವನಿಸುವ ಧ್ವನಿಯೊಂದು ಇದೆಯೆಂದು ಜೈನರ ವಿಚಾರ. ಆತ್ಮನ ಅನೇಕತ್ವವನ್ನು ನಂಬಿದ ಜೈನರು ಶಬ್ದದ್ರವ್ಯದ ಏಕತ್ವವನ್ನು ಒಪ್ಪಿರುವರು. ಸ್ಫೋಟವಾದವು ಶಬ್ದಬ್ರಹ್ಮನನ್ನು ಒಪ್ಪಿರುವುದು ಸರ್ವಶ್ರುತ. ಭಾಷೆ ಮೂಲದಲ್ಲಿ ಒಂದೇ ಎಂಬುದನ್ನು ಅನೇಕ ಸಿದ್ಧಾಂತಗಳು ಒಪ್ಪಿವೆ.

ತಾತ್ವಿಕವಾಗಿ ಭಾಷೆಯ ಮೂಲ ಒಂದೇ ಇರಬಹುದಾದರೂ ವಾಸ್ತವ ಪ್ರಪಂಚದಲ್ಲಿ ಅದು ವಿವಿಧ ರೂಪಗಳನ್ನು ತಳೆದಿದೆ. ಒಂದು ಜನಾಂಗದ ವ್ಯಾವಹಾರಿಕ ಸಾಧನೆಗಾಗಿ ಸಹಜವಾಗಿಯೇ ನಿರ್ಮಿತವಾದ ವ್ಯವಸ್ಥಿತ ಧ್ವನಿಗಳ ಸಂಯೋಜನೆಯೇ ಭಾಷೆಯೆಂದು ಈಗಿನವರ ಮತ. ಒಂದೊಂದು ಭಾಷೆಗೂ ಈ ಸಂಯೋಜನೆ ರೂಢಿಯಿಂದ ಬೇರೆ ಬೇರೆ ತೆರನಾಗಿರುತ್ತದೆ. ಆದುದರಿಂದ ಒಂದು ಭಾಷೆಯವರಿಗೆ ಇನ್ನೊಂದು ಭಾಷೆಯ ಅರ್ಥವಾಗುವುದಿಲ್ಲ. ಇಂತಹ ಭಾಷೆಗಳು ಜಗತ್ತಿನಲ್ಲಿ ೩೦೦೦ಕ್ಕೂ ಮೇಲ್ಪಟ್ಟವೆಯೆಂದು ತಿಳಿದು ಬಂದಿದೆ. ಇವೆಲ್ಲ ಭಾಷೆಗಳೂ ತೀರ ಸ್ವತಂತ್ರವಾಗಿರದೆ ಐತಿಹಾಸಿಕವಾಗಿ ಬೇರೆ ಬೇರೆ ಗುಂಪುಗಳಿಗೆ ಒಳಪಟ್ಟಿರುವಂತೆ ತೋರುತ್ತದೆ. ಭಾಷಾ ಶಾಸ್ತ್ರಜ್ಞರು ಜಗತ್ತಿನ ಭಾಷೆಗಳನ್ನು ಐತಿಹಾಸಿಕ ದೃಷ್ಟಿಯಿಂದ ಇಂಡೋ-ಯೂರೋಪಿಯನ್, ಸೆಮಿಟಿಕ್, ಹೆಮೆಟಿಕ್, ಟಿಬೆಟೋ ಚಾಯಿನೀಜ, ಅಲ್ಟೇಯಿಕ್, ದ್ರವಿಡಿಯನ್, ಆಸ್ಟ್ರಿಕ್, ಬಂಟು, ಸುಥಾನಿಕ್ ಎಂದು ಮುಂತಾಗಿ ವಿಭಜಿಸಿರುವುದುಂಟು. ಇವುಗಳಲ್ಲಿ ಆಸ್ಟ್ರಿಕ್, ಟಿಬೆಟೊ–ಚಾಯನೀಜ, ದ್ರವಿಡಿಯನ್ ಮತ್ತು ಇಂಡೋ–ಯುರೋಪಿಯನ್ ಬಳಗಗಳಿಗೆ ಸಂಬಂಧಪಟ್ಟ ಭಾಷೆಗಳು ಭಾರತದಲ್ಲಿ ಪ್ರಚಾರದಲ್ಲಿವೆ. ಭಾರತೀಯ ಸಂವಿಧಾನದ ಅನೆಯ ಕಲಮಿನಲ್ಲಿ ಭಾರತದ ೧೪ ಭಾಷೆಗಳನ್ನು ಮಾತ್ರ ಹೇಳಲಾಗಿದ್ದರೂ ಇಲ್ಲಿ ಪ್ರಚಾರದಲ್ಲಿರುವ ಭಾಷೆಗಳು ಹೇರಳವಾಗಿವೆ. ಒಂದೇ ಒಂದು ದ್ರಾವಿಡ ಬಳಗದಲ್ಲಿ ಇದುವರೆಗೆ ಉಪಲಬ್ಧವಾದ ಭಾಷೆಗಳ ಸಂಖ್ಯೆ ೧೯ಕ್ಕೆ ಮಿಕ್ಕಿದೆ. ೧೪ ಅವುಗಳಲ್ಲಿ ಕನ್ನಡ, ತೆಲುಗು, ತಮಿಳು, ಮಲಯಾಳ ಈ ನಾಲ್ಕು ಭಾಷೆಗಳನ್ನು ಮಾತ್ರ ನಮ್ಮ ರಾಜ್ಯಘಟನೆಯು ಪರಿಗಣಿಸಿದೆ. ಉಳಿದ ಭಾಷಾವರ್ಗಗಳಲ್ಲಿಯೂ ಹೀಗೆಯೇ ನಮ್ಮ ರಾಜ್ಯಘಟನೆಯು ಪರಿಗಣಿಸದಿದ್ದ ಭಾಷೆಗಳು ಎಷ್ಟೋ ಇವೆ. ಸಹಸ್ರಾರು ವರ್ಷಗಳ ಇತಿಹಾಸವನ್ನು ಪಡೆದ, ಅನೇಕ ಜನಾಂಗಗಳಿಗೆ ಆಗರವಾದ ಬ್ರಹತ್ ಭಾರತ ದೇಶದಲ್ಲಿ ಅನೇಕ ಭಾಷೆಗಳಿರುವುದು ಆಶ್ಚರ್ಯದ ಮಾತೇನಲ್ಲ. ಅದು ನಿಸರ್ಗಸಹಜವಾದ ನಿಯಮ. ಒಂದೇ ಭಾಷೆಯು ವಿಸ್ತಾರವಾದ ಕ್ಷೇತ್ರವನ್ನು ವ್ಯಾಪಿಸಿದ್ದರೆ ಅದರಲ್ಲಿ ಅನೇಕ ಪ್ರಾದೇಶಿಕ ಪ್ರಬೇಧಗಳು ತಲೆದೋರುತ್ತವೆ. ಇದಲ್ಲದೆ ಸಾಮಾಜಿಕ ದೃಷ್ಟಿಯಿಂದಲೂ ಒಂದು ಭಾಷೆಯಲ್ಲಿ ಹಲವಾರು ಪ್ರಬೇಧಗಳನ್ನು ಕಾಣಬಹುದು.

ನಮ್ಮ ನಾಡಿನಲ್ಲಿ ಹಿಂದೆ ಎಂದೂ ಕಂಡು ಬಾರದ ಭಾಷಾಭಿಮಾನವು ಇಂದು ತಲೆದೋರುತ್ತಿದೆ. ಭಾಷಾ

---

೧೩. ಋಗ್ವೇದ VIII 100-11

೧೪.

ದಕ್ಷಿಣ ದ್ರಾವಿಡ	ಮಧ್ಯದ್ರಾವಿಡ	ಉತ್ತರ ದ್ರಾವಿಡ
ತಮಿಳು	ತೆಲುಗು	ಕುರುಖ್
ಮಲಯಾಳ	ಕುಯಿ	ಮಳ್ತೊ
ಕನ್ನಡ	ಕುವಿ	ಬ್ರಾಹುಇ
ತುಳು	ಗೊಂಡಿ	
ಕೊಡಗು	ಕೊಲಾಮಿ	
ತೊಡ	ನಾಯಿಕಿ	
ಕೋತ	ಪರ್ಜಿ	
	ಗದಬಾ	
	ಒಲ್ಲಾರಿ	

ನುಗುಣವಾಗಿಯೇ ಇಂದು ನಮ್ಮ ರಾಜ್ಯಗಳ ಪುನರ್ವಿರಚನೆಯಾಗಿದೆ. ಇತಿಹಾಸದಲ್ಲಿ ಹಿಂದೆ ಎಂದೂ ನಮ್ಮ ರಾಜ್ಯಕೀಯ ವಿಭಾಗಗಳು ಭಾಷಾನುಗುಣವಾಗಿದ್ದಂತೆ ಕಂಡುಬರುವುದಿಲ್ಲ. ಗಡಿಪ್ರದೇಶಗಳ ಸಲುವಾಗಿ ಬೇರೆ ಬೇರೆ ಭಾಷೆಗಳ ಜನರಲ್ಲಿ ತಿಕ್ಕಾಟವೂ ನಡೆದಿದೆ. ತಮ್ಮ ತಮ್ಮ ಭಾಷೆಗಾಗಿ ಸರ್ವಸ್ವವನ್ನೂ ತ್ಯಾಗಮಾಡುವೆವೆಂದು ಹೇಳಿದ ಹೇಳುವ–ಮಾಡದಿದ್ದರೂ ಚಿಂತೆಯಿಲ್ಲ–ಜನರುಂಟು ಈ ನಾಡಿನಲ್ಲಿ. ಇಷ್ಟು ಭಾಷಾಭಿಮಾನ ಉದ್ರಿಕ್ತವಾಗಿದೆ ಈಗ ನಮ್ಮ ನಾಡಿನಲ್ಲಿ. ಭಾರತದ ಇತಿಹಾಸದಲ್ಲಿ ಭಾಷೆಗಾಗಿ ಹಿಂದೆ ಎಂದೂ ಹೀಗೆ ಹೋರಾಟ ನಡೆದ ಸನ್ನಿವೇಶಗಳು ಕಂಡುಬಂದಿರುವುದಿಲ್ಲ. ಭಾಷೆಯ ವ್ಯಾಮೋಹವೇ ಮುಂದಾಗಿ ರಾಷ್ಟ್ರೀಯ ಭಾವನೆ ಹಿಂದಾದರೆ ದೇಶಕ್ಕೆ ಹಿತವಾಗಲಾರದು. ಅಂತೆಯೇ ನಮ್ಮ ದೇಶದಲ್ಲಿ ಈಗ ಭಾಷಾಬಾಂಧ್ಯವನ್ನು ಬೆಳೆಸುವುದು ತೀರ ಅವಶ್ಯವಾಗಿದೆ.

ಇನ್ನೂ ಸ್ವಲ್ಪ ನಿಚ್ಚಳವಾಗಿ ವಿಚಾರಮಾಡಿದರೆ ಭಿನ್ನ ಭಿನ್ನ ಭಾಷೆಗಳಲ್ಲಿ ಬಾಂಧವ್ಯವನ್ನು ಬೆಳೆಸುವ ಮೊದಲು ಒಂದೇ ಭಾಷೆಯ ಬೇರೆ ಬೇರೆ ಪ್ರಾದೇಶಿಕ ಪ್ರಬೇಧಗಳನ್ನು ಮಾತನಾಡುವವರಲ್ಲಿ ಭಾಷೈಕ್ಯತೆಯನ್ನುಂಟುಮಾಡುವುದು ಅಗತ್ಯವಾಗಿದೆಯೆಂದು ಹೊಳೆಯುತ್ತದೆ. ಕನ್ನಡದಲ್ಲಿ ಧಾರವಾಡ ಕನ್ನಡ, ಮೈಸೂರು ಕನ್ನಡ, ಮಂಗಳೂರು ಕನ್ನಡ ಇವೇ ಮೊದಲಾದ ಪ್ರಭೇದಗಳಿವೆ. ಧಾರವಾಡ ಕನ್ನಡ ಬಿರುಸು ಎಂದು ಮೈಸೂರವರು ಮೂಗು ಮುರಿದರೆ, ಮೈಸೂರು ಕನ್ನಡ ಸಪ್ಪೆ, ನಿಸ್ಸತ್ವ ಎಂದು ಧಾರವಾಡದವರು ಗೊಣಗಾಡುತ್ತಾರೆ. ಇದಕ್ಕೆ ಒಂದು ಭಾಷೆ ಹೆಚ್ಚು, ಇನ್ನೊಂದು ಭಾಷೆ ಕಡಿಮೆ; ನಾನು ಮಾತಾಡುವುದು ಶುದ್ಧ, ಇನ್ನೊಬ್ಬರು ಮಾತಾಡುವುದು ಅಶುದ್ಧ ಎಂದು ಬಹುದಿನಗಳಿಂದಲೂ ರೂಢವಾಗಿದ್ದ ಭಾವನೆಯೇ ಕಾರಣ. ಭಾಷೆ ಭಾಷೆಗಳಲ್ಲಿ ಒಂದು ಹೆಚ್ಚು ಇನ್ನೊಂದು ಕಡಿಮೆಯೆನ್ನುವಂತಿಲ್ಲ. ಎಲ್ಲ ಭಾಷೆಗಳೂ ಸರಿಸಮಾನವೇ. ಒಂದು ಭಾಷೆಯವರಲ್ಲಿ ಒಂದು ಪ್ರದೇಶದವರು ಇಲ್ಲವೆ ಒಂದು ವಿಶಿಷ್ಟ ಸಮಾಜದವರು ಮಾತನಾಡುವುದು ಶುದ್ಧ ಮಿಕ್ಕವರು ಅಶುದ್ಧ ಎನ್ನುವುದು ತೀರ ಅಶುದ್ಧ. ಈ ಶುದ್ಧಾ-ಶುದ್ಧತೆಯ ಕಲ್ಪನೆಯೇ ಒಂದು ಭ್ರಮೆ. ಭಾಷೆಯಲ್ಲಿ ಅಸ್ತಿತ್ವದಲ್ಲಿದ್ದುದೆಲ್ಲವೂ ಶುದ್ಧವೇ. ಅದರ ನಾನಾ ಪ್ರಭೇದಗಳು ಒಬ್ಬ ತಾಯಿಯ ಕಂಠದ ವಿವಿಧ ಶ್ರುತಿಗಳಿದ್ದಂತೆ. ಎಲ್ಲಧಕ್ಕೂ ಅದರದರ ಸೌಂದರ್ಯವುಂಟು, ಅಸ್ತಿತ್ವವುಂಟು. ಎಲ್ಲವೂ ಕೂಡಿದರೆ ಆ ಶ್ರುತಿಗೆ ಪರಿಪೂರ್ಣತೆ ಬರುತ್ತದೆ. ಸಪ್ತವರ್ಣಗಳ ಕಾಮನ ಬಿಲ್ಲಿನಲ್ಲಿ ಎಲ್ಲ ವರ್ಣಗಳಿಗೂ ಸ್ಥಾನವುಂಟು. ಎಲ್ಲವೂ ಕೂಡಿದಾಗಲೇ ಆ ಇಂದ್ರಧನಸ್ಸು ಪೂರ್ತಿಯಾಗುತ್ತದೆ. ಆದುದರಿಂದ ಇಂತಹ ಭಾಷೈಕ್ಯದ ವಿಚಾರಗಳು ಕನ್ನಡ ಜನತೆಯ ಮನದಲ್ಲಿ ಬೇರೂರುವುದು ಅವಶ್ಯವಾಗಿದೆ.

ಭಾಷಾಬಾಂಧವ್ಯವೆಂಬ ಪದಕ್ಕೆ ಎರಡು ಅರ್ಥವನ್ನಿಟ್ಟುಕೊಳ್ಳುವುದು ವಿಹಿತವೆಂದು ತೋರುತ್ತದೆ.

(೧) ಒಂದು ಭಾಷೆಯೊಳಗಿನ ವಿವಿಧ ಪ್ರಾದೇಶಿಕ ಭೇದಗಳನ್ನು ಮಾತನಾಡುವುದರಲ್ಲಿ ಉಂಟಾಗಬೇಕಾದ ಐಕ್ಯಭಾವನೆ.

(೨) ದೇಶದೊಳಗಿನ ವಿವಿಧ ಭಾಷೆಗಳನ್ನಾಡುವವರಲ್ಲಿ ಉಂಟಾಗಬೇಕಾದ ಬಾಂಧವ್ಯ ಭಾವನೆ.

ಒಂದು ಪ್ರಾದೇಶಿಕ ಭೇದದವರಿಗೆ ಇನ್ನೊಂದು ಪ್ರಾದೇಶಿಕ ಭೇದದ ಬಗೆಗಿರುವ ತಪ್ಪು ಕಲ್ಪನೆಯನ್ನು ಕುರಿತು ಮೇಲೆ ವಿವರಿಸಲಾಗಿದೆ. ಅವರಲ್ಲಿ ಸಂಪರ್ಕ ಹೆಚ್ಚಿದಷ್ಟು ಬಾಂಧವ್ಯಭಾವನೆ ಬೆಳೆಯುತ್ತದೆ. ಅದಲ್ಲದೆ ಪ್ರಾದೇಶಿಕ ಭಾಷೆಯು ಇಡೀ ರಾಜ್ಯದ ಭಾಷೆಯಾಗುವುದರಿಂದ ಅದಕ್ಕೊಂದು ಅಧಿಕೃತಭಾಷೆಯನ್ನು ರೂಢಗೊಳಿಸಿ ಅದನ್ನು ಪಠ್ಯಪುಸ್ತಕ, ಕೋರ್ಟು, ಕಚೇರಿ ಇವುಗಳ ಮುಖಾಂತರ ರಾಜ್ಯದಲ್ಲೆಲ್ಲ ಪ್ರಬಲಗೊಳಿಸಬೇಕು. ಒತ್ತಾಯದ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿ ಬರಬೇಕು. ಪ್ರಾಥಮಿಕ ಶಿಕ್ಷಣ ಮುಗಿದನಂತರವೂ ಸಾಮಾನ್ಯ ಮಾನವನು ತನ್ನ ಓದುವ ಅಭಿರುಚಿಯನ್ನು ಕಾಯ್ದುಕೊಂಡು ಹೋಗುವಂತೆ ಅನಕೂಲತೆಗಳಿರಬೇಕು. ಸಂಚಾರೀ ವಾಚನಾಲಯ, ಕಡಿಮೆ ಬೆಲೆಗೆ ಮಾರುವ ಉತ್ತಮ ಗ್ರಂಥಗಳ ಪ್ರಕಟನೆ ಇಂತಹ ಯೋಜನೆಗಳನ್ನು ಕೈಕೊಂಡರೆ ಈಗಿನ ಭಿನ್ನಭಾವ ಕಾಲಾಂತರದಲ್ಲಿ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಅಲ್ಲಲ್ಲಿ ವೈಯಕ್ತಿಕವಾದ ಇಲ್ಲವೆ ಒಂದು ಗುಂಪಿಗೆಮಾತ್ರ ವಿಶಿಷ್ಟವಾದ ಕೆಲವು ಭೇದಗಳಿದ್ದರೂ ಅವೆಲ್ಲವನ್ನು ಪ್ರತಿನಿಧಿಸುವ ಸಾರ್ವತ್ರಿಕವಾದ ಅಧಿಕೃತ ಭಾಷೆಯ ಕಡೆಗೆ ಎಲ್ಲರ ಗಮನ ಹರಿಯುತ್ತದೆ.

ಇನ್ನು ನಮ್ಮ ದೇಶದೊಳಗಿರುವ ಬೇರೆ ಬೇರೆ ಭಾಷೆಯವರಲ್ಲಿ ಬಾಂಧವ್ಯವನ್ನು ಬೆಳೆಸುವ ವಿಚಾರ. ಹಿಂದೆ ವಿವರಿಸಿದಂತೆ ಈ ದೇಶದಲ್ಲಿ ನಾಲ್ಕು ಗುಂಪಿಗೆ

ಸೇರಿದ ಭಾಷೆಗಳಿರುವುದೇನೋ ನಿಜ. ಆದರೆ ವೈವಿಧ್ಯದಲ್ಲಿ ಐಕ್ಯವನ್ನು ಕಂಡುಕೊಂಡು ಬಂದಿರುವುದು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ವಿವಿಧ ರಾಜ್ಯಗಳೂ ವಿವಿಧ ಭಾಷೆಗಳೂ ಈ ನಾಡಿನಲ್ಲಿ ಸಾವಿರಾರು ವರ್ಷಗಳಿಂದ ಅಸ್ತಿತ್ವದಲ್ಲಿದ್ದರೂ ಅವುಗಳಲ್ಲಿ ಭಾರತೀಯ ಭಾವನೆ ನಿರಂತರ ಹರಿಯುತ್ತಿದೆ. ಧರ್ಮ, ತತ್ತ್ವ, ಇತರ ಜ್ಞಾನ ಮುಂತಾದವು ಸಮಸ್ತ ಭಾರತೀಯರ ಸೊತ್ತಾಗಿ ಬೆಳೆಯುತ್ತ ಬಂದಿವೆ. ಇಡೀ ದೇಶದಲ್ಲಿ ಅನೇಕ ಶತಮಾನಗಳ ವರೆಗೆ ಸಂಸ್ಕೃತ ಭಾಷೆ, ಧರ್ಮ, ತತ್ತ್ವ, ಜ್ಞಾನ ಮುಂತಾದವುಗಳನ್ನು ಅಭಿವ್ಯಕ್ತ ಮಾಡುವ ಸಾಧನವಾಗುತ್ತ ಬಂದಿದೆ. ಆ ಭಾಷೆಯಿಂದ ಭಾರತದ ಭಾಷೆಗಳು ಪರಿಪುಷ್ಟಿಗೊಂಡಿವೆ, ಇಂದಿಗೂ ಸಂಪುಷ್ಟಿಗೊಳ್ಳುತ್ತಲಿವೆ. ಪರ್ಶಿಯನ್ ಮೊದಲಾದ ಭಾಷೆಗಳ ಪ್ರಭಾವವೂ ಭಾರತೀಯ ಭಾಷೆಗಳ ಮೇಲೆ ವಿಶೇಷವಾಗಿದೆ. ಇದೆಲ್ಲದರ ಪರಿಣಾಮವಾಗಿ ಭಾರತದಲ್ಲಿ ಪ್ರಚಲಿತವಾಗಿರುವ ನಾಲ್ಕು ವರ್ಗದ ಭಾಷೆಗಳಲ್ಲಿಯೂ ಸಾಮಾನ್ಯತೆ ವಿಶೇಷವಾಗಿದೆ. ಎಲ್ಲ ಭಾಷೆಗಳ ಶಬ್ದ ಭಾಂಡಾರವನ್ನು ಸಮೀಕ್ಷಿಸಿದರೆ ಸುಮಾರು ೧೦೦ಕ್ಕೆ ೩೦ ರಷ್ಟು ಭಾಗ ಅವಕ್ಕೆ ಸಾಮಾನ್ಯವಾಗಿರುವಂತೆ ಕಂಡು ಬರುತ್ತದೆ. ಭಾರತದಲ್ಲಿ ಒಂದು ಬಳಗದ ಭಾಷೆಯೊಂದರ ವಾಕ್ಯದ ಶಬ್ದಗಳಿಗೆ ಪ್ರತಿಯಾಗಿ ಇನ್ನೊಂದು ಬಳಗದ ಭಾಷೆಯ ಶಬ್ದಗಳನ್ನು ಹಾಕಿದರೆ ಅನೇಕ ಸಲ ಅರ್ಥಕ್ಕೆ ಬಾಧೆ ಬರುವಂತಿಲ್ಲ. ಭಾಷೆ ಭಾಷೆಗಳ ಸಂಪರ್ಕದಿಂದ ವಾಕ್ಯರಚನೆಯ ತಂತ್ರದಲ್ಲಿಯೂ ಒಂದು ಬಗೆಯ ಸಾಮಾನ್ಯತೆ ಕಂಡುಬರುತ್ತದೆ. ಇನ್ನು ಮೇಲೆ ಪ್ರತಿಯೊಂದು ಭಾಷೆಯೂ ತನ್ನ ಶಬ್ದ ಭಾಂಡಾರವನ್ನು ಬೆಳೆಸಿಕೊಳ್ಳುವಾಗಲೂ, ವಾಕ್ಯ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಾಗಲೂ ಕೇವಲ ತನ್ನ ವೈಯಕ್ತಿಕತೆಯ ಕಡೆಗೆಯೇ ವಿಶೇಷವಾಗಿ ಗಮನಕೊಡದೆ ಮಿಕ್ಕ ಭಾರತೀಯ ಭಾಷೆಗಳೊಡನೆ ಮುಂದುವರಿಯಬೇಕು. ಭಾಷಾಬಾಂಧವ್ಯದ ಭಾವನೆ ಬೆಳೆಯಬೇಕಾದರೆ ನಮ್ಮ ಶಾಲೆ ಕಾಲೇಜುಗಳಲ್ಲಿ ಭಾಷೆಗಳನ್ನು ಕಲಿಸುವ ಧೋರಣೆಯಲ್ಲಿಯೇ ಮಾರ್ಪಾಡಾಗಬೇಕು. ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಸುವುದರಿಂದ ಮಗುವಿನ ಮನಸ್ಸಿನ ಬೆಳವಣಿಗೆ ಕುಂಠಿತವಾಗುತ್ತದೆಯೆಂಬ ಭಾವನೆ ನಮ್ಮಲ್ಲಿ ಅನೇಕರಿಗಿದೆ. ಆದುದರಿಂದ ಮಾತೃಭಾಷೆ, ಹಿಂದಿ, ಇಂಗ್ಲಿಷು—ಈ ಭಾಷೆಗಳನ್ನು ಮಕ್ಕಳಿಗೆ ಕಲಿಸುವ ಯೋಜನೆಯನ್ನು ಆಕ್ಷೇಪಿಸುವುದುಂಟು. ಸ್ಕ್ಯಾಂಡಿನೇವ್ಹಿಯಾ, ನೇದರಲಂಡ ಮೊದಲಾದ ದೇಶಗಳಲ್ಲಿ ಮೂರು ನಾಲ್ಕು ಭಾಷೆಗಳನ್ನು ಕಲಿಸುವ ಪದ್ಧತಿ ಸ್ವೀಕೃತವಾಗಿದೆ. ಒಂದೇ ಭಾಷೆಯನ್ನು ಕಲಿಸುವ ದೇಶದವರಷ್ಟೇ ಈ ದೇಶಗಳ ಮಕ್ಕಳ ಬೌದ್ಧಿಕ ಮಟ್ಟವು ಬೆಳೆದ ನಿದರ್ಶನಗಳಿವೆ. ಆದುದರಿಂದ ನಮ್ಮ ದೇಶದಲ್ಲಿ ಮಾತೃಭಾಷೆ, ಹಿಂದಿ, ಇಂಗ್ಲಿಷು—ಈ ಮೂರು ಭಾಷೆಗಳನ್ನು ಮಾಧ್ಯಮಿಕ ಹಂತದಿಂದ ಕಡ್ಡಾಯವಾಗಿ ಕಲಿಸುವ ಯೋಜನೆಯನ್ನು ನಾವು ಪುಷ್ಟೀಕರಿಸಬೇಕು. ಇದರಿಂದ ಮಕ್ಕಳ ಭಾಷೆಗಳ ಮೇಲೆಯೂ ವಿಶೇಷ ಪರಿಣಾಮವುಂಟಾಗುತ್ತದೆ. ಈ ಭಾಷೆಗಳ ಸಂಕೀರ್ಣತೆಯಿಂದ ಅವರ ಮಾತಿನ ವೈಯಕ್ತಿಕತೆ ಕಡಿಮೆಯಾಗಿ ಸಾಮಾನ್ಯತೆ ಹೆಚ್ಚುತ್ತದೆ. ಶಾಶ್ವತವಾದ ಭಾಷಾ ಬಾಂಧವ್ಯಕ್ಕೆ ಅನುವಾಗುತ್ತದೆ. ರಾಷ್ಟ್ರಭಾಷೆಯಾದ ಹಿಂದಿಯೂ ತಾನು ಎಲ್ಲ ಭಾಷೆಗಳಿಗಿಂತಲೂ ಸ್ವತಂತ್ರವಾಗಿದ್ದೇನೆಂಬ ಭಾವನೆಯನ್ನು ಬಿಟ್ಟು ಈ ಎಲ್ಲ ಭಾಷೆಗಳ ಸಾರಸರ್ವಸ್ವವನ್ನೂ ತನ್ನೊಳಗೆ ಅಳವಡಿಸಿಕೊಂಡು ಅವುಗಳೊಡನೆ ತಾನೂ ಬಾಳಬೇಕು, ಬೆಳೆಯಬೇಕು ಎಂಬ ಸಹಜೀವನ ತತ್ವವನ್ನು ಅನುಸರಿಸಬೇಕು. ಭಾಷಾ ಬಾಂಧವ್ಯಕ್ಕೆ ಇದುವೆ ನಾಂದಿಯಾಗಬಲ್ಲುದು.

ಭಾಷಾ ಬಾಂಧವ್ಯದ ವಿಷಯದಲ್ಲಿ ಇದುವರೆಗೆ ಸಾಹಿತ್ಯದ ಮಾತನ್ನೇ ಎತ್ತಲಿಲ್ಲ. ವಾಸ್ತವವಾಗಿ ನೋಡಿದರೆ ಸಾಹಿತ್ಯವು ಭಾವಪ್ರಧಾನವಾಗಿರುವುದರಿಂದ ಜನತೆಯ ಭಾವೈಕ್ಯತೆಯ ಕಾರ್ಯದಲ್ಲಿ ಅದರಷ್ಟು ಫಲಪ್ರದ ಬೇರೆಯಾವುದೂ ಆಗಲಾರದು. ನಮ್ಮ ವಿವಿಧ ಸಾಹಿತ್ಯಗಳಲ್ಲಿ ಸಂಪರ್ಕ ಹೆಚ್ಚಾಗಬೇಕು. ಭಾಷೆ ಭಾಷೆಗಳೊಳಗಣ ಉತ್ತಮ ಕೃತಿಗಳು ಬೇರೆ ಬೇರೆ ಭಾಷೆಗಳಿಗೆ ಪರಿವರ್ತನ ಹೊಂದಬೇಕು. ಒಂದು ಭಾಷೆಯೊಳಗಿನ ಭಾವನೆ, ಕಲ್ಪನೆ, ಆಲೋಚನೆಗಳ ಸೌರಭ ಆ ಭಾಷೆಗೆ ಮಾತ್ರ ಉಳಿಯದೆ ಮಿಕ್ಕ ಭಾಷೆಗಳಿಗೂ ಹೋಗಬೇಕು. ಮಿಕ್ಕ ಭಾಷೆಗಳಿಂದ ತಾನೂ ಅವುಗಳನ್ನು ಸ್ವೀಕರಿಸಬೇಕು. ಹೀಗೆ ಒಡನಾಟ, ಓಡಾಟ ಹೆಚ್ಚಿದರೆ ಒಂದು ಭಾಷೆಯವರಿಗೆ ಇನ್ನೊಂದು ಭಾಷೆಯ ಬಗೆಗೆ, ಅವರ ಸಾಹಿತ್ಯದ ಬಗೆಗೆ ತಿಳಿವಳಿಕೆಯುಂಟಾಗಿ ಗೌರವ ಪ್ರಾಪ್ತವಾಗುತ್ತದೆ. ರಸಾನುಭೂತಿಯಲ್ಲಿ ಭಾವಗಳ ಬೆಸುಗೆಯಾಗುತ್ತದೆ. ಬಾಂಧವ್ಯ ಮೈದೋರುತ್ತದೆ. ಐಕ್ಯತೆ ಬೆಳೆಯುತ್ತದೆ. ಇದುವೆ ಭಾಷಾಬಾಂಧವ್ಯ.

ಸಂಶೋಧನಾ ಮತ್ತು ವಿಮರ್ಶಾಗೋಷ್ಠಿ

ಪ್ರಾಸ್ತಾವಿಕ ಭಾಷಣ

ಡಿಶೆಂಬರು ೨೮ರಂದು ನಡೆದ ಮೇಲ್ಕಾಣಿಸಿದ ಗೋಷ್ಠಿಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾದ ಡಾ|| ಪಿ. ಬಿ. ದೇಶಾಯಿ ಅವರು ಹೀಗೆ ಪ್ರಾಸ್ತಾವಿಕ ಭಾಷಣ ಮಾಡಿದರು.

ನೀರಜಜಾತ ವಿಸ್ತರಿಸಿದಂಡವುಮಂ ಮಣಿಮಾಲೆಯಾಗಿ ವಿ-
ಸ್ತಾರಿಸಿ ಹಸ್ತದಿಂ ಪಿಡಿದು ತನ್ನ ಶರಣ್ಬುಗುವರ್ಗೆ ಲೇಸುವಂ
ಪ್ರೇರಿಸಲೋಸುಗಂ ಜಪಿಸುತಿರ್ಪಳಿರುಳ್ ಪಗಲಾವಳೊರ್ವಳಾ-
ಭಾರತಿ ನಮ್ಮ ಜಿಹ್ವೆಯೊಳನಾವಿಳದಿಂದಿರುತಿರ್ಕೆ ಸಂತತಂ ||

ಸಾಹಿತ್ಯ, ಸಂಶೋಧನೆ, ವಿಮರ್ಶೆ, ಇವು ಅವಿನಾಭಾವದಿಂದ ಕಾರ್ಯಗತವಾದ ಅನ್ಯೋನ್ಯ ಪೂರಕ ವಿಷಯಗಳು. ಸಂಶೋಧನೆ ಮತ್ತು ವಿಮರ್ಶೆಯ ಸಹಕಾರದಿಂದ ಸಾಹಿತ್ಯವು ವಿಶೇಷವಾದ ಪ್ರಗತಿಯನ್ನು ಸಾಧಿಸಬಲ್ಲದು. ಸಾಹಿತ್ಯವು ಹೇಗೋ, ಹಾಗೆ ಸಂಶೋಧನೆ ಮತ್ತು ವಿಮರ್ಶೆಗಳಾದರೂ ಕುಶಲ ಕಲಾಕರ್ಮಗಳಾಗಿವೆ. ರಸಾತ್ಮಕವಾದ ಸಾಹಿತ್ಯವು ಲಕ್ಷಣಕಾರರ ಕೈಯಲ್ಲಿ ಒಂದು ಶಾಸ್ತ್ರದ ಪಂಕ್ತಿಗೆ ಇಳಿದಿರುವಾಗ, ಸಂಶೋಧನೆ ಮತ್ತು ವಿಮರ್ಶೆಯಂತಹ ನೀರಸ ವಿಷಯಗಳನ್ನು ಕಲೆಯ ಬಳಗಕ್ಕೆ ಸೇರಿಸುವುದು ಹೇಗೆ ಸಮಂಜಸವೆಂದು ಕೆಲವರು ಪ್ರಶ್ನಿಸಬಹುದು. ಆದರೆ ಸಂಶೋಧನೆ ಮತ್ತು ವಿಮರ್ಶೆಯ ಅಂತಿಮ ಉದ್ದೇಶವನ್ನು ನಾವು ಲಕ್ಷಿಸುವುದಾದರೆ ಈ ಪ್ರಶ್ನೆಗೆ ಸಮರ್ಪಕ ಉತ್ತರವು ದೊರೆಯುತ್ತದೆ.

ಭಾರತೀಯ ಸಾಹಿತ್ಯ ವಿಮರ್ಶೆಗೆ ಪ್ರಾಚೀನ ಚರಿತ್ರೆ ಇದೆ. ಈ ವಿಷಯುವನ್ನು ಕುರಿತು ಹಲವು ಗ್ರಂಥಗಳು ಹುಟ್ಟಿವೆ, ಚರ್ಚೆಗಳು ನಡೆದಿವೆ, ತತ್ತ್ವಗಳು ಪ್ರತಿಪಾದಿಸಲಾಗಿದೆ. ಕನ್ನಡ ನಾಡಿನಲ್ಲಿಯೂ ಸಾಹಿತ್ಯದ ಜೊತೆಗೆ ವಿಮರ್ಶೆಯ ಪರಂಪರೆಯಾದರೂ ಸಹಜತೆಯಿಂದ ಅನೂಚಾನವಾಗಿ ಹರಿದುಬಂದಿದೆ. ನೃಪತುಂಗನು ಕವಿರಾಜಮಾರ್ಗದ "ಪದನರಿದು ನುಡಿಯಲುಂ ನುಡಿದುದನರಿದಾರಯಲುಂ ಆರ್ಪರು" ಎಂಬ ಉಕ್ತಿಯಲ್ಲಿ ಕನ್ನಡ ಜನಗಳ ಜನ್ಮಜಾತ ಕಾವ್ಯಹೃದಯವನ್ನೂ ವಿಮರ್ಶಾಪ್ರಜ್ಞೆಯನ್ನೂ ಸೂಚಿಸಿರುವನು.

ಈಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಸಾಹಿತ್ಯವು ಬಹುಮುಖವಾಗಿ ವಿಸ್ತಾರ ಪಡೆದಿದೆ. ಅದರೊಂದಿಗೆ ವಿಮರ್ಶಾಸಾಹಿತ್ಯವಾದರೂ ಅವರಲ್ಲಿ ವಿಶೇಷ ರೀತಿಯಿಂದ ರೂಪಗೊಳ್ಳುತ್ತಲಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಮರ್ಶಾಸಾಹಿತ್ಯವು ಸಾಕಷ್ಟು ಸೃಷ್ಟಿಯಾಗಿಲ್ಲ ಎಂಬ ಮಾತನ್ನು ನಾವು ಒಪ್ಪಬೇಕು. ವಿಮರ್ಶೆ ಎನ್ನುವುದಕ್ಕಿಂತ ಮುಖಪರಿಚಯುವೆನ್ನಬಹುದಾದಂಥ ಬರವಣಿಗೆ ಅಲ್ಲಲ್ಲಿ ಪ್ರಕಟವಾಗುತ್ತಿದೆ. ಪ್ರಾಚೀನ ಕವಿ ಕಾವ್ಯಗಳ ಕುರಿತು ವಿಮರ್ಶಾತ್ಮಕವಾದ ಗ್ರಂಥಗಳು ಕೆಲವು ಮಾತ್ರ ಪ್ರಕಟವಾಗಿವೆ, ಇಲ್ಲವೆಂದಲ್ಲ. ಆದರೆ ಇದು ನಮ್ಮ ಸಾಹಿತ್ಯಾಭಿವೃದ್ಧಿಯ ಪ್ರಮಾಣಕ್ಕೆ ಅನುಗುಣವಾಗಿಲ್ಲ. ಹೆಚ್ಚೇಕೆ, ಸಾಮಾನ್ಯವಾಗಿ ಪ್ರತಿವರ್ಷ ನೆರವೇರುತ್ತಿರುವ ಸಾಹಿತ್ಯಸಮ್ಮೇಲನಗಳ ಸಂಖ್ಯೆಯನ್ನು, ಆಗೊಮ್ಮೆ ಈಗೊಮ್ಮೆಯಂತೆ ನಡೆಯುತ್ತಿರುವ ವಿಮರ್ಶಾಗೋಷ್ಠಿಗಳ ಸಂಖ್ಯೆಯೊಂದಿಗೆ ಹೋಲಿಸಿ ನೋಡಿದರೆ, ನಮ್ಮ ಸಾಹಿತ್ಯಪ್ರಪಂಚದಲ್ಲಿ ವಿಮರ್ಶೆಗೆ ನಾವು ಕೊಡುತ್ತಿರುವ ಸ್ಥಾನವು ಎಂತಹದು ಎಂಬ ಅಂಶ ಸ್ಫುಟವಾಗುತ್ತದೆ.

ಸಾಹಿತ್ಯ ವಿಮರ್ಶೆಯ ಉದಾತ್ತ ತತ್ವಗಳನ್ನು ಅಧಿಕಾರವಾಣಿಯಿಂದ ಪ್ರಸ್ತಾಪಿಸುವ ಗ್ರಂಥಗಳು ನಮ್ಮಲ್ಲಿ ಇನ್ನೂ ಹುಟ್ಟಬೇಕಾಗಿದೆ. ಉತ್ತಮ ವಿಮರ್ಶಾಧುರೀಣರು ಬಹುಸಂಖ್ಯೆಯಿಂದ ಮುಂದು ಬಂದು ಸಾಹಿತ್ಯ ಕೃತಿಗಳ ಗುಣಾವಗುಣಗಳನ್ನು ನಿರ್ಭಯವಾಗಿ ಸಮದೃಷ್ಟಿಯಿಂದ ಸಾರುವ ದಿನಗಳು ಇನ್ನೂ ಸಮೀಪಿಸಿಲ್ಲ.

ವಿಮರ್ಶೆ ಛಿದ್ರಾನ್ವೇಷಣೆಯಲ್ಲ. ವಿಕಾರಪ್ರೇರಿತ ವಿಮರ್ಶೆ ವಿಮರ್ಶೆಯ ಆಭಾಸ. ಅದು ಸಾಹಿತ್ಯವನ್ನು ಅಧೋಗತಿಗೆ ಎಳೆದೊಯ್ಯುತ್ತದೆ. ವಿದ್ವತ್ತು, ದೇಶಕಾಲಗಳ ಪರಿಜ್ಞಾನ, ವಿಶಾಲ ಭಾವನೆ, ಲೋಕಾನುಭವ, ಸಂಯಮ, ಸಮದರ್ಶಿತ್ವ, ಸಹೃದಯತೆ, ಚತುರೋಕ್ತಿ, ಇವು ಉತ್ತಮ ವಿಮರ್ಶಕನಲ್ಲಿ ಮೂಡಿ ನಿಲ್ಲತಕ್ಕ ಗುಣಗಳು. ಉತ್ತಮ ವಿಮರ್ಶಕನು ಸಾಹಿತ್ಯದ ಹಿತಚಿಂತಕನು, ನಿಯಾಮಕನು, ಸನ್ಮಾರ್ಗ ಪ್ರವರ್ತಕನು. ಇಂತಹ ವಿಮರ್ಶಕರಿಂದ ಸಾಹಿತ್ಯವು ಉನ್ನತಿಯ ಮೆಟ್ಟಲನ್ನು ಏರುತ್ತದೆ.

ವಿಮರ್ಶೆ ಪ್ರಭಾವಶಾಲಿ ಆಯುಧ. ಜೀವನ ಮತ್ತು ಸಾಹಿತ್ಯದ ಮಲ್ಲ ಶಾಲೆಯಲ್ಲಿ ಪಳಗಿದ ಯೋಧನೇ ಈ ಅಮೋಘ ಆಯುಧವನ್ನು ಜನೋಪಕಾರಕವಾಗುವಂತೆ ಪ್ರಯೋಗಿಸಬಲ್ಲನು.

ಸಾಹಿತ್ಯವು ಜೀವನದ ಅನಂತ ಅನುಭವಗಳ ಅಭಿವ್ಯಕ್ತಿ. ಇಂಥ ಸಾಹಿತ್ಯವನ್ನು ಸಮೀಕ್ಷಿಸುವ ವಿಮರ್ಶೆ ಸಾಹಿತ್ಯದ ಶಕ್ತಿಯನ್ನೂ ಸ್ಫೂರ್ತಿಯನ್ನೂ ಹಡಗೊಳಿಸಿ, ಜೀವನಕ್ಕೆ ಉತ್ತಮೋತ್ತಮ ಸಂಸ್ಕಾರಗಳನ್ನು ಒದಗಿಸುತ್ತದೆ.

ಜೀವನದಲ್ಲಿ ಉತ್ಕಟ ಶ್ರದ್ಧೆಯುಳ್ಳವನು ಶ್ರೇಷ್ಠ ಸಾಹಿತ್ಯವನ್ನು ಸೃಜಿಸಲು ಸಮರ್ಥನು. ಜೀವನದಲ್ಲಿ ಉದಾತ್ತತೆಯ ಸಾಕ್ಷಾತ್ಕಾರ ಪಡೆದವನು ಉನ್ನತ ವಿಮರ್ಶಕನಾಗಬಲ್ಲನು. ವಿಮರ್ಶೆ ಕಲೆಯಾದರೆ, ಈ ಕಲೆಯ ಸಾಧನದಿಂದ ಸಾಹಿತ್ಯದಲ್ಲಿ ಸತ್ಯವನ್ನು, ಶಿವನನ್ನು, ಸುಂದರವನ್ನು ಪ್ರತಿಷ್ಠಿತಗೊಳಿಸುವ ವಿಮರ್ಶಕನು ಕಲೋಪಾಸಕನಾಗುತ್ತಾನೆ. ಜೀವನದಲ್ಲಿ ಭವ್ಯತೆಯ ದಿವ್ಯತೆಯ ದೃಷ್ಟಿಯನ್ನು ದಯಪಾಲಿಸುವ ದಾರ್ಶನಿಕನಾಗುತ್ತಾನೆ.

ಸಾಹಿತಿಯ ಅಂತರಂಗದ ವಿಶ್ವದಲ್ಲಿ ನಿತ್ಯ ನಡೆಯುವ ಸಂಶೋಧನ ಕಾರ್ಯವನ್ನು ಮೇಲೆ ಪ್ರಸ್ತಾವಿಸಿದ್ದೇನೆ. ಇನ್ನು ಸಾಹಿತ್ಯದ ಬಹಿರಂಗ ಪ್ರಪಂಚದಲ್ಲಿ ನಡೆಯಬೇಕಾದ ಸಂಶೋಧನೆಯ ಕುರಿತು ಎರಡು ಮಾತುಗಳನ್ನು ಹೇಳುವುದು ಆವಶ್ಯಕ.

ನಮ್ಮ ಸಾಹಿತ್ಯದ ಪ್ರಾಚೀನತೆಯ ಕುರಿತು ಅಭಿಮಾನದ ಉದ್ಗಾರಗಳನ್ನು ಹೊರಡಿಸುತ್ತಿರುವಾಗ, ಮರುಕ್ಷಣದಲ್ಲಿ ಅದಕ್ಕೆ ಉಂಟಾಗಿದ್ದ ತುಂಬಲಾಗದ ಹಾನಿಗಾಗಿ ಪರಿತಪಿಸುವ ಶೋಚನೀಯ ಸ್ಥಿತಿನಮ್ಮದಾಗಿದೆ. ಸುಮಾರು ಹದಿನೈದು ನೂರು ವರ್ಷಗಳ ಆಚೆಯಿಂದ ತೊರೆಯಾಗಿ, ನೆರೆಯಾಗಿ ಬಂದ ನಮ್ಮ ಸಾಹಿತ್ಯಗಂಗೆಯಲ್ಲಿ ತೇಲಿ, ನಮ್ಮ ಕೈಗೆ ಸಿಲುಕಿ, ಬೆಳಕು ಕಂಡ ಕೃತಿಗಳಿಗಿಂತ ಕೈಬಿಟ್ಟು ಹೋಗಿ ರಸಾತಳಕ್ಕಿಳಿದು ಬೆಳಕನ್ನೇ ಕಾಣದ ಗ್ರಂಥಗಳ ಸಂಖ್ಯೆ ಅಧಿಕವಾಗಿದೆ. ಕಾಲನ ದವಡೆಗೆ ಸಿಲುಕಿ, ಕಣ್ಮರೆಯಾದ ಹೊತ್ತಿಗೆಗಳ ಮಾತು ಹಾಗಿರಲಿ. ಅಲ್ಲಲ್ಲಿ ಗ್ರಾಮಗಳಲ್ಲಿ, ಮನೆಗಳಲ್ಲಿ, ಮಠಗಳಲ್ಲಿ, ಅಡಕಿಲ ಕೋಣೆಗಳಲ್ಲಿ ಅವಿತುಕೊಂಡು ನಮ್ಮ ಆಲಸ್ಯ ಔದಾಸೀನ್ಯಗಳ ಮೂಲಕ ಹುಡಿಗೂಡಿ ಹೋಗುತ್ತಿರುವ ನಮ್ಮ ನಾಡಿನ ಸಮಸ್ತ ಪುರಾತನ ಸಾಹಿತ್ಯಕೃತಿಗಳ ಉದ್ಧಾರಕ್ಕಾಗಿ ವ್ಯವಸ್ಥಿತವಾದ ಒಂದು ಬೃಹದ್ ಯೋಜನೆಯನ್ನು, ಕಾರ್ಯಕ್ಷಮವಾದ ಮಹಾಸಂಘವನ್ನು ನಾವು ನಿರ್ಮಿಸಿದ್ದೇವೆಯೆ? ಇಲ್ಲವೆಂದು ವಿಷಾದದಿಂದ ಉಸಿರೆಳೆಯಬೇಕಾಗುತ್ತದೆ.

ಸಾಹಿತ್ಯ ಸಂಶೋಧನೆಯ ವಿಷಯವನ್ನು ಆಲೋಚಿಸುತ್ತಿರುವಾಗ ಇನ್ನೊಂದು ರೀತಿಯ ಸಾಹಿತ್ಯದ ಯೋಗಕ್ಷೇಮವನ್ನು ವಿಚಾರಿಸುವುದು ಅವನಿರ್ಯವಾಗಿದೆ. ಇದು ನಮ್ಮ ಶಾಸನ ಭಾಂಡಾರ. ಇದು ನಮ್ಮ ನಾಡಿನ ಹಿರಿಮೆಯ ಸಿರಿಸೌಭಾಗ್ಯ. ಬೇರೆ ಪ್ರಾಂತ್ಯಗಳಲ್ಲಿ ಶಾಸನಗಳು ದೊರೆಯುತ್ತಿದ್ದರೂ ಅವು ಉಪಯುಕ್ತತೆ ಮತ್ತು ಆಂತರಿಕ ಮೂಲ್ಯದ ದೃಷ್ಟಿಯಿಂದ ನಮ್ಮ ಶಾಸನಗಳಿಗೆ ಸರಿದೊರೆಯಾಗಿ ನಿಲ್ಲಲಾರವು. ಚರಿತ್ರೆ, ಸಾಹಿತ್ಯ ಮತ್ತು ಸಂಸ್ಕೃತಿಯ ವಿವಿಧಾಂಗಗಳ ಮೇಲೆ ನಿಶ್ಚಿತಕಾಲ ಜ್ಞಾನದ ಪ್ರಕಾಶವನ್ನು ಬೀರುವ ನಮ್ಮ ಶಾಸನಗಳು ಒಂದು ಬಗೆಯ ಅಪೂರ್ವತೆಯಿಂದ ಒಪ್ಪುತ್ತಿರುವುವು. ಇಂಥ ಶಾಸನಗಳ ಮೇಲ್ಮೆಯನ್ನು ಈ ಯುಗದಲ್ಲಿ– ವಿಶ್ವವಿದ್ಯಾಲಯಗಳು ಭರದಿಂದ ಮುಂದಡಿಯಿಡುತ್ತಿರುವ ಈ ಕಾಲದಲ್ಲಿ, ನಮ್ಮ ಸ್ನಾತಕೋತ್ತರ ವ್ಯಾಸಂಗದಲ್ಲಿ ಸಂಸ್ಕೃತಿಯ ಸಂಶೋಧನೆಯ ಅಗತ್ಯವು ದಿನ ದಿನಕ್ಕೆ ಹೆಚ್ಚುತ್ತಿರುವ ಈ ಸಮಯದಲ್ಲಿ– ನಮ್ಮ ಶಾಸನಗಳ ಮಹತ್ವವನ್ನು ಎತ್ತಿ ತೋರಿಸುವ ಆವಶ್ಯಕತೆಯಿಲ್ಲ. ಚರಿತ್ರೆ, ಭೂಗೋಳ, ಆಡಳಿತಕ್ರಮ, ಸಾಹಿತ್ಯ, ವ್ಯಾಕರಣ, ಭಾಷಾವಿಕಾಸ, ಸಾಮಾಜಿಕ ಸ್ಥಿತಿ, ಧರ್ಮ ಸಂಪ್ರದಾಯಗಳು, ವಿದ್ಯಾಸಂಸ್ಥೆಗಳು, ಮೊದಲಾದುವುಗಳ ವಿಚಾರವಾಗಿ ಅಭ್ಯಾಸಿಗಳಿಗೆ ನಮ್ಮ ಶಾಸನಗಳು ವಿಪುಲವಾಗಿ ಮೂಲ ಸಾಮಗ್ರಿಯನ್ನು ಒದಗಿಸುತ್ತವೆ.

ಆದರೆ ಇಂಥ ಶಾಸನಗಳ ಸಂಗೋಪನ, ಸಂಶೋಧನಾ ಪ್ರಕಾಶನ ಕಾರ್ಯವು ನಮ್ಮಿಂದ ತೃಪ್ತಿಕರವಾಗಿ ನಡೆದಿಲ್ಲವೆಂದು ಖೇದದಿಂದ ಹೇಳಬೇಕಾಗಿದೆ. ಕಾಲನ ವಿಧ್ವಂಸಕ ಕ್ರೀಡೆಯಲ್ಲಿ, ಅಜ್ಞ ಜನಗಳ ಅನಾಸ್ಥೆಯ ಪರಿಣಾಮವಾಗಿ, ನಮ್ಮ ಶಾಸನಗಳಲ್ಲಿ ಅರ್ಧಕ್ಕೆ ಅರ್ಧದಷ್ಟು ಈಗಾಗಲೆ ನಷ್ಟವಾಗಿ ಹೋಗಿವೆ. ಅಳಿದುಳಿದ ಶಾಸನಗಳಾದರೂ ಸಾವಿರದ ಲೆಕ್ಕದಿಂದ ಪರಿಗಣಿಸುವಷ್ಟು ಪ್ರಮಾಣದಲ್ಲಿ ಸುದೈವದಿಂದ ಈ ಹೊತ್ತಿಗೂ ಬಾಳಿವೆ. ಉತ್ತರ ಕರ್ಣಾಟಕದ ಅನೇಕ ಭಾಗಗಳಲ್ಲಿ ಕ್ರಮಬದ್ಧವಾಗಿ ಶಾಸನ ಸಂಶೋಧನ ಇನ್ನೂ ನಡೆಯಬೇಕಾಗಿದೆ. ಇಂಥ ಅಖಿಲ ಶಾಸನ ಸಾಮಗ್ರಿಯನ್ನು ಕೂಲಂಕಷವಾಗಿ ಪರಿಶೋಧಿಸಿ, ಪರಿಶುದ್ಧವಾಗಿ ಪ್ರಕಾಶನಗೊಳಿಸಬೇಕಾದ ಮಹಾಕೃತಿಯ ಮೇರುಪರ್ವತವು ನಮ್ಮನ್ನು ಇದಿರಿಸುತ್ತ ನಿಂತಿದೆ. ಇಂಥ ಸತ್ಕಾರ್ಯವನ್ನು ನೆರವೇರಿಸಲಿಕ್ಕೆ ನಮ್ಮಲ್ಲಿ ಸಾಹಸಬುದ್ಧಿ, ದೂರದೃಷ್ಟಿ, ಸಹಕಾರಭಾವನೆ, ಸಂಘಟನೆ ಮತ್ತು ಯೋಜನೆ ಇವುಗಳ ಆವಶ್ಯಕತೆ ಅತ್ಯಧಿಕವಾಗಿದೆ.

ಅಧ್ಯಕ್ಷ ಭಾಷಣ

ಸಂಶೋಧನಾ ಮತ್ತು ವಿಮರ್ಶಾಗೋಷ್ಠಿಯ ಅಧ್ಯಕ್ಷರಾದ ಪ್ರೊ|| ಸಂ. ಶಿ. ಭೂಸನೂರಮಠ ಅವರು ಮಾಡಿದ ಅಧ್ಯಕ್ಷ ಭಾಷಣ.

ಕನ್ನಡ ಸಾಹಿತ್ಯ ಸಮ್ಮೇಲನ– ಇದೊಂದು ಸಾಂಸ್ಕೃತಿಕ ಮಹೋತ್ಸವ. ಈ ಉತ್ಸವ ನಡೆದಿರುವುದು ವೀರನಾರಾಯಣನ ಗದುಗಿನಲ್ಲಿ– ಇದೊಂದು ಸಾಹಿತ್ಯ ವೀರರ ಮಹಾನಂದ. ಉತ್ಸವದ ನೇತಾರರು ಪ್ರಾ|| ಕೆ. ಜಿ. ಕುಂದಣಗಾರರು– ಇದು ಎಲ್ಲ ಕನ್ನಡಿಗರ ಎದೆಯಲ್ಲಿ ಹೊಮ್ಮುವ ಮೌನ ಅಭಿಮಾನ. ಉತ್ಸವಕ್ಕೆ ನೆರೆದಿರುವ ನಾವೆಲ್ಲ ಮಹಾ ಸಾಹಿತ್ಯ ಸಂಸ್ಕೃತಿಯ ಸದ್ಭಕ್ತರು. ಹೆಚ್ಚು ಮತ್ತೇನು ಬೇಕು.

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಸಮ್ಮೇಲನ, ಕಳೆದ ೪೫–೪೬ ವರ್ಷಗಳಿಂದ ನಾಡಿನ ಹಳ್ಳಿ ಪಟ್ಟಣವೆನ್ನದೆ ಮೂಲೆ ಕೊಂಪೆಗಳೆನ್ನದೆ ಹಿರಿಯ ಕಿರಿಯ ಬಡವ ಬಲ್ಲಿದರೆನ್ನದೆ ಹೆಣ್ಣು ಗಂಡೆನ್ನದೆ ಕುಲ ಜಾತಿ ವರ್ಣ ಆಶ್ರಮ ವೃತ್ತಿ ವ್ಯವಸಾಯವೆನ್ನದೆ ಎಲ್ಲ ನಾಡವರ ತನು ಮನ ಭಾವದಲ್ಲಿ ಸಾಹಿತ್ಯ ಸಂಸ್ಕೃತಿಯನ್ನು ವರ್ಷ ವರ್ಷಕ್ಕೆ ಬಿತ್ತಿ ಬೆಳೆಯುತ್ತ, ಬೆಳೆಸುತ್ತ ಬಂದಿದೆ. ನಾಡು ಕಾಡಾಗದಂತೆ, ಕಾಡು ನಾಡಾಗುವಂತೆ ನೋಡಿಕೊಂಡು ಬಂದಿದೆ ಈ ಮಹಾಸಂಸ್ಥೆ.

ಸುಮಾರು ಅರ್ಧ ಶತಮಾನ ಕಳೆದರೂ ಅಡ್ಡಿಯಿಲ್ಲ, ಗದುಗಿನಲ್ಲಿ ಸಮ್ಮೇಲನ ನಮಗೆಲ್ಲ ಹಿಗ್ಗುವ ಹೆಮ್ಮೆ. ನೃಪತುಂಗನು ಹೇಳುವ 'ವಿದಿತ ಮಹಾ ಕೊಪಣನಗರ'– ಕೊಪ್ಪಳ, ಕಿಸುವೊಳಲ್– ಪಟ್ಟದಕಲ್ಲು, 'ಆ ಪುಲಿಗೆರೆ' ಪ್ರಖ್ಯಾತವಾಗಿದ್ದ ಲಕ್ಷ್ಮೇಶ್ವರ,–ಒಂಕುಂದವನ್ನುಳಿದರೆ ತಿರುಳುಗನ್ನಡದ ಮೂರು ಸೀಮೆಗಲ್ಲಿನ ನಡುವಿರುವ ಗದುಗಿನಲ್ಲಿ, ಆದಿಕವಿ ಪಂಪನ ಅದೇ ಪುಲಿಗೆರೆ, ಚಾಮರಸನ ನಾರಣಪುರ, ಕುಮಾರವ್ಯಾಸನ ಕೋಳಿವಾಡ, ಮುಗ್ಗಿಯ ಮಾಯಿದೇವನ ಐಹೊಳೆ ಮತ್ತೆ ನಮ್ಮ ಶಿಲ್ಪ, ಸಂಗೀತ, ನೃತ್ಯ, ಧರ್ಮನೀತಿ, ಗುಣ, ವಿದ್ಯೆ, ವೀರ ಸಾಹಸ, ಪರಾಕ್ರಮಗಳನ್ನು ಭಂಡಾರಿಸಿಕೊಂಡಿರುವ ವಿಜಯನಗರ, ಲಕ್ಕುಂಡಿ, ಅಣ್ಣಿಗೇರಿ, ಕುಕ್ಕನೂರು, ನರೆಯಂಗಲ್ಲು, ಎರಂಬುರಗೆ, ಇಟ್ಟಗೆ, ಸೂಡಿ, ಅಬ್ಬಿಗೇರಿ, ಬಾದಾಮಿ, ಬನಶಂಕರಿ, ಮಹಾಕೂಟ– ಇನ್ನೂ ಕೆಲವು ಇನ್ನೂ ಹಲವು ಉಜ್ವಲಿಸುತ್ತಿರುವ ಇತಿಹಾಸದ ಪುರಾತನ ಪ್ರಪಂಚದ ನಡುವೆ ಮಲಗಿರುವ ಗದುಗಿನಲ್ಲಿ,– ನನ್ನ ಹುಟ್ಟೂರಾದ 'ನಿಡುಗುಂಡಿಗೆ' ೨೫ ಮೈಲು ಅಳತೆಯಲ್ಲಿರುವ ಗದುಗಿನಲ್ಲಿ ಸಾಹಿತ್ಯ ಸಮ್ಮೇಲನ ಜರುಗಿದರೆ ನನಗೆಷ್ಟು ಆನಂದ! ನಮ್ಮ ಭಾಗದ ಭಾಗ್ಯದ್ವಾರ ತೆರೆಯಿತು. ನಮ್ಮ ಈ ಭಾಗಕ್ಕೆಲ್ಲ ಸಾಹಿತ್ಯ ಸಂಸ್ಕೃತಿಯ ಪುನರ್ಜನ್ಮದೀಕ್ಷೆಯಾಯಿತೆಂದೇ ನನ್ನ ಭಾವನೆ. ಈ ಪವಿತ್ರ ಭಾವನೆ ಆಳದಿಂದ ಒಡಮೂಡಿ ನಿಮ್ಮ ಎದೆಯಲ್ಲಿಯೂ ನಿಂದಿರಬಹುದಲ್ಲವೇ? ಹೀಗೆ ಹೇಳುವುದೆಲ್ಲ ಪುನರುಕ್ತ, ಆದರೆ ದೋಷವಲ್ಲ. ಏಕೆಂದರೆ ಪವಿತ್ರದ, ಉಜ್ವಲದ, ಪುನಃ ಸ್ಮರಣೆ ಪುನಃ ಪುನಃ ಪಠನ ಪುಣ್ಯ. ಮಹಾಪುಣ್ಯ!

ಮತ್ತೊಂದು ಮಾತು. ಕೇವಲ ಪುಣ್ಯಾಕಾಂಕ್ಷೆಯಿಂದ ಮೇಲೆ ಹೇಳಿರುವ ಇತಿಹಾಸಪ್ರಸಿದ್ಧ ಸ್ಥಳ ಕವಿ ತತ್ವಜ್ಞಾನಿ ಮುಂತಾದವರ ಉಲ್ಲೇಖ ಮಾಡಿಲ್ಲ. ಇವೆಲ್ಲ, ಇತಿಹಾಸವರಿಯದ ಇನ್ನೂ ಹಲವೆಲ್ಲ ಸಂಶೋಧನೆಯ ಪುಣ್ಯಕ್ಷೇತ್ರಗಳೆ.

ಸಂಶೋಧನೆಯ ಕ್ಷೇತ್ರಗಳು! ಇಂಥ ಹೊಲಗಳು,– ಮಾನವನ ವೀರ್ಯ ಧೈರ್ಯ ಸಾಹಸಗಳನ್ನು, ಆತನ ವಿದ್ಯೆ ಕಲೆ ವಿಜ್ಞಾನ ಶಾಸ್ತ್ರಗಳನ್ನು, ಆತನ ಗುಣ ಶೀಲ ನೀತಿ ಚರಿತೆಗಳನ್ನು, ಆತನ ನಾಗರಿಕತೆ ಸಂಸ್ಕೃತಿ ಸಂಪದ್–ವೈಭವಗಳನ್ನು, ಆತನ ಸುಖ–ಶಾಂತಿ ನೆಮ್ಮದಿಗಳನ್ನು, ಆತನ ಸತ್ತು ಜ್ಯೋತಿ ಅಮೃತ ವಿಲಾಸಗಳನ್ನು ಸಾವಿರ ಸಾವಿರ ವರ್ಷಗಳಿಂದ ಬೆಳೆದು ಬೆಳೆದು ಮತ್ತೆ ಈ ರಾಶಿಯನ್ನು ತನ್ನಲ್ಲಿಯೇ ಹುದುಗಿಸಿಕೊಂಡು, ಶಾಸನ ಸ್ತಂಭಗಳಲ್ಲಿ ಓಲೆಯ ಗರಿಗಳಲ್ಲಿ, ನಿಷದಿಗಲ್ಲು ವೀರಗಲ್ಲು ಮಾಸತಿಗಲ್ಲುಗಳಲ್ಲಿ, ಕೆರೆ ಗುಡಿ ಗುಹೆ ಬಸದಿಗಳಲ್ಲಿ, ಕೋಟೆ ಕೊತ್ತಳ ಹುಡೆ ಅಸ್ತ್ರ ಶಸ್ತ್ರ ಕವಚ ಶಿರಸ್ತ್ರಾಣಗಳಲ್ಲಿ, ತಾಮ್ರ ಬೆಳ್ಳಿ ಬಂಗಾರದ ನಾಣ್ಯ ಆಭರಣಗಳಲ್ಲಿ, ದೀಕ್ಷೆ ಉಪನಯನ ಮದುವೆ ಹಬ್ಬ ಹುಣ್ಣಿಮೆ ಜಾತ್ರೆ ಉತ್ಸವ ಹೆಸರು ದೆಸೆ ವಾರತಿಥಿಗಳ ಧರ್ಮ ಪರಂಪರೆಯಲ್ಲಿ ಮೇಲೆ ಕುರುಹುದೋರುತ್ತಿರುವ ಇಂಥ ಪೂರ್ವದ ಪುಣ್ಯಕ್ಷೇತ್ರಗಳು, ಕಣ್ಣು ಚೆಲ್ಲಿದಲ್ಲಿ ಚೆಲ್ಲುವ ಮೊದಲೇ ಎಲ್ಲೆಲ್ಲಿ ಎದ್ದು ನಿಂತಂತಿವೆ. ಕಿವಿಕೊಟ್ಟು ಕೇಳಿದರೆ ನಾಡಿನ ಕಲ್ಲು ಮಣ್ಣೆಲ್ಲ ನಮ್ಮ ಪುರಾತನ ಸಂಸ್ಕೃತಿಗೀತವನ್ನು ವಿರಾಮವಿಲ್ಲದೆ ಹಾಡು

ವಂತಿವೆ. ಮಲಗಿರುವ ನಾವು ಎಚ್ಚರವಾಗಿ ಪುರಾತನ ಅವಶೇಷಗಳ ಮರೆಯಲ್ಲಿ ಮೂರ್ತಿಗೊಂಡು, ನಮ್ಮ ಪೂರ್ವಜರ ಉಜ್ವಲ ಪರಂಪರೆಯನ್ನು ಘೋಷಿಸುತ್ತಿರುವ ಗತಕಾಲ ಪುರುಷನ ಸಂದರ್ಶನ ಮಾಡಿಕೊಳ್ಳುವುದೇ ಸಂಶೋಧನೆ ಎಂದು ನಾನು ಹೇಳಿದರೆ ನಿಮ್ಮ ಅಭಿಪ್ರಾಯವೇನು?

ಇದೆಲ್ಲ ಹಿಂದಿನ ಕಥೆಯಾಯಿತು, ಮುಂದೇನು? ಎಂದು ನೀವು ಕೇಳಬಹುದು. ಮುಂದೆ ಇದೆ, ಆದರೆ ಹಿಂದನ್ನು ಬಿಟ್ಟು ಮುಂದು ಇಲ್ಲ. ಹಿಂದನ್ನು ಹಿಡಿದೇ ಮುಂದನ್ನು ಸಾಧಿಸಬೇಕು. ಹಿಂದಿನದನ್ನು ಹಿಂದೆ ಬಿಟ್ಟು ಮುಂದೆ ನಡೆವೆನೆಂದರೆ ಕೈದು ಮರೆದು ಕಳಕ್ಕೆ ಇಳಿವಂತೆ. ಹಿಂದಿನ ಸತ್ವಸಾರದ ಮೇಲೆ ಭವಿಷ್ಯದ ನವ್ಯ ಭವ್ಯತೆಯನ್ನು ಬೆಳೆಯಬೇಕು.

ಇಂದು ಸಂಶೋಧನೆಯ ಅರ್ಥ ಹಿಂದಿನ ಮಿತಿಯನ್ನು ಮೀರಿ ಬಹಳ ದೂರ ಹೋಗಿದೆ. ಮಾನವನನ್ನು ಸುತ್ತಿದ ಜಡಾಜಡ ಪ್ರಪಂಚವೆಲ್ಲ ಸಂಶೋಧನೆಯ ಮಹಾಕ್ಷೇತ್ರವಾಗಿದೆ. ಇಂಥ ಹರವಿದ ಹೊಲದೊಡೆಯ ತಾನೆಂದೆ ತಿಳಿದಿರುವ ಮಾನವನೂ ಸಂಶೋಧನೆಗೆ ಗುರಿಯಾಗಿದ್ದಾನೆ. ಇದು ಒಳ್ಳೆಯದೆ. ಪರಮಾಣುವಿನಿಂದ ಪರಮಾಕಾಶದವರೆಗೆ ಹಬ್ಬುತ್ತಿರುವ ಸಂಶೋಧನೆಯ ಕ್ಷೇತ್ರದಲ್ಲಿ ಕನ್ನಡಿಗ ಅಥವಾ ಭಾರತೀಯನ ಬುದ್ಧಿ ಮಂಕಾಗಿದೆ. ನಡೆವ ಕಾಲಲ್ಲಿ ಶಕ್ತಿಯಿಲ್ಲ, ಮಾಡುವ ಕೈಯಲ್ಲಿ ಕುಶಲವಿಲ್ಲ, ನುಡಿವ ನಾಲಗೆಯಲ್ಲಿ ಶಬ್ದವಿಲ್ಲ, ನೋಡುವ ಕಣ್ಣಲ್ಲಿ ತೇಜವಿಲ್ಲದಂತಾಗಿದೆ. ಅಣುವಿನಲ್ಲಿ ಅಪಾರವಾದ ಬಯಲು, ಮೇರುವಿನ ಚೈತನ್ಯ ಶಕ್ತಿಯನ್ನು ಸಂಶೋಧಿಸಿ ಕಂಡಿದ್ದಾನೆ ಅಣುವಿಜ್ಞಾನಿ. ರಾಕೆಟ್ ಸ್ಪುಟ್ನಿಕ್ಕುಗಳಿಂದ ಬಯಲನ್ನು ಬಗಿದು ನೋಡುತ್ತಿದ್ದಾನೆ ಆಕಾಶವಿಜ್ಞಾನಿ. ಟೆಲಿಫೋನ್, ಟೆಲಿವ್ಹಿಜನ್, ರೇಡಿಯೋ, ಜೆಟ್‌ಪ್ಲೇನುಗಳೆಲ್ಲ ನಿಮಿಷ ನಿಮಿಷಾರ್ಧದಲ್ಲಿ ಬಿಡುವಿಲ್ಲದೆ ವಿಜ್ಞಾನಿ ನಡೆಸಿರುವ ವೈಜ್ಞಾನಿಕ ಸಂಶೋಧನೆ (Scientific Research)ಯ ಪ್ರತ್ಯಕ್ಷ ಫಲಗಳೆ. ಶರೀರಶಾಸ್ತ್ರ ಮನಃಶಾಸ್ತ್ರ ಪ್ರಾಣಶಾಸ್ತ್ರ ವನಸ್ಪತಿಶಾಸ್ತ್ರ ಭೂಗರ್ಭ ಖಗೋಳ ಶಾಸ್ತ್ರಗಳೆಲ್ಲ ವೈಜ್ಞಾನಿಕ ಸಂಶೋಧನೆಯ ಪರಿಣಾಮ ಸಂತತಿಯೇ. ಉದ್ಯೋಗದಲ್ಲಿ ಸಂಶೋಧನೆ (Industrial Research) ಹುಟ್ಟುವಳಿಯಲ್ಲಿ ಸಂಶೋಧನೆ, ಭಾಷೆ ಶಬ್ದದಲ್ಲಿ ಸಂಶೋಧನೆ, ಔಷಧ ಉಪಚಾರದಲ್ಲಿ ಸಂಶೋಧನೆ— ಹೀಗೆ ನೋಡುತ್ತ ಆಯಿನ್‌ಸ್ಟೀನ್, ಭೋರ್, ಹೇಸನ್‌ಬರ್ಗ್, ಪಾವ್‌ಲಾವ್ ಯೆಸ್ಪರ್ಸನ್ ಮುಂತಾದ ವಿಜ್ಞಾನ ಮಹರ್ಷಿಗಳ ಕಡೆ ಹೋದರೆ, ಅವರ ಪ್ರಯೋಗಶಾಲೆಯಲ್ಲಿ ನಾಲ್ಕೆಂಟು ದಿನ ನಿಂತು ನೋಡಿದರೆ ಸಂಶೋಧನೆಯ ಗಂಭೀರ ರಹಸ್ಯ, ಸಂಶೋಧನೆಯ ವಿಶ್ವವ್ಯಾಪ್ತಿ ಸಮ್ಯಕ್ಕಾಗಿ ಮನದ ಮುಂದೆ ನಿಲ್ಲುತ್ತದೆ.

ನಾವು ಈ ಸಂಶೋಧನೆ ಮತ್ತು ವಿಮರ್ಶೆಯ ಗೋಷ್ಠಿಯಲ್ಲಿ ಸಾಹಿತ್ಯ ಸಂಶೋಧನೆ, ಸಾಹಿತ್ಯ ವಿಮರ್ಶೆಯನ್ನೆ ಕೇಂದ್ರಬಿಂದುವನ್ನಾಗಿ ಇಟ್ಟುಕೊಂಡು ವಿವೇಚಿಸಬೇಕು, ಪರ್ಯಾಲೋಚಿಸಬೇಕು, ವಿಚಾರಿಸಬೇಕು, ಚರ್ಚಿಸಬೇಕು, ಎಂಬ ಅರಿವು ನನಗಿದೆ. ಆದರೆ ಆಶೆ ಕೆಟ್ಟದ್ದು! ನಮ್ಮ ಸಂಶೋಧನೆ ಕೇವಲ ಸಾಹಿತ್ಯಕ್ಷೇತ್ರಕ್ಕೆ ಮರ್ಯಾದಿತವಾಗಿರದೆ ಇಂದು ವಿಜ್ಞಾನ ವಿಚಾರ ಶಾಸ್ತ್ರದ ಕಾಲದಂದು, ಕನ್ನಡಿಗರ ಶೋಧನಾತ್ಮಕ ಬುದ್ಧಿ ಜಡಾಜಡದ ಹೊಲದಲ್ಲೆಲ್ಲ ದುಡಿದು, ಆಯಾ ವಿಶಿಷ್ಟ ಕ್ಷೇತ್ರಕ್ಕೆ ತಕ್ಕಂತೆ ಸಾಪೇಕ್ಷವಾದ ಗುರುತ್ವಾಕರ್ಷಣವಾದ ಮನೋವಿಶ್ಲೇಷಣವಾದ ಅನಿಶ್ಚಿತತತ್ವವಾದ (Principle of indeterminacy) ಸಮಾಜವಾದ ಮುಂತಾದ ಹೊಸಹೊಸವಾದ ತತ್ವಗಳನ್ನು, ಹೊಸ ರೇಡಿಯೋ ಹೊಸ ಆಕಾಶಯಾನಗಳನ್ನು, ಮತ್ತೆ ಇನ್ನೂ ಮನುಷ್ಯನ ಕನಸು ಮನಸಿನಲ್ಲಿ ಇಲ್ಲದ ಪರುಷದ ಖನಿಗಳನ್ನು ಅಗಿದು, ವಿಶ್ವ ಸುಖ ಶಾಂತಿ ಕಲ್ಯಾಣದ ಸಾಧನಗಳಾದ ನವ್ಯ ವಿಜ್ಞಾನ ಯಂತ್ರರಾಶಿಗಳನ್ನು ಬೆಳೆಯಲೆಂಬ ಆಶೆಯಿಂದಲೇ ನಮ್ಮ ಹೊಲ ಬಿಟ್ಟು ಎಲ್ಲೆಲ್ಲೊ ಅಡ್ಡಾಡಿದೆ. ಒಬ್ಬ ಆಯಿನ್‌ಸ್ಟೀನ್, ಒಬ್ಬ ರುಥರ್‌ಫೋರ್ಡ್, ಒಬ್ಬ ವಿಲಿಯಮ್ ಜೇಮ್ಸ್ ನಮ್ಮ ಕನ್ನಡ ನೆಲ ನೀರಿನಲ್ಲಿ ಉದಯವಾಗಿ ಕನ್ನಡದ ಬಯಲಲ್ಲಿ ಜಗದೆತ್ತರವಾಗಿ ನಿಲ್ಲಬಹುದೇ? ಎಂಬ ಆಕಾಂಕ್ಷೆ ಎದೆಯಲ್ಲಿ ಹುಟ್ಟಿ ನೆಗೆದು ಹಾರಾಡಿತು. ದಯವಿಟ್ಟು ಮನ್ನಿಸಿರಿ.

ಸಮ್ಯಕ್ಕಾದ ಅಂದರೆ ಲೇಸಾದ, ಚೆನ್ನಾದ ಶೋಧನೆಯೇ ಸಂಶೋಧನೆ ಎಂಬ ಮಾತು ನಿಮಗೆ ಚೆನ್ನಾಗಿ ಗೊತ್ತು. ಹುಡುಕುವುದು ಮತ್ತೆ ಹುಡುಕುವುದು, ಸೋಸಿ ನೋಡುವುದು ಸೋಸಿ ಕೊಳ್ಳುವುದು ಸಂಶೋಧನೆ. ಸಾಹಿತ್ಯ ಸಮ್ಮೇಲನದ ಒಂದು ಭಾಗದಲ್ಲಿ ನಡೆದ ಈ ಸಂಶೋಧನೆಯ ಗೋಷ್ಠಿಯಲ್ಲಿ ಸಂಶೋಧನೆಯ ಅರ್ಥವ್ಯಾಪ್ತಿಯನ್ನು ಕನ್ನಡ ಸಾಹಿತ್ಯಕ್ಕೆ, ನಮ್ಮ ಪುರಾತನ ಗದ್ಯ ಪದ್ಯ ಸಾಹಿತ್ಯ ಗ್ರಂಥಗಳಿಗೆ ಮೇರೆಗೊಳಿಸಿ ಕೆಲವೊಂದು ಮಾತನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಇಲ್ಲಿ ಇಡುವ ಮಾತು ಪಂಡಿತರು, ತಜ್ಞರು, ಕೇಳತಕ್ಕ ವಿಷಯವೇನೂ ಅಲ್ಲ;

ಆದ್ದರಿಂದ ಅವರು ಇಲ್ಲಿ ತಲೆದೋರುವ ತಪ್ಪನ್ನು ತಿದ್ದಿದರೆ ಸಾಕು.

ಅಥವಾ ಮಾತು ಸಾಕು, ಬೇಸರ ಬಂದಿದೆ, ವಿಷಯ ನೀರಸ-ಎಂದು ಹೇಳುವಿರಾ? ಹಾಗಿದ್ದರೆ ನಾನೂ ಈ ಸಾಹಿತ್ಯದ ಹಬ್ಬದಲ್ಲಿ ಪಾಂಡಿತ್ಯಪ್ರಚುರವಾದ ಭಾಷಣದ ಹಂಗನ್ನು ಇಟ್ಟುಕೊಂಡಿಲ್ಲ. ಮುಂದೆ ಇಲ್ಲಿಯೇ ರಸದ ಒರತೆಗಳಿವೆ. ಇದರ ವಿಶೇಷವೆಂದರೆ ಹಾಡುವ ಒರತೆಗಳು ಇವು. ಎಂದೂ ಬತ್ತದ ಈ ಒರತೆಯಲ್ಲಿ ರಸವಾಡುಗಳ ರಸಪಾನ ಮಾಡಿ, ಹೃದಯದ ಹೊಟ್ಟೆಯನ್ನು ತಣ್ಣಗೆ ಮಾಡಿ, ಭಾವದ ಬಯಲ ಬೆಳುದಿಂಗಳಲ್ಲಿ ಕೆಲಹೊತ್ತು ವಿಶ್ರಮಿಸಿ ಮುಂದೆ ನಡೆಯೋಣವೇ?

ಇದೋ ಇಲ್ಲಿ ಬನ್ನಿ. ಆದಿಕವಿ ಪಂಪದೇವನ ಕಾವ್ಯ ರಸದ ಚಿಲುಮೆಯಲ್ಲಿ ಚಿಮ್ಮುವ ಹಾಡನ್ನು ಕಿವಿಯಿಂದ ಕುಡಿದು ಕೇಳಿ:

> ಪಿಡಿಯೆಂ ಚಕ್ರಮನೆಂಬ ಚಕ್ರಿಯನಿಳಾಚಕ್ರಂ
> ಭಯಂಗೊಳ್ವಿನಂ |
> ಪಿಡಿಯಿಪ್ಪೆಂ ಕರಚಕ್ರಮಂ ನರರಥಂ ತೂಳ್ದಾ
> ಕುರುಕ್ಷೇತ್ರದಿಂ ||
> ಪಡುವೆಣ್ಗಾವುದು ಪೋಗೆ ಪೋ ಗಡಿಸುವೆಂ ನಿಚ್ಚಂ
> ಧರಾಧೀಶರಂ |
> ಪಡಲಿಟ್ಟಂತಿರೆ ಮಾಳ್ಪೆನೋವದೆ ಪಯಿಂಭಾಸಿರ್ವರಂ
> ಯುದ್ಧದೊಳ್ ||

'ಕಣ್ಗೆಟ್ಟ ಮುದುಪಂಗೆ' ಭಾರತ ಯುದ್ಧದ ವೀರಪಟ್ಟವನ್ನು ಕಟ್ಟುವುದೇ? ಪಗೆವರ ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ ಎಂದು ಒಡ್ಡಿದ ಓಲಗದಲ್ಲಿ ಭೀಷ್ಮಾಚಾರ್ಯರ ಮುಪ್ಪಾದ ಸಮರಸಾಮರ್ಥ್ಯವನ್ನು ನೆಲಕ್ಕಿಕ್ಕಿ, ಕಲಿತನದ ಉಕ್ಕು ಜವ್ವನದ ಸೊಕ್ಕಿನಿಂದ ತನ್ನ ಪರಾಕ್ರಮವನ್ನು ಮುಗಿಲಿಗೇರಿಸಿ ನುಡಿವ ಕರ್ಣನಿಗೆ ಪ್ರತಿಯಾಗಿ ಭೀಷ್ಮಾಚಾರ್ಯರು, ಭಾರತಯುದ್ಧದಲ್ಲಿ ತನ್ನ ಚಕ್ರವನ್ನು ಹಿಡಿವುದಿಲ್ಲ ಎಂಬ ಭಾಷೆಯ ಶ್ರೀಕೃಷ್ಣನಿಂದ ಭೂಮಂಡಲವೆಲ್ಲ ಭಯದಿಂದ ಆಕುಲವಾಗುವಂತೆ ಚಕ್ರವನ್ನು ಎತ್ತಿಸುತ್ತೇನೆ ಎಂದು ಮುಂತಾಗಿ ಕೊಡುವ ವಿಭೀಷಣ ಭಾಷೆ ಎಷ್ಟೊಂದು ಪ್ರಳಯಸುಂದರವಾಗಿದೆ!

ಮತ್ತೆ ಇಲ್ಲಿ ಬನ್ನಿ. ಭೀಮ ದುರ್ಯೋಧನರಲ್ಲಿ ನಡೆದ ಗದಾಯುದ್ಧದ ಭೈರವ ಸಂಭ್ರಮ! ಸ್ವಲ್ಪ ದೂರ ಸರಿದು ನಿಲ್ಲಿ.

> ಚರಣಾಕ್ರಾಂತಂ ಮಹೀಮಂಡಲಮುದಿರೆ,
> ಭುಜಾಕ್ರಾಂತಮಾಶಾಗಜೇಂದ್ರೋ |
> ತ್ಕರಮಾಶಾಭಿತ್ತಿಯಿಂದಂ ಪೆರೆದೆಗೆಯೆ,
> ಗದಾಕ್ರಾಂತಮುದ್ಭ್ರಾಂತವಿದ್ಯಾ ||
> ಧರಚಕ್ರಂ ಗೆಂಟುಗೆಂಟಾಗಿರಿಸೆ ನಿಜವಿಮಾನಂಗಳಂ,
> ಭೈರವಾಡಂ |
> ಬರಮಾಕಲ್ಪಾಂತಕಾಲಂ ನೆಗಳ್ದುದು ಸಮರಂ
> ಭೀಮದುರ್ಯೋಧನೀಯಂ ||

ಕವಿಚಕ್ರವರ್ತಿ ರನ್ನನ ಈ ಮಾತಿನಲ್ಲಿ ರೌದ್ರ ಸಿಡಿಲಿನಂತೆ ಭಾವವನ್ನಪ್ಪಳಿಸಿ 'ರಸದಿಂದ 'ಸರ್ವತಃ' ಸಂಪ್ಲುತೋದಕ' ವನ್ನಾಗಿಸುವುದಲ್ಲವೇ?

ಮತ್ತೆ ಹತ್ತಿರದಿಂದ ಇಲ್ಲಿ ಹನ್ನೆರಡನೆಯ ಶತಮಾನದ ಮಹಾದೇವಿಯಕ್ಕನ ಬಳಿ ಬನ್ನಿ. ನಾದ ಜ್ಯೋತಿ ಅಮೃತ ಒರೆಯುತ್ತಿರುವ 'ಯೋಗಾಂಗ ತ್ರಿವಿಧಿ' ಯನ್ನು ಕಿವಿಯಿಂದ ಸವಿನೋಡಿ:

> ಮೊರೆವ ನಾದವ ಕೇಳಿ | ಉರಿವ ಜ್ಯೋತಿಯ ನೋಡಿ |
> ಸುರಿವ ಅಮೃತವನು ಸವಿದುಂಡ ಕಾರಣದಿ |
> ತೊರೆದಿಹನು ಜನನ ಮರಣಗಳ ||

ಮತ್ತೆ ಪ್ರಭುದೇವರ 'ಮಾತಾಡಲಿಲ್ಲದ' ಶಬ್ದದೊಳಗಿಂದ ಧೀಂಕಿಡುವ 'ನೋಡಲಿಲ್ಲದ ಶೃಂಗಾರ'ವನ್ನು ನೀವೇ ನೋಡಿ:

> ನೋಡಲಿಲ್ಲದ ಶೃಂಗಾರ, ಮಾತಾಡಲಿಲ್ಲದ ಶಬ್ದ,
> ಬೇಡಲಿಲ್ಲದ ವರಂ. ನೋಡಿರೇ ನಿರಾಳವನು,
> ಬಾಡಲಿಲ್ಲದ ಶಶಿಯ ಬೆಳಗು, ಕೂಡದೆ ಕೂಡಿತ್ತೊಂದು
> ಸುಖವ ಕಂಡೆ ನಾನು. ಇಲ್ಲದ ಉಪಕಾ (ಚಾ ?) ರ |
> ನಿಲ್ಲದ ಸವಿಯಿಂದ ಸುಖಿಯಾದೆ ಗುಹೇಶ್ವರಾ!

ಇಂಥ ಗುಹೇಶ್ವರನನ್ನು ಕುಡಿದು ಮೌನಸಮಾಧಿಯಲ್ಲಿ ಆನಂದಿಸಬೇಕಲ್ಲದೆ ನಾಲಗೆಗೆ 'ಕೀಲಿ'ಯನ್ನು ಕೊಡಬಾರದು.

ಮುಂದೆ ಮೂಡಲಿರುವ ಭಾರತಯುದ್ಧದಲ್ಲಿ ಪಾಂಡವರಿಗೆ ಬೆಂಬಲವಾಗಲು ಬರುತ್ತಿರುವ ನೃಪವ್ರಾತವನ್ನು ನೋಡಿ:

> ದೆಸೆಗಳೆಂಟರ ಮೂಲೆ ಬಿರಿಯಲು |
> ಪಸರಿಸಿತು ಹಳೆ ಬೊಮ್ಮಗಹುದೇ |
> ಹೊಸ ವಿಧಾತ್ರನ ಸೃಷ್ಟಿಯಿದು ಹೆಸರೇನು ಹೊಗಳುವರೆ ||
> ಕುಸಿಯನೇ ಕೂರುಮನು ಭಾರಕೆ |
> ನಸಿಯನೇ ನಾಗೇಂದ್ರನಾನೆಗ |
> ಉಸರು ಹದುಳವೆ ನೋಡೆನಲು ಬಂದುದು ನೃಪವ್ರಾತ ||

ವೇದವ್ಯಾಸನ ಕುಮಾರ ತಾನೆಂದಿರುವ ಕುಮಾರವ್ಯಾಸ, ನಾರಾಯಣಪ್ಪನ ನೃಪವ್ರಾತದ ಚಲತ್‌ಚಿತ್ರ ನೋಡುವ

ಕಣ್ಣು ನೋಡಲಾರದೆ ಮುರಿದು ಬೀಳುವಷ್ಟು ಬ್ರಹ್ಮ ರಮಣೀಯವಾಗಿದೆ! ಕವಿ ಹೆಳೆಯ ಬೊಮ್ಮನಲ್ಲ, ಹೊಸ ವಿಧಾತ್ರ. ಕಾವ್ಯ ಈ ವಿಧಾತ್ರನ ಸೃಷ್ಟಿ.

ಹೀಗೆಯೇ ಈ ನವ್ಯ ಸೃಷ್ಟಿಯಲ್ಲಿ ಸಂಚರಿಸುತ್ತ ರಸಸೌಂದರ್ಯವನ್ನು ನೋಡುತ್ತ ಕುಡಿಯುತ್ತ ಹೋದರೆ ಹೃದಯ ರಸೋನ್ಮತ್ತವಾದೀತು! ಇಂಥ ರಸದ ಸೃಷ್ಟಿಯೇ ಕಾವ್ಯ. ಇಂಥ ಕಾವ್ಯ ಕವಿಯ ರಸಪ್ಲುತ ವಾದ ಹೃದಯದಿಂದ ಹೊಮ್ಮುವುದು ಭುವನದ ಭಾಗ್ಯ, ಮಾನವನ ಮಹಾ ಕಲ್ಯಾಣೋದಯ. ನನ್ನ ಈ ಮಾತಿನಲ್ಲಿ ನಂಬಿಗೆ ಹುಟ್ಟದಿದ್ದರೆ ಸಮ್ಮೇಲನದ ಕೊನೆಯಂಚಿನಲ್ಲಿ ಕುಳಿತು ಹಾಡುತ್ತಿರುವ 'ಶೃಂಗಾರ ಕಾರಾಗೃಹ' 'ಕವಿರಾಜ ಕುಂಜರ' ನೇಮಿಚಂದ್ರ ಈ ಸಂದರ್ಭದಲ್ಲಿ ತರಿಸಂದು ನುಡಿವ ನುಡಿಯನ್ನು ಕೇಳಿ :

> ಬೆಲೆಯಿಂದಕ್ಕುಮೆ ಕೃತಿ ಗಾ ।
> ವಿಲ ಭುವನದ ಭಾಗ್ಯದಿಂದಮಕ್ಕುಂ ನೋಳ್ಪಂ ॥
> ಬೆಲೆಗೊಟ್ಟು ತಾರ ಮಧುವಂ ।
> ಮಲಯಾನಿಲನಂ ಮನೋಜನಂ ಕೌಮುದಿಯಂ ॥

ಒಂದು ಕೋಟಿಯಲ್ಲ, ನೂರು ಕೋಟಿ ಹೊಂಗಳನ್ನು–ಕೊಟ್ಟರೆ ಒಬ್ಬ ಶೆಕ್ಸಪಿಯರ್ ಒಬ್ಬ ಡಾಂಟೆ ಒಬ್ಬ ಪಂಪ ಒಬ್ಬ ಪ್ರಭು ಒಂದು ಮಹಾಕೃತಿಯನ್ನು, ವಿಶ್ವಾದರಣೀಯವಾದ ಒಂದು 'ಜ್ಯೋತಿರ್ಲಿಂಗ'ವನ್ನು ಜಗತ್ತಿಗೆ ಕೊಡಬಹುದೇ? ಮಹಾಕೃತಿ ಭುವನದ ಮಹಾಭಾಗ್ಯ.

ಸಂಶೋಧನೆಯ ವಿಷಯವಾಗಿ ಗೋಷ್ಠಿ ನಡೆದಿರುವಾಗ ನುಡಿಯುತ್ತಿರುವ ಈ ಪ್ರಲಾಪವೇನು?–ಎಂದು ನೀವು ಕೇಳಬಹುದು. ಮೊದಲು ನಾನು ನಿಮ್ಮಲ್ಲಿ ಬಿನ್ನವಿಸಿಕೊಂಡಿರುವಂತೆ ನಡೆದಿರುವುದು ಸಾಹಿತ್ಯೋತ್ಸವ, ಭಾಷಣದ ಉಪಚಾರ ನನ್ನ ಎದೆಯಲ್ಲಿಲ್ಲ. ಈ ಹಂಗು ಹರಿದ ಬಳಿಕ ಸುಸಂಬದ್ಧದ ಮಾತೆಲ್ಲಿ? 'ಒಲು ಲುಮೆಯಾ ಕೂಟಕ್ಕೆ ಹಾಸಿಗೆಯ ಹಂಗೇಕೋ?'

ಆದರೂ ನಿಮ್ಮ ಮುಂದೆ ರಸಪದ್ಯಗಳನ್ನಿರಿಸಿದ ಉದ್ದೇಶವೆಂದರೆ, ನಮ್ಮ ಕವಿ ಸತ್ಕವಿ ಮಹಾಕವಿಗಳ ಕೃತಿಗಳು ಬೆಳಕಿಗೆ ಬಂದಿರುವುದು, ಬರುತ್ತಿರುವುದು ಪುರಾತನ ಕಾವ್ಯಭಕ್ತರಾದ 'ಸಂಶೋಧಕ'ರಿಂದ. ಅತ್ಯಂತ ಶ್ರದ್ಧೆಯಿಂದ ತಾಡವೋಲೆಯ ಪ್ರತಿಗಳನ್ನು ದೊರಕಿಸಿಕೊಂಡು, ಕಣ್ಣಲ್ಲಿ ಕಣ್ಣಿಟ್ಟು ಓದಿ, ಅಭ್ಯಾಸ ಮಾಡಿ, ಪದ ಪದದ ಅರ್ಥವನ್ನು ಚೆನ್ನಾಗಿ ತಿಳಿದುಕೊಂಡು, ಭಾಷೆ, ವ್ಯಾಕರಣ, ಛಂದಸ್ಸು, ಸಂಗೀತ ಶಾಸ್ತ್ರಗಳಿಗೆ ಪದ್ಯಗಳನ್ನು ಸಮನ್ವಯಗೊಳಿಸಿ, ಕಾವ್ಯ ಮತ್ತು ಪದ್ಯಗಳ ಸಮಗ್ರ ಭಾವರಸವನ್ನು ಆಳಕ್ಕಿಳಿದು ನೋಡಿ, ಪ್ರತಿ ಪ್ರತಿಗಳಲ್ಲಿರುವ ವಿಭಿನ್ನ ಪಾಠಗಳಲ್ಲಿ ಕವಿ ಹೇಳಿರಬಹುದಾದ ಮೂಲಪಾಠವನ್ನು ಹುಡುಕಿ, ಸೋಸಿನೋಡಿ, ಕಾವ್ಯದ ಕರ್ತೃವಾದ ಕವಿಯ ಸಮಿ ಸಮೀಪಕ್ಕೆ ಹೋಗಿ, ಕವಿಯನ್ನು ಕಂಡು ನೋಡಿ ಮುಟ್ಟಿನೋಡಿ, ಕವಿಯ ಹೃದಯದಲ್ಲಿ ಮೂಡಿ ಅರ್ಥವುಳ್ಳ ಶಬ್ದದಲ್ಲಿ ಮೂರ್ತಿಗೊಂಡಿರುವ ಮೂಲ ಕಾವ್ಯವನ್ನೆ ನಮಗೆ ಸಿದ್ಧಮಾಡಿಕೊಡುವ ರಸಶರಣರು ಅವರು. ಈ ಸತ್ಯಾರ್ಥದಲ್ಲಿ ಇಂದಿನ ಸಂಶೋಧಕರೆಲ್ಲ ಸಂಶೋಧಕರೇ? ಎಂದು ನೀವು ಪ್ರಶ್ನೆ ಹಾಕಿದರೆ, ನಿಮ್ಮ ಪ್ರಶ್ನೆಗೆ ಉತ್ತರ ನನ್ನ ಪ್ರಶ್ನೆ : ಎಲ್ಲ ಮನುಷ್ಯರು ಮನುಷ್ಯರೇ? 'ಹುಣಸೆಯ ಹೂವೆಲ್ಲ ಕಾಯಾಗಬಲ್ಲುವೇ?' ಹಾಗಾದರೆ ನೀವು? ಎಂದು ಕೇಳಿದರೆ ನನ್ನನ್ನೂ ನಿಮಗೆ ಹೇಳುತ್ತೇನೆ. 'ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ,' ಎಂಬ ಮಾತನ್ನು ನೀವು ಕೇಳಿರಬಹುದು. ಈ 'ಸಾವಿರಕ್ಕೊಬ್ಬ ಸತ್ಯ' ಎಂಬ ಕೋಟಿಯಲ್ಲಿ ನಾನಿದ್ದೇನೆಯೇ ಎಂಬ ಬಲವಾದ ಸಂಶಯ ನನಗೆ, ನನ್ನ ಬಗ್ಗೆ.

ನಿಜವಾದ, ಪ್ರಾಮಾಣಿಕರಾದ ಸತ್ಯಸಂಶೋಧಕರ ಕಷ್ಟನಷ್ಟ ಅವರಿಗೇ ಗೊತ್ತು. 'ನಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವವೇದನಾಂ' ಎಂಬ ಸೂಕ್ತಿ ಇಲ್ಲಿ ಬಲವಾಗಿ ಅನ್ವಯಿಸುತ್ತದೆ. ಆ ಕಷ್ಟದ ಪರಂಪರೆಯಲ್ಲಿ ಒಂದೆರಡನ್ನು ನಿಮ್ಮ ಮುಂದೆ ಇಡುತ್ತೇನೆ.

೧. ಕಾವ್ಯದ ತಾಡವೋಲೆ ಇಲ್ಲವೆ ಕೋರಿಯ ಕಾಗದ ಅಥವಾ ಕಾಗದ ಪ್ರತಿಗಳನ್ನು ದೊರಕಿಸಬೇಕು. ಎಲ್ಲಿಂದ? ಅವು ಸರಕಾರದ ಸೊತ್ತಾದ ಪ್ರಾಚ್ಯ ಸಂಶೋಧನಾಲಯಗಳಲ್ಲಿರಬಹುದು. ಅರಮನೆ ಗುರುಮನೆಗಳಲ್ಲಿ, ಮಠ ಬಸದಿಗಳಲ್ಲಿರಬಹುದು. ಪಂಡಿತರಲ್ಲಿ ಅಜ್ಞರಲ್ಲಿರಬಹುದು. ಕೆಲವು ಕಡೆ ಕೆಲವರಿಂದ ಅವನ್ನು ಊರೂರಿಗೆ ತಿರುಗಾಡಿ, ಮನೆ ಮಠಗಳಲ್ಲಿ ಹೊಕ್ಕು, ಒಡೆಯರಿಗೆ ನಂಬುಗೆ ಕೊಟ್ಟು, ಪ್ರತಿಗಳನ್ನು ಪಡೆಯಬಹುದು. ದುಡ್ಡು ಕೊಟ್ಟು ಪ್ರತಿ ಮಾಡಿಸಿಕೊಳ್ಳಬಹುದು. ಆದರೆ ಕೆಲವೊಂದು ಕ್ವಚಿತ್‌ಪ್ರತಿಗಳು ಹಾವಿನ ಕಾವಲಲ್ಲಿ! ತಿಳಿಯದ ಅಜ್ಞರು, ಮುಚ್ಚಿ ಪೂಜಿಸುವ ಅಂಧಕರು ಪ್ರತಿ ಕೊಡದಿದ್ದರೆ ಅಷ್ಟೇನು ತಪ್ಪಲ್ಲ. ಆದರೆ 'ಬಲ್ಲ ಮಹಾತ್ಮರು'

ಪ್ರಾಣ ಹೋದರೂ ಪ್ರತಿ ಕೊಡದಿದ್ದರೆ ಮುಂದೆ ಹಾದಿಯೇನು? ಉಸುಕನ್ನು ಹಿಂಡಿ ಎಣ್ಣೆಯನ್ನು, ಅಲ್ಲ-ಬಯಲನ್ನು ಹಿಂಡಿ ಬೆಣ್ಣೆಯನ್ನು ತೆಗೆಯ ಬಹುದು. ಆದರೆ . . .

ಇಂಥ ಮನೋವೃತ್ತಿಯಿಂದ ಸಂಶೋಧನೆಯ ಮಾರ್ಗ ಸುದುರ್ಗಮವಾಗುತ್ತದೆ. ಮತ್ತೆ ಬೇರೆ ಮಾರ್ಗ? ಬೇರೆ ಅಂಥದೇ ಪ್ರತಿ ದೊರೆಯದಿದ್ದರೆ ಆ ಕಾವ್ಯದ ಸಂಶೋಧನೆಗೆ ವಿರಾಮ ಚಿಹ್ನೆ ಹಾಕ ಬೇಕಾಗುತ್ತದೆ. ಇಂಥ ಕಾವ್ಯ ಮಹಾಕೃತಿಯಾಗಿದ್ದರೆ, ಅದು ಓಲೆಯ ಗರಿಯಲ್ಲಿಯೆ ಕುಳಿತರೆ, ನಮ್ಮ ಮಹಾಸಂಸ್ಕೃತಿಯ ಸಂಪತ್ತಿಗೆ ಅದೆಂಥ ಕೊರತೆ! ಈ ಕೊರತೆಯನ್ನು ಸಹಾಯ ಸಹಕಾರ ಭಾವನೇ ತುಂಬಿ ಕೊಡಬೇಕು.

೨. ಸಂಶೋಧನೆ ನಡೆಸುವ ವಿದ್ವಾಂಸರಲ್ಲಿ ಪರಸ್ಪರ ಸಹಾಯ ನೀಡುವ, ಕೂಡಿ ಕೆಲಸ ಮಾಡುವ, ಒಬ್ಬರಿಂದ ಮತ್ತೊಬ್ಬರು ತಿಳಿದು ತಿದ್ದಿಕೊಳ್ಳುವ 'ಸಂಘ ಭಾವ' ಸಾಕಷ್ಟು ಬೆಳೆದಿಲ್ಲ. ಒಂದು ಕೃತಿಯ ಹತ್ತಿಪ್ಪತ್ತು ಪ್ರತಿಗಳಿದ್ದರೆ ಒಬ್ಬನೇ ಓದಿ ಮೂಲ ಪಾಠವನ್ನು ಹುಡುಕಿಗೊತ್ತು ಮಾಡುವುದು ಎಷ್ಟು ಕಷ್ಟ!

ಇಂಥವು ಇನ್ನೆಷ್ಟೋ ಹೊರಗಿನ ಕಷ್ಟಗಳು. ಇನ್ನು ಸಂಶೋಧಕನಿಗೆ ಒಳಗೇ ತಲೆದೋರುವ ಅಡಚಣಿಗಳೇನು? ಓಲೆಯಲ್ಲಿ ಲಿಪಿಯನ್ನು ಓದುವುದು, ಪ್ರತಿ ಮಾಡುವುದು, ಪಾಠಾಂತರಗಳನ್ನು ಕೊಡುವುದು, ಅಕಾರಾದಿ ಶಬ್ದಕೋಶ ಕವಿ-ಕಾವ್ಯ ಪ್ರಶಸ್ತಿಯನ್ನು ಬರೆವುದು, ಮುದ್ರಣಾಲಯದಲ್ಲಿ ಅಚ್ಚು ಹಾಕಿಸುವುದು, ಆದಕ್ಕೆ ಬೇಕಾದ ಹಣವನ್ನು ಪಡೆವುದು,-ಇವೇ ಮುಂತಾದ ಹಲವು ಕಷ್ಟಗಳಲ್ಲಿ ಎಲ್ಲಕ್ಕಿಂತ ಹೆಚ್ಚಿನ ಕೊರತೆ ಕಷ್ಟ ತೊಂದರೆಯೆಂದರೆ ತನಗೆ ತಾನು. 'ಆತ್ಮನೋ ವಾ ರಿಪುಃ ಆತ್ಮನಃ' ಇದು ಹೇಗೆ? ಪ್ರಮಾಣಬದ್ಧವಾಗಿ, ಪರಿಶುದ್ಧವಾಗಿ, ಪ್ರಾಮಾಣಿಕತನದಿಂದ, ಪರಿಶ್ರಮದಲ್ಲಿ ಸಾವಧಾನ ತಪ್ಪದೆ ಒಂದು ಗ್ರಂಥವನ್ನು ಸಂಶೋಧಿಸಿ ಸಹೃದಯರಾದ ವಿದ್ವಾಂಸರ ಮುಂದೆ, ಓದಿ ತಿಳಿಯಬಲ್ಲ ಸರ್ವಸಾಮಾನ್ಯ ಜನತೆಯ ಮುಂದೆ ಇಡುವುದು ಸುದುಷ್ಕರ. ಏಕೆ ಎನ್ನುವಿರಾ? ನಿಜವಾದ ಸಂಶೋಧಕ ನೊರೆತೆರೆಗೆ ಹಾರದೆ, ಕಾವ್ಯದ ಆಳಕ್ಕಿಳಿದು ಕವಿಯ ಅನುಭಾವ ಪ್ರಪಂಚದ ರಸಗಂಭೀರದಲ್ಲಿ ಇಳಿಯಬಲ್ಲರೆ, ಪದ ಪದಾರ್ಥವನ್ನು ಚೆನ್ನಾಗಿ ಅವಗ್ರಹಿಸಿಕೊಂಡು, ಅರ್ಥ ಭಾವ ರಸ ತಾಳ ಲಯಕ್ಕನುಗುಣವಾಗಿ ಅಕ್ಷರಗಳನ್ನು ಜೋಡಿಸಿ ಭಾಷೆ ವ್ಯಾಕರಣವನ್ನನುಲಕ್ಷಿಸಿ ಪದ ಪದಗಳನ್ನು ವಿಂಗಡಿಸಿ, ಭಾವ ಭಾವಗಳನ್ನು ಅವಶ್ಯವಿದ್ದರೆ ಚಿಹ್ನಿಸಿ, ವಾಕ್ಯಗಳನ್ನು ಮುಗಿವಲ್ಲಿ ಮುಗಿಸಿ, ಒಂದು ವಾಕ್ಯದಲ್ಲಿ ಮತ್ತೊಂದು ವಾಕ್ಯದ ಪದವನ್ನು, ಪದಗಳನ್ನು ಸೇರಿಸಿಕೊಳ್ಳದೆ, ಸ್ವತಃ ಕವಿಯೇ ತನ್ನ ಕಾವ್ಯವನ್ನು ಇಂದಿನ ಗ್ರಂಥಗಳ ಮಾಟದಲ್ಲಿ ಬರೆದುಕೊಟ್ಟರೆ ಹೇಗೋ ಹಾಗೆ ನಮಗೆ ಮೂಲರೂಪಕ್ಕೆ ಸಮೀಪವರ್ತಿಯಾದ ಪರಿಷ್ಕೃತ ಗ್ರಂಥವನ್ನು ಕೊಡಬಲ್ಲ. ಇದೋ ಇಲ್ಲಿ ಒಂದು ನಮ್ಮ ಮಾನ್ಯ ಸಂಶೋಧಕರು ತೋರಿಸುವ ಶೋಧನ ವಿಚಕ್ಷಣತೆಯನ್ನು ನೋಡಿ. ಹಿಂದೆ ನಾವು ಕೇಳಿದ ಭೀಷ್ಮಾಚಾರ್ಯರ ವೀರ ಪ್ರತಿಜ್ಞೆಯಲ್ಲಿ 'ನರರಥಂ ತೂಳ್ದು ಕುರುಕ್ಷೇತ್ರದಿಂ ಪಡುವೆಣ್ಗಾವುದು ಪೋಗೆ ಪೋ ಗಡಿಸುವೆಂ' ಎಂದು ಪೋ ಮತ್ತು ಗಡಿಸುವೆಂ ಎಂಬ ಪದಗಳನ್ನು ಬಿಡಿಸಿ ಇಟ್ಟುದು ಮತ್ತು ಇವೇ ಪದಗಳಿಗಿದ್ದ 'ಪೋಗೆಪೋಗಲೆಸುವೆಂ' ಎಂಬ ಪಾಠಾಂತರವನ್ನು ಕೆಳಗೆ ಕೊಟ್ಟುದು ಪಂಪ ಭಾರತವನ್ನು ಸಂಪಾದಿಸಿದ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಸುತೀಕ್ಷ್ಣವಾದ ಸಂಶೋಧನಾ ಕೌಶಲವನ್ನು ಸಾರುತ್ತದೆ. 'ಪೋಗಡಿಸುವೆಂ' ಎಂದು ಪಾಠವನ್ನು ಹೇಳಿದ್ದರೆ 'ಪೋ ಗಡ ಇಸುವೆಂ' ಎಂಬ ಹಂಪದೇವನ ನಿಜಾರ್ಥ ಎಷ್ಟು ಜನ ಪಾಠಕರಿಗೆ, ಅವೇಕೆ ವಿದ್ವಾಂಸರಿಗೆ ತಿಳಿಯಬಹುದಿತ್ತು? 'ಪೋಗೆ ಪೋಗಲೆಸುವೆಂ' ಎಂಬ ಪಾಠದಲ್ಲಿ 'ಇಸುವೆಂ' ಎಂಬ ವ್ಯಾಕರಣ ಶುದ್ಧವಾದ ಪದವನ್ನು 'ಎಸುವೆಂ' ಎಂದು ಹಂಪದೇವ ಹೇಳಿರಲಾರ-ಎಂಬ ಪೂರ್ಣ ತಿಳಿವಳಿಕೆಯೇ ಮತ್ತು ವಿಕ್ರಮಾರ್ಜುನವಿಜಯದಾದ್ಯಂತ ಸಾಮಾನ್ಯವಾಗಿ ತೋರುವ ವೆಂಕಟನಾರಾಯಣಪ್ಪನವರ ವಿದ್ಯಾಬುದ್ಧಿಯ ಸಾವಧಾನವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಈ ಸಾವಧಾನ ದಕ್ಷತೆ ವಿದ್ಯಾಬುದ್ಧಿ ಕೌಶಲವಿಲ್ಲದಿದ್ದರೆ ಮಹಾಕವಿಗಳ ಮೇರುಕಾವ್ಯಗಳು ಸುಬೋಧವಾಗುವ ಸಂಭವನವೇ ಇಲ್ಲ. ಒಬ್ಬ ಮಹಾ ಸಂಶೋಧಕನ ಸರ್ವತೋಮುಖವಾದ ಗಭೀರ ಪರಿಶ್ರಮದ ಫಲವನ್ನು ಸಾವಿರ ಸಾವಿರ ಲಕ್ಷ ಲಕ್ಷ ಜನ ಶತಮಾನ ಶತಮಾನಗಳವರೆಗೆ ತಿನ್ನಬಹುದು, ಅಥವಾ ಅತನ ಪ್ರಮಾದದಿಂದ ತಲೆಕೆಡಿಸಿಕೊಳ್ಳಬಹುದು.

ಸಂಶೋಧಕ ತನ್ನ ತಲೆ ಕೆಡಿಸಿಕೊಳ್ಳದೆ, ಅಪ್ರಮಾಣಿಕನಾಗಿ ಕೆಲಸ ಮಾಡಿದರೆ ಲಕ್ಷ ತಲೆಗಳನ್ನು ಕೆಡಿಸಬಹುದೆನ್ನುವುದಕ್ಕೆ ಉದಾಹರಣೆಯೊಂದನ್ನು ಕೊಡಬೇಕೇ? ಮೊದಲು ಮುದ್ರಿತವಾಗಿದ್ದ ಶೂನ್ಯಸಂಪಾದನೆ ಮತ್ತು ಪ್ರಭುದೇವರ ವಚನಗಳಲ್ಲಿ ಬರುವ ಈ ವಚನವನ್ನು ನೋಡಿ :

> ಅಯಿತ್ತೆ ಉದಯಮಾನ, ಹೋಯಿತ್ತೆ ಅಸ್ತಮಾನ. ಅಳಿದವಲ್ಲಾಗಿರಲಾದ ನಿರ್ಮಿತಂಗಳೆಲ್ಲವು. ಕತ್ತಲೆಗವಿಯಿತ್ತು ಮೂರು ಲೋಕದೊಳಗೆ ಇದರಚ್ಚುಗವೇನು ಹೇಳಾ ಗುಹೇಶ್ವರ?

ಇಲ್ಲಿ ವಿರಾಮಚಿಹ್ನಗಳ ವಿಷಯ ಬದಿಗಿಡಿರಿ. 'ಅಳಿದವಲ್ಲಾಗಿರಲಾದ ನಿರ್ಮಿತಂಗಳೆಲ್ಲವು.' ಇದರರ್ಥವೇನು? ಪ್ರಭುದೇವರ ಶೂನ್ಯಸಂಪಾದನೆಯನ್ನು ಸಂಪಾದಿಸುವಾಗ ತಲೆ ಕೆಡಿಸಿಕೊಂಡೆ. ನಾಲ್ಕೈದು ದಿನ ಕೆಡಿಸಿಕೊಂಡು ೭-೮ ಓಲೆಯ ಪ್ರತಿಗಳನ್ನು ಮತ್ತೆ ಮತ್ತೆ ತಿರುವಿ ಹಾಕಿದೆ. 'ಅಳಿದವಲ್ಲಾಗಿರಲಾದ' ಎಂಬ ಹೆಬ್ಭೂತ! ಅಳಿದವಲ್ಲಾ ಆಗಿರಲಾದ-ಗಿರಲಾದ ಅಥವಾ ಆಗೀರಲಾದ ಅಥವಾ ಗೀರಲಾದ ಎಂದರೆ ಅರ್ಥವೇನು? ಮತ್ತೆ ಮತ್ತೆ ವಿಚಾರ, ತಿರುಗಿ ಮುರುಗಿ ಭ್ರಾಂತಿ. ಓಲೆಯ ಪ್ರತಿಗಳಲ್ಲಿ ದೀರ್ಘಚಿನ್ನ ಇರುವುದಿಲ್ಲ. ಗಿ ಮತ್ತು ನಿ ವರ್ಣಗಳು ಸರಾಸರಿ ಒಂದೇ ರೀತಿಯಲ್ಲಿ ಬರೆಯಲ್ಪಟ್ಟವೆ. ಒಳ್ಳೇದು. ಆನಿರಲಾದ, ನಿರಲಾದ, ಆನೀರಲಾದ, ನೀರಲಾದ–ಇದೋ ಇಲ್ಲಿ ಧುಮುಕಿ ಬಂತು ಮೂಲ ಸತ್ಯ! 'ಅಳಿದವಲ್ಲಾ ನೀರಲಾದ ನಿರ್ಮಿತಂಗಳೆಲ್ಲಾ!' ಎಂಥ ಆನಂದ! ಆರ್ಕಿಮೆಡಿಸ್‌ನದೋ ಈ ಆನಂದ ಎಂದೆನಿಸಿತು. ನಿಜವಾದ ಸಂಶೋಧಕನ ನಿಜವಾದ ಪ್ರತಿಫಲ ಇದೇ ಆನಂದ. ಕಲ್ಪನಾಸಾಮ್ರಾಜ್ಯದಲ್ಲಿ ಪಟುವಾಗಿ ಸಂಚರಿಸಬಲ್ಲ ನೀವು ಇಂಥ ನೂರಾರು ಆನಂದದ ಕಣಗಳನ್ನು ಅಥವಾ ಮೇರುಗಳನ್ನು ಕಲ್ಪಿಸಿಕೊಳ್ಳಿ.

ಸಂಪಾದಕರು ಅಥವಾ ಸಂಶೋಧಕರಾರೇ ಇರಲಿ, ಒಂದು ಮಾತನ್ನು ಎಂದಿಗೂ ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. ಈಗಾಗಲೆ ಸಮರ್ಥ ವಿದ್ವಾಂಸರಿಂದ ಸಂಶೋಧಿತವಾಗಿ ಪರಿಷ್ಕೃತವಾಗಿ ಪ್ರಕಟವಾಗಿರುವ ಗ್ರಂಥಗಳು ಮತ್ತಷ್ಟು ಶೋಧಿತವಾಗಿ ಶುದ್ಧವಾಗಿ ಪ್ರಮಾಣಬದ್ಧವಾಗಿ ಪ್ರಕಟವಾಗಬೇಕಲ್ಲದೆ ನಮ್ಮ ಯಾವುದೇ ರೀತಿಯ ಅಸಾಮರ್ಥ್ಯ, ಅನವಧಾನದಿಂದ ಅವು ಮತ್ತೆ, ಮತ್ತಷ್ಟು ಅಪರಿಷ್ಕೃತವಾದ ದುರ್ಬೋಧಾಂಧಕಾರದ ಕಡೆಗೆ ಹೋಗುವಂತೆ ಮಾಡಬಾರದು. ಇದು ಕವಿಗೆ ಅನ್ಯಾಯ, ಪಾಠಕರಿಗೆ ಅಪಾಯ, ಸಂಶೋಧಕರಿಗೆ ಪಾತಕ.

ಈ ಸಂದರ್ಭದಲ್ಲಿ ಪುರಾತನಗ್ರಂಥ ಸಂಶೋಧನಾ ಕ್ಷೇತ್ರದಲ್ಲಿ ದುಡಿದು, ಹಿಂದಿನ ಮಹಾಕೃತಿಗಳನ್ನು ಪರಿಶುದ್ಧಗೊಳಿಸಿ ನಮಗೆ ಕೊಟ್ಟ ಪುಣ್ಯನಾಮಗಳನ್ನು ನಾವು ಸ್ಮರಿಸುವುದು ಉಚಿತ. 'ಕಾವ್ಯಕಲಾನಿಧಿ' ಯಿಂದ ಅನೇಕ ಪ್ರಾಚೀನ ಗ್ರಂಥಗಳನ್ನು ಕನ್ನಡಿಗರಿಗೆ ಒದಗಿಸಿಕೊಟ್ಟ ಶ್ರೀ ಎಸ್. ಜಿ. ನರಸಿಂಹಾಚಾರ್ಯರು, ಶ್ರೀ ಎಮ್. ಎ. ರಾಮಾನುಜ ಅಯ್ಯಂಗಾರರು, ಶ್ರೀ ವೆಂಕಟನಾರಾಯಣಪ್ಪನವರು, ಶ್ರೀ ಟಿ. ಎಸ್. ವೆಂಕಣ್ಣಯ್ಯನವರು, ಡಾ. ಪಿ. ಜಿ. ಹಳಕಟ್ಟಿಯವರು, ಶ್ರೀ ಎಸ್. ಎಸ್. ಬಸವನಾಳರು, ರೆ. ಉತ್ತಂಗಿಚೆನ್ನಪ್ಪನವರು, ಶ್ರೀ ಪಿ. ಆರ್. ಮತ್ತು ಎನ್. ಆರ್. ಕರಿಬಸವಶಾಸ್ತ್ರಿಗಳು, ಇನ್ನೂ ಹಲವರು. ಈ ಎಲ್ಲ ವಿದ್ವಾಂಸರಿಗೆ ನಾವೆಲ್ಲ ಎಂದೆಂದಿಗೂ ಋಣಿ.

ಇನ್ನು ಶಾಸನ ಸಾಹಿತ್ಯ ಮತ್ತು ಕಾವ್ಯ ಕ್ಷೇತ್ರದಲ್ಲಿ ಮಹಾಘನ ಕಾರ್ಯ ಮಾಡಿದ ಬಿ. ಎಲ್. ರಾಯಿಸ್ ಮತ್ತು ಕರ್ಣಾಟಕ ಕವಿಚರಿತೆಗಳನ್ನು ಕೊಟ್ಟು ಕನ್ನಡ ಸಾಹಿತ್ಯದಲ್ಲಿ ಹೊಸಯುಗದ ನಿರ್ಮಾಣಕ್ಕೆ ಕಾರಣ ಪುರುಷರಾದ ಶ್ರೀ ರಾ. ನರಸಿಂಹಾಚಾರ್ಯರನ್ನು, ಕನ್ನಡಕ್ಕೆ ಅತ್ಯದ್ಭುತವಾದ ನಿಘಂಟನ್ನು ನೀಡಿದ ರೆ. ಡಾ. ಎಫ್. ಕಿಟೆಲ್‌ರನ್ನು ಕೊಂಡಾಡಲಿಕ್ಕೆ ಶಬ್ದಗಳಿಲ್ಲ. ಸಾಹಿತ್ಯ ಚರಿತ್ರೆ, ಶಾಸನ ಸಾಹಿತ್ಯ ಮತ್ತು ಕಾವ್ಯ ಸಂಶೋಧನೆಯಲ್ಲಿ ದುಡಿದ ನಿರಪೇಕ್ಷ ಮಹನೀಯರೆಲ್ಲ ನಮಗೆ ವಂದ್ಯರು.

ಕೊನೆಯದಾಗಿ, ಇಂದಿನ ಪೀಳಿಗೆಯಲ್ಲಿಯೂ ಅನೇಕ ವಿದ್ವಾಂಸರು, ವಿಶೇಷವಾಗಿ ಅಧ್ಯಾಪಕರು ಈ ಕ್ಷೇತ್ರದಲ್ಲಿ ಹಗಲಿರಳು ಪರಿಶ್ರಮ ಮಾಡುತ್ತಿದ್ದಾರೆ. ಇವರಲ್ಲಿ ಕೆಲವರಾದರೂ ಹಿಂದಿಗಿಂತ ಮುಂದೆ ಹೋಗಲಿ ಎಂದು ನನ್ನ ಪ್ರಾರ್ಥನೆ. ಅವರ ಹೆಸರನ್ನೇಕೆ ಹೇಳಿಲ್ಲ? ಹೆಸರು ಹೇಳಲು 'ವಾಯುಗುಣ' ತಕ್ಕುದಿಲ್ಲವೆಂದು ನನ್ನ ಮಾನ್ಯ ಮಿತ್ರರೊಬ್ಬರು ಹೇಳಿದರು.

ಇಲ್ಲಿ ನಿಮ್ಮ ಮುಂದೆ ನನ್ನ ಹೃದಯದಲ್ಲಿ ಜ್ವಲಿಸುತ್ತಿರುವ ಒಂದೆರಡು ಅರಿಕೆಗಳನ್ನು ಮಂಡಿಸುತ್ತೇನೆ. ಕರ್ನಾಟಕದಲ್ಲಿ ಮತ್ತೆ ಹೊರಗಡೆಗಿರುವ ನಮ್ಮ ತಾಡವೋಲೆಯ ಗ್ರಂಥಗಳು ಯಾವಿವೆ, ಎಷ್ಟಿವೆ ಎಂಬ ಅಂಕಿ ಅಂಶಗಳು ಗೊತ್ತಾಗುವ ವ್ಯವಸ್ಥೆಯನ್ನು ನಮ್ಮ ಸರಕಾರವು ಕೈಕೊಳ್ಳಬೇಕು. ಈ ಗ್ರಂಥಗಳು ಇ ಅಥವಾ

೪ ಸಂಶೋಧನಾಲಯಗಳಲ್ಲಿ ಸಂಗ್ರಹವಾಗಬೇಕು. ನಮ್ಮ ಸರಕಾರ ಮತ್ತೆ ನಮ್ಮ ವಿಶ್ವವಿದ್ಯಾಲಯಗಳು ೫ ಅಥವಾ ೧೦ ವರ್ಷಗಳ ಯೋಜನೆಯಲ್ಲಿ ಕನ್ನಡದ ಪ್ರಾಚೀನ ಗ್ರಂಥಗಳೆಲ್ಲ ಪ್ರಕಟವಾಗುವ ಏರ್ಪಾಟು ಮಾಡಬೇಕು. ಅಲ್ಲಲ್ಲಿ ಹಾಗೆ ಹೀಗೆ ಅವರಿವರು ನಡೆಸಿರುವ ಸಂಶೋಧನೆಯ ಕಾರ್ಯವನ್ನು ನಮ್ಮ ಸರಕಾರ ಅಥವಾ ವಿಶ್ವವಿದ್ಯಾಲಯಗಳು ಕೈಕೊಳ್ಳದ್ದಿದ್ದರೆ ಇದ್ದ ಓಲೆಗಳು ಎಷ್ಟುದಿನ ಬದುಕಬಲ್ಲವು? ಅವರು ಈ ಕೆಲಸ ಕೈಕೊಳ್ಳುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಅವರು ಸುಮ್ಮನೆ ಕುಳಿತರೆ ತಪ್ಪು ಯಾರದು, ? 'ಕೆಚ್ಚೆದೆಯ' ಕನ್ನಡಿಗರದು. ಉದಯವಾಗಿದೆಯೇ ಕನ್ನಡ ನಾಡು !

ಇನ್ನು ವಿಮರ್ಶೆಯ ವಿಷಯ. ಕಾವ್ಯ ವಿಮರ್ಶೆ ಎಂದರೇನು ? ಕಾವ್ಯಕ್ಕೂ ವಿಮರ್ಶೆಗೂ ಇರುವ ಬಾಂಧವ್ಯವೇನು? ನೃತ್ಯ ಚಿತ್ರ ಸಂಗೀತಾದಿಗಳಂತೆ ಕಾವ್ಯ ಕಲೆ ಎಂಬುದು ಸರ್ವಶ್ರುತ, ಸರ್ವವಿದಿತ. ಕಲಾ ವಿಮರ್ಶೆಯನ್ನು ಕುರಿತಿರುವ ಎನ್‌ಸಾಯ್ಕ್ಲೋಪೀಡಿಯಾ ಬ್ರಿಟ್ಯಾನಿಕಾದ ವ್ಯಾಖ್ಯೆಯನ್ನು ಕೇಳಿ :

Criticism, reasoned and systematic discussion of the arts, explaining or evaluating their techniqes and products. It is thus distinct from aesthetic perception, reaction or appreciation, with all of which it is often confounded. (Vol, VI P. 727)

'ಕಲಾಭಾವದಲ್ಲಿ ಕಲಾಕೃತಿಯನ್ನು ನೋಡುವುದು, ಉದ್ಗಾರದ ಪ್ರತಿಕ್ರಿಯೆಯನ್ನು ತೋರುವುದು ಅಥವಾ ಗುಣಗ್ರಹಣ ಮಾಡಿ ನುಡಿಯುವುದು ವಿಮರ್ಶೆಯಲ್ಲ. ತರ್ಕ ವಿಚಾರದಿಂದ ಕೂಡಿ ಕ್ರಮಬದ್ಧವಾಗಿ ನಡೆವ ಚರ್ಚೆ, ಕಲೆಯ ತಂತ್ರ, ನಿರ್ಮಿತಿಗಳನ್ನು ಯುಕ್ತಿಯುಕ್ತವಾಗಿ ತಿಳಿಸುವುದು, ಬೆಲೆ ಕಟ್ಟುವುದು ವಿಮರ್ಶೆ. 'ಆಹಾ' ಅಥವಾ 'ಛೀ' ಗಳು ವಿಮರ್ಶೆ ಅಲ್ಲ. ಕಲಾಕೃತಿಯನ್ನು ಬಿಚ್ಚಿನೋಡಿ, ಗುಣದೋಷಗಳನ್ನು ಮುಟ್ಟಿ ಪರೀಕ್ಷೆ ಮಾಡಿ, ಕಾರಣ ಕೊಟ್ಟು ಕಲೆಯ ಬೆಲೆಯನ್ನು ನಿರ್ಧರಿಸಿದರೆ ಅದು ಕಲಾವಿಮರ್ಶೆ. ಈ ಮಾತು ಕಾವ್ಯ ವಿಮರ್ಶೆಗೂ ಅನ್ವಯವಾಗುತ್ತದೆ.

ಕಾವ್ಯವಿಮರ್ಶೆಗೆ ಮೊದಲು ಕಾವ್ಯ ಬೇಕು, ಆ ಕಾವ್ಯಕ್ಕೆ ವಿಮರ್ಶೆ ಬೇಕು. ಅಂದರೆ ಕಾವ್ಯವಿಲ್ಲದೆ ವಿಮರ್ಶೆ ಇಲ್ಲ, ವಿಮರ್ಶೆ ಇಲ್ಲದೆ ಕಾವ್ಯ ಅಪೂರ್ಣ. 'ಎನಿತನೊರೊಲ್ದು ಪೇೞ್ದೊ ಕವಿಯೇವನ್? ಅದಂ ಮನಮುಟ್ಟೆ ಮೆಚ್ಚಬಲ್ಲನಂ ಅರಸಲ್ಕೆವೇೞ್ಪುದು . . . ಆತನ ಮುಖದಿಂದಮಲ್ಲದೆ ಅದು ಸಲ್ಲದು . . .' ಎಂಬ ಕವಿಚಕ್ರವರ್ತಿ ಜನ್ನನ ಮಾತನ್ನು ನೀವು ಕೇಳಿರಬಹುದು. ಮಾಲೆಗಾರ ಹೊಸ ಬಾಸಿಗವನ್ನು ಕಟ್ಟಿದರೇನು? ಆ ದೇಸೆಯ ಬಾಸಿಗವನ್ನು ಮುಡಿವ ವಿಲಾಸಿಗಳಿಲ್ಲದಿದ್ದರೆ ಆ ಬಾಸಿಗವೇನು ಬಾತೆ?

ಮುಡಿವ ಭೋಗಿಗಳಿಲ್ಲದೆ, ಮೆಚ್ಚುವ ರಸಿಕರಿಲ್ಲದೆ, ಸಹೃದಯರಿಲ್ಲದೆ, 'ಮಮಕೋಽಪಿ ಸಮಾನಧರ್ಮರಿಲ್ಲದೆ ಕಾವ್ಯದ ಸಾಫಲ್ಯವಿಲ್ಲವೆಂಬ ಅರಿವು ಕವಿಗಳಿಗಿದೆ. 'ಸೊಗಯಿಸುವ ಕಬ್ಬಮಂ ಕಬ್ಬಿಗರಲ್ಲದೆ ಮೆಚ್ಚರ್' 'Poets alone can touch poetry' ಎಂಬ ಪರಿಪೂರ್ಣ ಅರಿವೂ ಕವಿಗಳಿಗಿದೆ. ಆದರೆ ಜನ್ನ ಭವಭೂತಿ ಆಂಡಯ್ಯನಂಥ ನಮ್ಮ ಕವಿಗಳ ಅರಿವು ಹೆಚ್ಚಾಗಿ 'ಮೆಚ್ಚುಗೆ' 'appriciation' ಯ ಮಂಡಲದಲ್ಲಿ ತಿರುಗುವಂತಿದೆ. ಆದರೆ 'ವಿಮರ್ಶೆ ಇಲ್ಲದೆ ಕಾವ್ಯ ಅಪೂರ್ಣ' ಎಂದು ನಾನು ಹೇಳಿದ ಮಾತಿನಲ್ಲಿ ಇನ್ನೂ ವಿಶೇಷವಿದೆ. ಅದೇನು?

ಈ ವಿಶೇಷವನ್ನು ನೋಡಬೇಕಿದ್ದರೆ ಕಾವ್ಯ ಹೊರಚಿಮ್ಮುವ ಕವಿಹೃದಯದ ಆಳಕ್ಕಿಳಿದು ನೋಡಿ :

೧. ಗೀರ್ವಾಣಪುರ ನಿಲಯ ಲಕ್ಷ್ಮೀವರಂ ತಾನೆ
ಸಂಗೀತ ಸುಕಲಾನಿಪುಣನು ವೀಣೆಯಿಂ
ಗಾನಮಂ ನುಡಿಸುವಂದದೊಳ್ ಎನ್ನ ವಾಣಿಯಿಂ
ಕವಿತೆಯಂ ಪೇಳಿಸಿದನ್.

೨. ವೀರನಾರಾಯಣನೆ ಕವಿ,
ಲಿಪಿಕಾರ ಕುವರವ್ಯಾಸ.

೩. ದೇಗುಲವೆ ಮಾತಾಡುವಂದದೊಳಾಗಿರದೆ
ಒಳಗಿರ್ದು ನುಡಿದೊಡೆ ಲೋಗರಿಗೆ ಪ್ರತಿಶಬ್ದ ದಿಂದಾ
ಪರಿಯಲಿ, ಎನ್ನೊಳಗೆ ಲಾಗಿನಿಂದಲಿ
ಗುರು ಗುಹೇಶ್ವರನಾಗಳೆನ್ನನು ನುಡಿಸಿದೊಡೆ
ನುಡಿದು, ಆಗುಮಾಡಿಯೆ ಪೇಳ್ವೆನೀ
ಪ್ರಭುಲಿಂಗಲೀಲೆಯನು.

೪. ಎನ್ನ ಕಾಯುವ ದಂಡಿಗೆಯ ಮಾಡಯ್ಯಾ ;
ಎನ್ನ ಸಿರವ ಸೋರೆಯ ಮಾಡಯ್ಯಾ ;
ಎನ್ನ ನರವ ತಂತಿಯ ಮಾಡಯ್ಯಾ ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ ;
ಬತ್ತೀಸ ರಾಗವ ಹಾಡಯ್ಯಾ ;
ಉರದಲೊತ್ತಿ ಬಾರಿಸು, ಕೂಡಲಸಂಗಮದೇವಾ.

ಶ್ರೇಷ್ಠ ಕವಿಗಳ, ಅನುಭಾವಿಗಳ ಇಂಥ ಹೇಳಿಕೆಗಳನ್ನು ಪರ್ಯಾಲೋಚಿಸಿ ನೋಡಿದರೆ ಕವಿಯ ಒಳಗೆ ಹಾಡುವ ಶಕ್ತಿ, ಕವಿಯನ್ನು ಹೊರಗೆ ಹಾಡಿಸುವ ಶಕ್ತಿ ಅದೊಂದು ದಿವ್ಯಶಕ್ತಿ. ಅದು ಮಾನವನ ಹೃದಯ ಬುದ್ಧಿಯ ಸಾಮಾನ್ಯ ಹಂತಕ್ಕಿಂತ ಇನ್ನೂ ಆಳವಾದ ಪದರಿನಲ್ಲಿ ಧ್ವನಿಸುವ 'ಅವಿಜ್ಞಾತಶಕ್ತಿ.' ಈ ಸಂಗತಿ ನಿಜವೆಂದೇ ನನ್ನ ಮತ, ನನ್ನ ಅನುಭವ. ನನ್ನದು ತೀರ ತೆಳುವಾದ ಅನುಭವ. ನಮ್ಮ ಕವಿಗಳಲ್ಲಿ—ಹಿಂದಿನವರಿರಲಿ ಇಂದಿನವರೇ ಇರಲಿ—ಈ ಅನುಭವ ವಜ್ರದಂತೆ ಕೆಚ್ಚಾಗಿರಬಹುದು. ನಿಜವಾದ ವಿಮರ್ಶಕ ಕವಿಯ ಈ ಆಳಕ್ಕಿಳಿವ ಸಮರ್ಥನಾಗಿರಬೇಕು. ಆಗ ಆತ ಕವಿಗೆ ಸಮಾನ ಧರ್ಮ, ಸ-ಹೃದಯ. ಈ ಅರ್ಥದಲ್ಲಿ ಕವಿ ವಿಮರ್ಶಕರಲ್ಲಿ ಸಾಮರಸ್ಯವನ್ನು ಹೇಳಬಹುದು. ಹಿಂದೆ ಹೇಳಿದ ಜನ್ನ ಭವಭೂತಿಯಂಥ ಕವಿಗಳು ತಮ್ಮೆಡೆಗೆ ಕರೆಯುತ್ತಿರುವುದು ಇಂಥ ವಿಮರ್ಶಕರನ್ನು! ಆದರೆ ವಿಮರ್ಶಕ ಇಲ್ಲಿಗೆ ನಿಂತರೆ ಕಾವ್ಯದ ವಿಮರ್ಶೆಯೂ ನಿಂತಂತೆ. ವಿಮರ್ಶಕ ಕವಿಹೃದಯನಾಗಿ ಕವಿ ಶಬ್ದದಲ್ಲಿ ಕೆತ್ತಿದ ಕಾವ್ಯಮೂರ್ತಿಯ ಅಂಗಾಂಗವನ್ನೆಲ್ಲ ನೋಡಿ, ಮೂರ್ತಿಯ ಸೌಷ್ಠವ, ಸೌಂದರ್ಯವನ್ನೆಲ್ಲ ಅಳೆದು, ಸರಿಯಾಗಿದ್ದುದನ್ನು ಎತ್ತಿ ತೋರಿಸಿ, ಆ ಮೂರ್ತಿಯ ಕೆಲವು ಅಥವಾ ಹಲವು ಕಡೆಯಲ್ಲಿ ಮೊಗವೆತ್ತಿರುವ ಕುಂದು ಹೆಚ್ಚುಗಳನ್ನು, ಅಸಂಬದ್ಧ ವಿರೋಧಗಳನ್ನು, ಒಟ್ಟಾರೆ ಆ ರಸಕಲಾ ಮೂರ್ತಿಯ 'ಅಪಸ್ವರ'ಗಳನ್ನೆಲ್ಲ ಕೆತ್ತಿ ತೆಗೆದು, ಕವಿ ಕೆತ್ತಿದ ಸೌಂದರ್ಯವನ್ನು ಮತ್ತಷ್ಟು ಸುಂದರಗೊಳಿಸುತ್ತಾನೆ, ಮಾಧುರ್ಯವನ್ನು ಮತ್ತಷ್ಟು ಮಧುರಗೊಳಿಸುತ್ತಾನೆ. ಅಥವಾ ಆ ಮೂರ್ತಿಯಲ್ಲಿ ಕಲಾಸೌಂದರ್ಯದ ಹೊಳಹೇ ಇಲ್ಲದಿದ್ದರೆ ಅದನ್ನು ಒಡೆದು ಕಿತ್ತೆಸೆಯಬಹುದು ನಿಜ ವಿಮರ್ಶಕ.

ಕಾವ್ಯದ, ಕವಿಯ ಅನುಭವದ ಆಳಕ್ಕಿಳಿಯದೆ ಕಾವ್ಯದ ಪರೀಕ್ಷೆಮಾಡಿ ವಿಮರ್ಶಕನೆನಿಸಿಕೊಳ್ಳುವೆನೆಂಬುದು ಹೆಡ್ಡತನವೆಂಬುದು ನನ್ನ ಮತ.

ರತ್ನ ಪರೀಕ್ಷಕನಾಂ ಕೃತಿ।
ರತ್ನ ಪರೀಕ್ಷಕನೆನೆಂದು ಫಣಿಪತಿಯ ಫಣಾ॥
ರತ್ನಮುಮಂ ರನ್ನನ ಕೃತಿ।
ರತ್ನಮುಮಂ ಪೇೞ್ ಪರೀಕ್ಷಿಪಂಗೆಟಿರ್ದೆಯೇ॥

ಎಂದು ಕವಿಚಕ್ರವರ್ತಿ ರನ್ನ ಹಾಕುವ 'ಸವಾಲಿ'ನ ಅರ್ಥ ಇದೇ. ತನ್ನ ಕಾವ್ಯಾನುಭೂತಿಯ ರಸಗಂಭೀರಕ್ಕೆ ಯಾವ ಕಾವ್ಯ ವಿಮರ್ಶಕನೂ ಇಳಿದು ಅದನ್ನು ನೋಡಲಾರ ಎಂಬ ಮಿತಿ ಮೀರಿದ ಆತ್ಮಪ್ರತ್ಯಯ ರನ್ನನಿಗೆ. ರನ್ನನ ಈ ರಸಾಹಂಭಾವದಲ್ಲಿ ಅರ್ಥವಿರಬಹುದು, ಇಲ್ಲದಿರಬಹುದು. ಆದರೆ ಒಂದು ಮಾತು ಸ್ಪಷ್ಟ. ವಿಮರ್ಶೆಯ ಹದ್ದುಮೀರಿ, ಕಾವ್ಯಾನುಭೂತಿಯ ರಸ ಮೇರೆಗಳೆದು ಮೆರೆವ 'ದಿವ್ಯರಸಕಾವ್ಯ' ಇದೆ ಎಂದು ನನ್ನ ತಿಳಿವಳಿಕೆ. ಈ ಕಾವ್ಯ ಬಹುಮಟ್ಟಿಗೆ ದಿವ್ಯಾನುಭಾವಿಗಳ ಕವಿಹೃದಯದಿಂದ ಹರಿವ ಕಾವ್ಯ. ಲಕ್ಷ್ಮೀಶ ಮುಂತಾದ ಕವಿಗಳು ಹಾಡಿದ ಕಾವ್ಯ 'ಪ್ರತಿಧ್ವನಿ' ಕಾವ್ಯ ಎಂದು ಹೇಳಿದರೆ, ನಿಜಾನುಭಾವಿಗಳು ಹಾಡಿದ ಕಾವ್ಯ 'ಸ್ವಯಂಧ್ವನಿ' ಕಾವ್ಯ ಎಂದು ಹೇಳಬಹುದು. ಇಂಥ ಕಾವ್ಯ ನಮ್ಮ ಪೂರ್ಣವಿಮರ್ಶೆಗೆ ಅತೀತ.

ಬೇರೆ ಕಡೆ ನಾವು ಕೇಳಿರುವ 'ನೋಡಲಿಕ್ಕೆ ಇಲ್ಲದ ಶೃಂಗಾರ, ಮಾತಾಡಲಿಕ್ಕೆ ಇಲ್ಲದ ಶಬ್ದ, ಬೇಡಲಿಕ್ಕೆ ಇಲ್ಲದ ವರ, ನೋಡಿರೇ ಈ ನಿರಾಳವನು!' ಎಂಬ ಅರ್ಥದ ವಚನವನ್ನು ಮತ್ತೊಮ್ಮೆ ಧ್ಯಾನಿಸಿ ಬುದ್ಧಿಯ ಹೃದಯದ ಮೇಲಿಟ್ಟು ಪರಿತಃ ಈಕ್ಷಿಸಿರಿ. ಮತ್ತೆ ಬಿಸಿಲಿಂದ ಬಾಡಲಿಲ್ಲದ ಬೆಳುದಿಂಗಳು! ಪ್ರಭುದೇವರ ಇಂಥ ಅನುಭವದ 'ಸ್ವಯಂಧ್ವನಿ' ಅಥವಾ ಯಾವ ದೇಶ ಕಾಲ ಜನಾಂಗವೆನ್ನದೆ 'ಸಕಲ ಭುವನದ ದಿವ್ಯ ಭಾಗ್ಯದಿಂದ ಮರ್ತ್ಯಕ್ಕವತರಿಸುವ ಇಂಥ ಜ್ಯೋತಿರ್ಲಿಂಗಗಳು' ವಿಮರ್ಶೆಯಾಚೆ. ಈ ಆಕಾಶವನ್ನು ತೋಡಿ ಸೀರು ಕುಡಿವ ಸಾಮರ್ಥ್ಯ ನಮ್ಮ ಭಾವಬುದ್ಧಿಗಿನ್ನೂ ಬಂದಿಲ್ಲ.

ಈ ವಿಷಯ ಇನ್ನೂ ಮನಗಾಣಬೇಕಿದ್ದರೆ ಇನ್ನೊಂದು 'ಸ್ವಯಂಧ್ವನಿ' ಗೀತವನ್ನು ಕೇಳಿ:

ಉಪಾಧಿಕ ಮನ, ಉಪಾಧಿಕರಹಿತ ಮನ ನಿಂದು
ನಿವಾತವಾದಲ್ಲಿ.
ಲಿಂಗೋದಯ ಪ್ರಜ್ವಲಿಸುತ್ತಿದೆ, ಗುಹೇಶ್ವರಲಿಂಗ ತಾನಾಗಿ

ಸೋಪಾಧಿಕವಾಗಿ ನಿರುಪಾಧಿಕವಾಗಿ ಹರಿದಾಡುವ ಮನಸ್ಸು ನಿಷ್ಕಂಪವಾಗಿ, ನಿಸ್ತರಂಗವಾಗಿ ನಿಂದಲ್ಲಿ, ಉದಯವಾಗಿ ಪ್ರಜ್ವಲಿಸುವ 'ಲಿಂಗೋದಯ' ಯಾವ ವಿಮರ್ಶಕನಿಗೆ ಕಾಣಬೇಕು? ಇಂಥ 'ಸ್ವಯಂಧ್ವನಿ' ಯಾವ ಶಾಸ್ತ್ರಕಲೆಯ ಹಂಗಿಲ್ಲದೆ ಹಾಡಿದರೆ ವಿಮರ್ಶೆ 'ಶರಣು ಶರಣು' ಅನ್ನಬೇಕು; ಅಷ್ಟೇ. ಇಲ್ಲಿ ಕಾವ್ಯ ಮತ್ತು ವಿಮರ್ಶೆ ಸಮರಸವಾಗಿ ಹಾಡುತ್ತವೆ ಎಂದು ಹೇಳಬಹುದು. ಅಥವಾ ನನ್ನ ಭಾಷೆ ಭಾವ ಬುದ್ಧಿಯ

ತೊಡಕಿನಿಂದ ಪಾರುಮಾಡಿ ನಾನು ಹೇಳಬೇಕೆಂದಿರುವ ಮಾತನ್ನು ಪ್ರಭುದೇವರು ಹೇಳುತ್ತಾರೆ ಕೇಳಿ:

ಗಗನಕ್ಕೆ ನಿಚ್ಚಣಿಗೆಯನಿಕ್ಕಿದವರುಂಟೆ?
ವಾಯುವಿನ ಸ್ಥಳವನರಿದವರುಂಟೆ?
ಅಂಬುನಿಧಿಯ ಗುಣ್ಪನಳೆದವರುಂಟೆ?
ಲಿಂಗದ ಪ್ರಮಾಣ ಹೇಳಬಹುದೆ?
ಚಂದ್ರಮಂಡಲ ತಾರಾಮಂಡಲ
ಸೂರ್ಯಮಂಡಲವಿತ್ತಿತ್ತಲಯ್ಯ!
ಪಂಚಮುಖವಾಗಿ, ನೊಸಲ ಕಣ್ಣು ಚತುರ್ಭುಜ
ಅಣುಮಾತ್ರವೆ
ಒಬ್ಬನೆಯಾಗಿ, ಶರಣನಾಗಿ ಗೊಗೇಶ್ವರನೆಂಬ ಘನ
ನೆಲೆಗೊಂಡಡೆ ಅಲ್ಲಿಂದತ್ತ ಶರಣು, ಶರಣು.

ಗಗನಕ್ಕೆ ನಿಚ್ಚಣಿಗೆ ಹಚ್ಚಲಿಕ್ಕೆ ನಮಗೆ ಬರುವುದಿಲ್ಲ. ಹೇಗೋ ಹಾಗೆ 'ದಿವ್ಯರಸಕಾವ್ಯ'ಕ್ಕೆ, ನಮ್ಮ ಕಾವ್ಯ ವಿಮರ್ಶೆ ವಿಮರ್ಶಿಸುವುದಿದ್ದರೆ 'ಅಲ್ಲಿಂದತ್ತ ಶರಣು ಶರಣು' ಎಂದು ವಿಮರ್ಶೆ ಮಾಡಬೇಕು.

ವಿಮರ್ಶಕ ನಿಜವಾಗಿ ವಿಮರ್ಶಕನಾಗಬೇಕಿದ್ದರೆ, ಮಹಾ ವಿಮರ್ಶಕನೆನಿಸಿಕೊಳ್ಳಬೇಕಿದ್ದರೆ ಆತನು ಕೆಲವೊಂದು ಕಶ್ಮಲಗಳನ್ನು ಕಳೆದು ವಿಮರ್ಶೆಯ ಕ್ಷೇತ್ರದಲ್ಲಿ ದುಡಿಯಬೇಕು. ಈ ಕಶ್ಮಲಗಳಿಗೆ 'ಪಂಚಸೂತಕ' ಎಂದು ನಾನು ಕರೆದಿದ್ದೇನೆ: ೧ ಜಾತಿ, ೨ ಕಾಲ, ೩ ದೇಶ, ೪ ಭಾಷೆ, ೫ ಅವಿದ್ಯೆ.

೧. ವಿಮರ್ಶೆಯ ಕ್ಷೇತ್ರದಲ್ಲಿ ಜಾತಿ ಮತದ ಮನೋಭಾವಕ್ಕೆ ಎಡೆ ಇಲ್ಲ. ಯಾವ ಕಾವ್ಯವೇ ಇರಲಿ ಅದು ಬ್ರಾಹ್ಮಣವಲ್ಲ, ಜೈನವಲ್ಲ, ವೀರಶೈವವಲ್ಲ, ಕ್ಷತ್ರಿಯ, ವೈಶ್ಯ, ಶೂದ್ರವಲ್ಲ. ನಾನು ಬ್ರಾಹ್ಮಣ, ನಾನು ವೀರಶೈವ, ನಾನು ಜೈನ, ಬ್ರಾಹ್ಮಣ ಹೇಳಿದ ಕಾವ್ಯ ಮಹಾಕಾವ್ಯವಾಗಿರಲೇ ಬೇಕು, ಇಲ್ಲದಿದ್ದರೂ ಇರಲೇಬೇಕು. ನಾನು? ವೀರಶೈವ. ವೀರಶೈವರ ಕಾವ್ಯ ಜಗತ್ತಿನಲ್ಲಿ ಇನ್ನೆಲ್ಲಿಯೂ ಹುಟ್ಟಲಾರವು. ಜೈನ ನಾನು. ಈ ಕಾರಣದಿಂದ ಜೈನ ಕವಿಗಳು ಬರೆದ ಕಾವ್ಯಗಳೆಲ್ಲ ವಿಶ್ವಕಾವ್ಯಗಳೇ. ಹೀಗೆಂದು ಜಾತಿ ಮತ ಪಂಥದ ಭ್ರಾಂತಿ ವಿಮರ್ಶೆಯನ್ನು ಆವರಿಸಿದರೆ ವಿಮರ್ಶೆ ಜಾತಿಸೂತಕದ ವಿಮರ್ಶೆಯಾಗಬಲ್ಲುದಲ್ಲದೆ ನಿಷ್ಕಲ್ಮಷವಾದ ವಿಮರ್ಶೆ ಎಂದೂ ಆಗಲಾರದು. ಇದೇ ಸೂತಕದಲ್ಲಿ 'ಗುಂಪು'ಗಟ್ಟಿಕೊಂಡು ಮಾಡುವ ವಿಮರ್ಶೆಯೂ ಬರಬಹುದು. ಇದು 'Contract' ವಿಮರ್ಶೆ ಎಂದು ಹೇಳಬಹುದು. ನೀನು ನನ್ನ ಕೃತಿಯನ್ನು ಹೊಗಳಿ 'ವಿಮರ್ಶೆ' ಮಾಡಿದರೆ ನಾನು ನಿನ್ನನ್ನು ಹೊಗಳುತ್ತೇನೆ. ಇದು ಇಬ್ಬರಿಗೂ ಲಾಭ, ಇಬ್ಬರಿಗೂ ಗೌರವ. ಅಂತೂ ಇಬ್ಬರೂ ಕೂಡಿ ಜನತೆಯ ಕಣ್ಣಲ್ಲಿ ಕತ್ತಲೆಯನ್ನು ತುಂಬೋಣ ಎನ್ನುವ ಒಪ್ಪಂದ ಇದು. ಗುಂಪಿನ ವಿಮರ್ಶೆಯನ್ನು ಜಾತಿ ಮತದಲ್ಲಿ ಹಾಕಿದ ಕಾರಣವೆಂದರೆ ನಮ್ಮಲ್ಲಿ ಸಾಮಾನ್ಯವಾಗಿ ಜಾತಿ ಮತದ ಮೇಲೆ ಈ ಗುಂಪು ಪ್ರತಿಷ್ಠಾಪಿತವಾಗಿ ಸುಭದ್ರ ತಳಹದಿಯ ಮೇಲೆ ತಳವೂರಿಕೊಂಡು ನಿಂತಿವೆ.

೨. ಕಾಲಸೂತಕ: 'ಪುರಾಣ ಮಿತ್ಯೇವ ನ ತತ್ ಸಾಧು ಸರ್ವಂ' ಎಂದು. ಹಿಂದಿನ ಕಾಲವೇ ಕಾಲ, ಇಂದಿನ ಕಾವ್ಯವೇ ಕಾವ್ಯ ಎಂದಾಗಲಿ, 'ಹಳೆಯೆಲ್ಲ ಕೊಳೆ' ಎಂಬ ಅಸಡ್ಡೆಯಾಗಲಿ ಹೃದಯದಲ್ಲೇ ಬೇರು ಬಿಟ್ಟು ವಿಮರ್ಶೆ ನಡೆದರೆ ಅದೆಂಥ ವಿಮರ್ಶೆ? ಕಾವ್ಯ, ಮಹಾಕಾವ್ಯ, ವಿಶ್ವಕಾವ್ಯ ಅಂದು ಇಂದು ಹುಟ್ಟಬೇಕು, ಇಂದು ಅಂದು ಹುಟ್ಟಬಾರದು ಎಂಬ 'ನಿಯಮ' ಎಂದು 'ನಿಯಂತ್ರಣ'ವಿದೆಯೇ? ಕಾವ್ಯಕ್ಕೆ ಜಾತಿಮತವಿಲ್ಲ, ಅಂತೆಯೇ ಭೂತ ಭವಿಷ್ಯವಿಲ್ಲ.

೩-೪. ದೇಶ-ಭಾಷಾ ಸೂತಕ:—ಇದು ಕರ್ಣಾಟಕದ ಕಾವ್ಯ, ಇದು ಮಹಾರಾಷ್ಟ್ರ ಬಂಗಾಲದ ಕಾವ್ಯ, ಇದು ಫ್ರಾನ್ಸ ಇಂಗ್ಲಂಡ ರಶಿಯಾದ ಕಾವ್ಯ. ನಮ್ಮ ದೇಶ ನಮ್ಮ ಭಾಷೆಯ ಕಾವ್ಯವೇ ಮಿಗಿಲು. ಏಕೆಂದರೆ ಅದು ನಮ್ಮ ದೇಶಭಾಷೆಯ ಕಾವ್ಯ. ಈ 'ಪರಂಗಿ' 'ಜವಾರಿ' ಕಾವ್ಯ ಕ್ಷೇತ್ರದಲ್ಲಿರುವುದು ನನಗೆ ಗೊತ್ತಿಲ್ಲ. ಹಾಲು ಹಾಲು, ನೀರು ನೀರು. ಆಂಗ್ಲ ಕೊಡವೇ ಇರಲಿ, ನಮ್ಮ ಗಡಿಗೆ ಹಂಡೆಯವೇ ಇರಲಿ, ಒಳಗಿರುವ ಹಾಲು ನೀರು ಆಂಗ್ಲವೂ ಅಲ್ಲ, ಜಪಾನ್ ಜರ್ಮನ್‌ವೂ ಅಲ್ಲ. ಭಾಷೆಯ ಭಾಂಡದಲ್ಲಿರುವ ರಸ ಕಾವ್ಯದ ಮಾತೂ ಹಾಗೇ.

೫. ಅವಿದ್ಯಾಸೂತಕ: ಇಲ್ಲಿ ಅವಿದ್ಯೆ ಎಂದರೆ ವಿದ್ಯೆಯ ಅತ್ಯಂತಾಭಾವವೆಂದು ನಾನು ಹೇಳುವುದಿಲ್ಲ. ಅಲ್ಪವಿದ್ಯೆ, ಅರ್ಧ ವಿದ್ಯೆ ಎಂದು ಇಲ್ಲಿ ನನ್ನ ಅರ್ಥ. ಇದೂ ದೊಡ್ಡ ಸೂತಕವೇ. ಕಾವ್ಯ

ವನ್ನು ಸರಿಯಾಗಿ, ಪೂರ್ಣವಾಗಿ ತಿಳಿಯದೆ ಆ ಕಾವ್ಯವನ್ನು ಪರೀಕ್ಷಿಸುವುದು ಹೇಗೆ? ಆದರೆ ಇಂಥ ಪರೀಕ್ಷೆ 'ಭರ ಭರಾಟೆ' ಯಿಂದ ನಡೆದಿದೆ ಬಹಳ ಕಡೆ. ಕಾವ್ಯವನ್ನು ಓದದೆ, ನೋಡದೆ ವಿಮರ್ಶೆ ಮಾಡಬಲ್ಲ ಸಮರ್ಥರಿದ್ದಾರೆ ನಮ್ಮಲ್ಲಿ. ಹೀಗೆ ನಡೆದರೆ ಕವಿಗಳು ಅಳಬೇಕೋ? ನಗ ಬೇಕೋ?

ಈ ಎಲ್ಲ 'ಸೂತಕ'ಗಳನ್ನು ನಿಮಗೆ ನಾನು ಹೇಳುತ್ತೇನೆ ಎಂದು ಭಾವಿಸಬೇಡಿರಿ. ನಿಮಗೆ ಹೇಳುವುದಕ್ಕಿಂತ ಮೊದಲು ನಾನು ನನಗೇ ಕಿವಿಯೊಡೆವಂತೆ ಹೇಳಿಕೊಳ್ಳು ತ್ತಿದ್ದೇನೆ, 'ಈ ಸೂತಕ ಹೊಲ್ಲ ಹೊಲ್ಲ' ಎಂದು. ಈ ಪಂಚಪಾತಕಗಳು ಕನ್ನಡ ವಿಮರ್ಶೆಯ ಕ್ಷೇತ್ರದಲ್ಲಿ ಅಷ್ಟೇ ಅಲ್ಲ, ಭಾರತದ ಉಳಿದೆಡೆಗೂ ಇದೇ ಹಾಡಿರ ಬಹುದೆಂದು ನನ್ನ ತಿಳಿವಳಿಕೆ. ನಮ್ಮ ಸಮಾಜ ಜೀವ ನವೇ ಹೀಗಿದ್ದಮೇಲೆ ಸಮಾಜದ ಒಂದಂಗವಾದ ವಿಮ ರ್ಶಕ ಈ ಸೂತಕಗಳನ್ನು ತೊಳೆದು ಕಳೆದು ತನ್ನ ಕಾರ್ಯ ದಲ್ಲಿ ಉದ್ಯುಕ್ತನಾಗುವುದು ಕಠಿಣ. ಆದರೂ 'ಮನು ಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ!'

ಭಾರತಯುದ್ಧದಲ್ಲಿ ಧುಮುಕಲು ಹಿಂದೆಗೆಯು ತ್ತಿರುವ ಅರ್ಜುನನ ಮಾತನ್ನು ಕೇಳಿ: 'ಸೀದಂತಿ ಮಮ ಗಾತ್ರಾಣಿ' 'ಗಾಂಡೀವಂ ಸ್ರಂಸತೇ ಹಸ್ತಾತ್' 'ನಚಶ್ರೇಯೋಽನು ಪಶ್ಯಾಮಿ ಹತ್ವಾಸ್ವಜನ ಮಾಹವೇ' 'ನಕಾಂಕ್ಷೇ ವಿಜಯಂ ಕೃಷ್ಣ' 'ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ?' ಎಂದು ಮುಂತಾಗಿ ಸ್ವಜನವಧಕ್ಕೆ ಅರ್ಜುನನ ಎದೆ ಹಿಂಡಿ ಒಟ್ಟಕ್ಕಿ ಒರ ಲುವ ಹೊತ್ತು, ಶ್ರೀಕೃಷ್ಣ ಪರಮಾತ್ಮನ ಆದೇಶವೇನು?

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ।
ಅನಾರ್ಯಜುಷ್ಟಮ ಸ್ವರ್ಗ್ಯಮಕೀರ್ತಿಕರಮರ್ಜುನ॥

ಜಗತ್ತಿನ ಕಾವ್ಯ ವಿಮರ್ಶೆಯ ಕ್ಷೇತ್ರಗಳನ್ನು ನೋಡಿ ದರೆ ನಮ್ಮ ಕನ್ನಡಿಗರ ಪರಿಸ್ಥಿತಿ 'ವಿಷಮ' ವೆಂದೇ ಹೇಳಬೇಕು. ನಮ್ಮ ಕಾವ್ಯ ಬೆಳೆಯಬೇಕು ಇನ್ನೂ ಬೆಳೆಯಬೇಕು. ನಮಗಿರುವ ವಿಮರ್ಶಾ ಸಂಪತ್ತು ಅಲ್ಪ, ಅತ್ಯಲ್ಪ. ಹಿಂದಿನ ಗ್ರಂಥಗಳ ವಿಮರ್ಶೆಯಾಗಬೇಕು. ಇಂದಿನ ಕಾವ್ಯ ಕಾದಂಬರಿ ನಾಟಕ ಕಥೆ ಮುಂತಾದ ಕಲಾಕೃತಿಗಳ—ಭಾರತೀಯ ಕಾವ್ಯ ಮೀಮಾಂಸಕರ ದೃಷ್ಟಿಯಲ್ಲಿ ಲಲಿತ ಸಾಹಿತ್ಯದ ಈ ರೂಪಗಳೆಲ್ಲ ಕಾವ್ಯವೇ—ವಿಮರ್ಶೆ ಶುದ್ಧವಾಗಿ ನಿರ್ವಿಕಾರ ಭಾವದಿಂದ ನಡೆಯಬೇಕು. ನಮ್ಮ ವಿಮರ್ಶಾ ಪದ್ಧತಿಯ ಸಂಪ್ರ ದಾಯವನ್ನೆಲ್ಲ ಗಾಳಿಗೆ ತೂರಿ ಕೇವಲ ಪಾಶ್ಚಾತ್ಯರ ವಿಮರ್ಶಾ ತತ್ವಗಳಿಂದಲೇ ನಮ್ಮ ಕಲಾಕೃತಿಗಳನ್ನು ಅಳೆಯಬಾರದು. ಭಾರತೀಯರ 'ರಸ'ದ ವಿಚಾರ ವಿಮರ್ಶೆಯ ಪದ್ಧತಿಯಲ್ಲಿ ಎಂಥ ಗಂಭೀರ ರಹಸ್ಯತತ್ವ? ಭಾವ ವಿಭಾವ ಅನುಭಾವ ಸಂಚಾರಿ ಭಾವಗಳ ಸುಸೂಕ್ಷ್ಮ ವಿಚಾರಗಳ ಬೆಲೆಯೇನು? ಅಲ್ಲಿಯ ಲೇಸನ್ನು ಸದಾ ಸ್ವಾಗತಿಸೋಣ. ಇಲ್ಲಿಯ ಲೇಸನ್ನು ಎಂದಿಗೂ ಪೂಜಿ ಸೋಣ.

ಗ್ರಂಥಾವಲೋಕನ

‘ನಮ್ಮ ಕವಿ’: ಮೂಲ ಲೇಖಕರು: ಲೀಲಾ ಮಜುಂದಾರ್. ಅನುವಾದಕರು: ಶ್ರೀ ಶ. ಬಾಲೂರಾವ್. ಪ್ರಕಾಶಕರು: ಸಾಹಿತ್ಯ ಅಕ್ಯಾಡೆಮಿ, ನವದೆಹಲಿ. ಡೆಮ್ಮಿ ೧/೮, ಪುಟಗಳು ೧೬, ಬೆಲೆ ೦-೫೦. ನ. ಪೈ.

ಈ ಪುಟ್ಟಗ್ರಂಥದಲ್ಲಿ ರವೀಂದ್ರನಾಥ ಠಾಕೂರರ ಸಂಗ್ರಹ ಜೀವನ ಚರಿತ್ರೆಯಿದೆ. ಈ ಗ್ರಂಥವನ್ನು ಓದಿದರೆ, ಸಾಸಿವೆಯ ಮೇಲೆ ಸಾಗರವು ಹರಿಸುವ ಕನ್ನಡಿಯಲ್ಲಿ ಕರಿಯನ್ನು ಕಾಣಿಸುವ ಚಾತುರ್ಯ ಕನ್ನಡಿಗರಿಗೆ ಇದೆಯೆಂದು ಭಾಸವಾಗುತ್ತದೆ. ರವೀಂದ್ರನಾಥ ಠಾಕೂರರ ಸಂಗ್ರಹ ಪರಿಚಯುವನ್ನು ಕೆಲವಾರು ನಿಮಿಷಗಳಲ್ಲಿ ಪಡೆಯಬೇಕೆನ್ನುವವರಿಗೆ ಈ ಹೊತ್ತಿಗೆಯು ತುಂಬಾ ಸಹಾಯಕವಾಗಿದೆ. ಕಾಗದ, ಮುದ್ರಣ, ರಕ್ಷಾಪತ್ರ ಎಲ್ಲವೂ ಸುಂದರವಾಗಿವೆ. ಮುಖಪತ್ರದಲ್ಲಿ ಠಾಕೂರರ ಸುಂದರ ಚಿತ್ರವಿದೆ. ಪುಸ್ತಕ ಚಿಕ್ಕದಾದರೂ ವಾಚನಾರ್ಹವಾಗಿದೆ.

ಎರಡು ಸಾಂಕೇತಿಕ ನಾಟಕಗಳು: ಕನ್ನಡ ಅನುವಾದಕರು: ಶ್ರೀ ಶಂಕರಾನಂದ ಸರಸ್ವತಿ. ಪ್ರಕಾಶಕರು: ಕನ್ನಡ ಸಾಹಿತ್ಯ ಅಕ್ಯಾಡೆಮಿ ಹೊಸದೆಹಲಿ. ಸೈಜು ಡೆಮ್ಮಿ ೧/೮, ಬೆಲೆ ರೂ. ೩-೭೫. ನ. ಪೈ.

ರವೀಂದ್ರನಾಥ ಠಾಕೂರರ ಸಾಹಿತ್ಯ ಪ್ರತಿಭಾನ್ವಿತವಾಗಿಯೂ, ವಿವಿಧತೆಯಿಂದ ಕೂಡಿಯೂ, ವಿದ್ವತ್‌ಪೂರ್ಣವಾಗಿಯೂ ಇವೆ. ಅವರ ಕಾವ್ಯಗಳಂತೆ ಅವರ ಕತೆ, ಕಾದಂಬರಿ, ನಾಟಕಗಳೂ ಲೋಕಪ್ರಿಯವಾಗಿವೆ. ಠಾಕೂರರು ಈಗ ವಿಶ್ವಕವಿಗಳೆಂಬ ಮನ್ನಣೆಯನ್ನು ಪಡೆದಿದ್ದಾರೆ. ನೋಬೆಲ್ ಬಹುಮಾನವನ್ನು ಪಡೆದ ಭಾರತೀಯ ಸಾಹಿತಿ ಅವರೊಬ್ಬರೇ. ಈಗ ಭಾರತದಲ್ಲೆಲ್ಲಾ ಅವರ ಶತಮಾನೋತ್ಸವವು ಕೇಂದ್ರ ಮತ್ತು ರಾಜ್ಯ ಸರಕಾರಗಳ ನೇತೃತ್ವದಲ್ಲಿ ನಡೆಯುತ್ತಿದೆ. ಪ್ರತಿಯೊಂದು ರಾಜ್ಯದ ರಾಜಧಾನಿಯಲ್ಲೂ ಕೇಂದ್ರದ ರಾಜಧಾನಿಯಲ್ಲೂ ಅವರ ಹೆಸರಿನಲ್ಲಿ ರಾಷ್ಟ್ರೀಯ ನಾಟಕ ಭವನವು ನಿರ್ಮಾಣವಾಗುತ್ತಿದೆ. ಬೆಂಗಳೂರಿನಲ್ಲಿ ಆಗುತ್ತಿರುವ ನಾಟಕ ಭವನ ಇಡೀ ಭಾರತದಲ್ಲೇ ಪ್ರಖ್ಯಾತವೆನಿಸಿದೆ. ಈಗ ರವೀಂದ್ರರ ನಾಟಕಗಳು ಭಾರತದ ಎಲ್ಲ ಭಾಷೆಯಲ್ಲಿಯೂ ಭಾಷಾಂತರವಾಗುತ್ತಿವೆ.

ಪ್ರಕೃತ ನಮ್ಮ ಹಸ್ತಗತವಾಗಿರುವ ರಾಜಾ ಮತ್ತು ಮುಕ್ತಧರ ಎಂಬ ಎರಡು ನಾಟಕಗಳು ಸ್ವಾರಸ್ಯವಾಗಿಯೂ ಸ್ಫೂರ್ತಿದಾಯಕವಾಗಿಯೂ ಇವೆ. ವಿಶ್ವಕವಿಯ ಶತಮಾನೋತ್ಸವದ ನಿಮಿತ್ತವಾಗಿ ಅವರ ಸಾಹಿತ್ಯ ಕನ್ನಡ ನಾಡಿಗೆ ಹೀಗೆ ವಿಪುಲವಾಗಿ ಬರುತ್ತಿರುವುದು ನಮ್ಮ ಜನರ ಭಾಗ್ಯ ಎಂದು ಭಾವಿಸಬಹುದು. ರಾಜಾ ಮತ್ತು ಮುಕ್ತಧರ ಈ ಎರಡೂ ನಾಟಕಗಳು ಸಹೃದಯರ ವಾಚನಕ್ಕೂ ಅವಲೋಕನಕ್ಕೂ ಅರ್ಹವಾಗಿವೆ.

—ಶೂಲಪಾಣಿ

ನಾಳಿನ ಕನಸು: (ಸಣ್ಣಕತೆಗಳ ಸಂಗ್ರಹ.) ಬರೆದವರು: ದ. ಬಾ. ಕುಲಕರ್ಣಿ. ಲಲಿತ ಸಾಹಿತ್ಯಮಾಲೆ, ಧಾರವಾಡ. ಪುಟಗಳು ೧೩೪. ಬೆಲೆ ರೂ. ೧-೭೫. ನ. ಪೈ.

ಸಣ್ಣಕತೆಯು ಆಧುನಿಕ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಕಾಲದ ಒತ್ತಡಕ್ಕೆ ಸಿಕ್ಕಿದ ಓದುಗನಿಗೆ ಕಾದಂಬರಿಗಳನ್ನು ಓದಲು ವ್ಯವಧಾನವಿಲ್ಲದೆ, ಸಣ್ಣಕತೆಗಳನ್ನು ಓದುವ ಹವ್ಯಾಸಕ್ಕೆ ಸಿಕ್ಕಿದ್ದಾನೆ. ಆವನಿಗೆ ಪ್ರತಿಕತೆಯೂ ಒಳ್ಳೆಯ ಘಟನೆಯೊಂದನ್ನು ಆಕರ್ಷಣೀಯವಾಗಿ ತಿಳಿಸಬೇಕು. ಅದರಲ್ಲಿ ಜನಜೀವನದ ಚಿತ್ರದೊಂದಿಗೆ ಮನಸ್ಸಿಗೆ ಆನಂದವನ್ನು ಪಡೆಯಲು ಆತ ಪ್ರಯತ್ನಿಸುತ್ತಾನೆ. ಈ ದೃಷ್ಟಿಯಿಂದ ನೋಡಿದರೆ ದ.ಬಾ. ಕುಲಕರ್ಣಿಯವರ ೭ ಕತೆಗಳನ್ನು ಪಡೆದ ಈ ಕತಾಸಂಗ್ರಹವು ನಿರಾಶೆಗೊಳಿಸುತ್ತದೆ.

ಹೊಸ ತಂತ್ರದ ಪ್ರಯೋಗ ಪಡೆದಿದೆ ಎಂದು ಹೇಳಿರುವ ಕತೆ ‘ನಾಳಿನ ಕನಸು’ ಬಿಗಿಯಾಗಿ ಬಂದಿಲ್ಲ. ೪-೫ ಪಾತ್ರಗಳು ತಮ್ಮ ದೃಷ್ಟಿಯಿಂದ ಒಂದೇ ವ್ಯಕ್ತಿಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ ಚಿತ್ರಿಸಿರುವ ಈ ಕತೆಯಲ್ಲಿ ನಿಜವಾಗಿಯೂ ಕತೆಯಿಲ್ಲ. ಸಂಬಂಧವಿಲ್ಲ. ಯಾವ ಪಾತ್ರವೂ ವಿವೇಚನೆಯನ್ನು ಸರಿಯಾಗಿ ಮಾಡಿಲ್ಲ. ಇದು ಬಹಳ ಮಟ್ಟಿಗೆ ಓದುಗನನ್ನು ನಿರಾಶೆಗೊಳಿಸುತ್ತದೆ.

ಅಂತೆಯೇ ‘ಧೋಂಡಪ್ಪ ಧಣಿಯು’ ಕತೆ ಒಳ್ಳೆಯ ವಸ್ತುವನ್ನು ಪಡೆದಿದ್ದರೂ ಸಪ್ಪೆಯಾಗಿ ಅಂತ್ಯಗೊಳ್ಳುತ್ತದೆ. ಸಂದರ್ಭದ ಒತ್ತಡಕ್ಕೆ ಸಿಕ್ಕು ಒಡೆಯನ ಕಾಮಕ್ಕೆ ಸಿಕ್ಕಿ ಮುರಿಗೆವ್ವ ತಾಯಿಯಾಗುತ್ತಾಳೆ. ಮಗ ತಿರುಕಪ್ಪ ದಾರಿಗಾಣದ ತಬ್ಬಲಿಯಾಗಿ ಕಡುಬಡವನಾಗಿ ಜೀವನ ನಡೆಸುತ್ತಾನೆ. ಆದರೆ ಯಾವುದೋ ಅರಿಯಲಾಗದ ಬಾಂಧವ್ಯ ಆ ಕಡೆಗೆ ಇವನನ್ನು ಎಳೆಯುತ್ತದೆ. ಇದನ್ನು ಇನ್ನೂ ಸುಂದರವಾಗಿ ಮಾಡಬಹುದಿತ್ತು.

‘ಅವಧಿ ಮುಗಿದ ಗೆಳೆತನ’— ಅಸಂಬದ್ಧತೆಯ ಪಂಜರದಂತಿದೆ. ಇಬ್ಬರು ಸ್ನೇಹಿತರು, ಅವರ ಪತ್ನಿಯರೂ ಬಾಲ್ಯ ಸ್ನೇಹಿತರೆ. ಆದರೆ ಒಬ್ಬರನ್ನೊಬ್ಬರು ಭೇಟಿ ಮಾಡಿರುವುದಿಲ್ಲ. ಎರಡು ಸಂಸಾರಗಳೂ ಅಕಸ್ಮಾತ್ತಾಗಿ ಭೇಟಿ ಮಾಡಿದುದರ ಫಲವಾಗಿ ಹೆಂಗಸರು ಹಳೆಯ ಸ್ನೇಹವನ್ನು ನೆನೆಸಿಕೊಂಡು ಒಂದಾಗುತ್ತಾರೆ. ವಿಧಿಯಿಲ್ಲದೆ ಇಬ್ಬರು ಗಂಡಸರೂ ತಮ್ಮ ತಮ್ಮ ಮಕ್ಕಳನ್ನು ಕರೆದುಕೊಂಡು ಮನೆಗೆ ಹೋಗುತ್ತಾರೆ. ಈ ಕತೆ ಸೀರಸವೂ ಯಾವ ವಿಧವಾದ ಆನಂದವನ್ನೂ ಕೊಡದ ನಿರೂಪಣೆಯೂ ಆಗಿ ಕೊನೆಗೊಂಡಿದೆ.

‘ರಂಗಣ್ಣನ ಸ್ವಾತಂತ್ರ್ಯ ಜಾಲ’— ಸ್ವಾತಂತ್ರ್ಯದ ನಿಜ ಸ್ವರೂಪವನ್ನು ಅರಿಯದ ರಂಗಣ್ಣ ಎಲ್ಲದರಲ್ಲೂ ಸ್ವತಂತ್ರ

ನಾಗುತ್ತಾನೆ. ಹೆಂಡತಿ ಮಕ್ಕಳನ್ನು ತನ್ನ ಹತೋಟಿಯಲ್ಲಿಟ್ಟು ಕೊಳ್ಳಬೇಕೆಂದು ನಿರ್ಧರಿಸುತ್ತಾನೆ. ಆದರೆ ಮಗು ಸತೀಶ ಇವನ ಇಚ್ಛೆಗೆ ವಿರುದ್ಧವಾಗಿ ಸಾವಿತ್ರಿಯನ್ನು ವಿವಾಹವಾಗ ಬಯಸುತ್ತಾನೆ. ರಂಗಣ್ಣನ ವಿರೋಧವು ನಿಷ್ಫಲವಾಗಿ ಹೆಂಡತಿ ರಾಧೆಯು ವಿವಾಹಕ್ಕೆ ಅನುಮತಿ ಕೊಡುತ್ತಾಳೆ. ವಿಧಿಯಿಲ್ಲದೆ ರಂಗಣ್ಣ ಒಪ್ಪಬೇಕಾಗುತ್ತದೆ. ರಂಗಣ್ಣನ ಸ್ವಾತಂತ್ರ್ಯ ಪ್ರೇಮ ಹುಚ್ಚುಹುಚ್ಚಾಗಿ ಹರಿದು ಅಂತ್ಯಗೊಳ್ಳುತ್ತದೆ. ಈ ಕತೆಯಲ್ಲಿ ಲೇಖಕರು ಯಾವ ಜಾಣ್ಮೆಯನ್ನೂ ತೋರಿಲ್ಲ. ಕಲಾತ್ಮಕ ದೃಷ್ಟಿಯೂ ಗೋಚರವಾಗುವುದಿಲ್ಲ.

ಈ ಎಲ್ಲ ಕತೆಗಳಿಗೂ ವಿರುದ್ಧವಾಗಿ ಬಹಳ ಸುಂದರವೂ, ಆಕರ್ಷಕವೂ 'ಮೂಕ ಪ್ರೇರಣೆ' 'ನಾರಾಯಣ ಶಂಕರ ನಾಡಕರ್ಣಿ' ಮತ್ತು 'ಸಿರಿಮೆಂಟಲ್ ಕ್ಲಿನಿಕ್' ಗಳು ಓದುಗನ ಮೇಲೆ ಒಳ್ಳೆಯ ಪರಿಣಾಮವನ್ನು ಬೀರುತ್ತವೆ.

ಮೂಕ ಪ್ರೇರಣೆಯಲ್ಲಿ ಅರಿಯದವನನ್ನು ಬಹಳ ಮಟ್ಟಿಗೆ ಅಂಟಿಸಿಕೊಂಡು ಅಗಾಧವಾದ ಮಾನಸಿಕ ನೋವನ್ನು ಅನುಭವಿಸುವ ವ್ಯಕ್ತಿಯ ಸುಂದರ ಚಿತ್ರವನ್ನು ಕಾಣುತ್ತೇವೆ. ಇಬ್ಬರು ವ್ಯಕ್ತಿಗಳು ಒಬ್ಬರನ್ನೊಬ್ಬರು ಪ್ರತಿದಿನ ಒಂದೇ ಕಡೆ ಭೇಟಿ ಮಾಡಿದರೂ ಪರಿಚಯ ಮಾಡಿಕೊಳ್ಳದೆ ಕೊನೆಗೆ ಅವರಲ್ಲಿ ಒಬ್ಬನು ಕಾಯಿಲೆ ಬಿದ್ದಾಗ ಮತ್ತೊಬ್ಬನಿಗಾಗಿ ಹಂಬಲಿಸುವ ದಾರುಣವಾದ ಚಿತ್ರ ಇಲ್ಲಿ ಕಾಣುತ್ತೇವೆ. ಇದು ಓದುಗನ ಮೇಲೆ ಒಳ್ಳೆಯ ಪರಿಣಾಮ ಬೀರಿದರೂ ಕಲಾತ್ಮಕವಾಗಿ ಬಂದಿಲ್ಲವೆನ್ನಿಸುತ್ತದೆ.

'ನಾರಾಯಣ ಶಂಕರ ನಾಡಕರ್ಣಿ' ಈ ಸಂಗ್ರಹದ ಅತ್ಯುತ್ತಮ ಕತೆ ಎನ್ನಬಹುದು, ಇದರಲ್ಲಿ ಕತೆ, ನಿರೂಪಣೆ, ಪಾತ್ರವಿವೇಚನೆ ಉತ್ತಮವಾಗಿದ್ದು ಕನ್ನಡದ ಶ್ರೇಷ್ಠ ಕತೆಗಳಲ್ಲಿ ಒಂದಾಗಿ ಸೇರಲು ಯೋಗ್ಯತೆಯನ್ನು ಪಡೆಯುತ್ತದೆ. ಈ ಕತೆಯ ವಸ್ತು ಮಾರ್ಮಿಕವಾಗಿದೆ. ಹೃದಯವನ್ನು ಮೀಟುವಂಥದಾಗಿದೆ. ಗಂಡ ಹೆಂಡತಿ ಸಂಸಾರದೊಂದಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಾರೆ. ಯಾವುದೋ ಸ್ಟೇಶನ್ನಿನಲ್ಲಿ ಒಬ್ಬ ಹುಡುಗ ರೈಲು ಹತ್ತುತ್ತಾನೆ. ಆ ಹುಡುಗ ಅಲ್ಲಿದ್ದ ಆಕೆಯ ಹೃದಯದಲ್ಲಿ ಹಿಂದೆ ತಮ್ಮ ಮನೆಯ ಪಕ್ಕದಲ್ಲಿದ್ದ ಜೊತೆಗಾರನನ್ನು ನೆನಪಿಗೆ ತರುತ್ತಾನೆ. ಹಳೆಯ ಸುಂದರ ನೆನಹುಗಳನ್ನು ತಂದುಕೊಂಡ ಆಕೆ ವಿಚಾರಿಸಿದಾಗ ಆ ಹುಡುಗ ಆಕೆಯ ಜೊತೆಗಾರನ ಮಗನೆಂಬುದು ತಿಳಿಯುತ್ತದೆ. ಕತೆ ಕೊನೆಗಾಣುತ್ತದೆ. ಇದರಲ್ಲಿ ಬರುವ ಪ್ರತಿ ಮಾತೂ ಸಹ ನಮ್ಮ ಮೇಲೆ ಪರಿಣಾಮ ಬೀರಿ ವೇದನೆಯನ್ನುಂಟುಮಾಡಿಸುತ್ತದೆ. ಇದರ ಅಂತ್ಯವೂ ಸಹ ಅತ್ಯಂತ ಗಂಭೀರವಾಗಿದ್ದು ಮುಂದೇನಾಗಿರಬಹುದೆನ್ನುವುದನ್ನು ನಾವೇ ಊಹಿಸಿಕೊಳ್ಳಲು ಬಿಟ್ಟುಬಿಡುತ್ತದೆ. ಇದು ನಿಜವಾಗಿಯೂ ಉತ್ಕೃಷ್ಟವಾದ ಕತೆ.

"ಸಿರಿಮೆಂಟಲ್ ಕ್ಲಿನಿಕ್" ಪ್ರೇಮದ ವಿಚಿತ್ರ ವರ್ತನೆಯನ್ನು ಬೆಳವಣಿಗೆಯನ್ನು ಇಲ್ಲಿ ಕಾಣಬಹುದು. ಇಬ್ಬರು ವೈದ್ಯರು ಸ್ವಾರ್ಥದ ಅಡ್ಡವನ್ನು ದಾಡು ದೂರವಾಗಿ ಕೊನೆಗೆ ವಿಶಾಲ ಮನೋಭಾವವನ್ನು ಬೇರೆ ಬೇರೆ ಕಾರಣಗಳಿಂದ ತೋರಿ ಒಂದಾಗಿ ವಿವಾಹವಾಗುತ್ತಾರೆ. ಇಬ್ಬರಲ್ಲೂ ತ್ಯಾಗವಿದೆ. ಇಬ್ಬರಲ್ಲೂ ಸೇವಾದೃಷ್ಟಿಯಿದೆ. ಆದರೆ ಅವರ ಮಿಳನ ಬಹಳ ಕಾಲದನಂತರ ಆಗುತ್ತದೆ. ಕತೆಯಲ್ಲಿ ನೈಜತೆಯಿಲ್ಲ. ಆದರೆ ಹಿತವಾಗಿದೆ.

ಒಟ್ಟಿನಲ್ಲಿ ದ. ಬಾ. ಕುಲಕರ್ಣಿಯವರ ಈ ಕತಾಸಂಗ್ರಹ ನಿರಾಶೆಗೊಳಿಸಿದರೂ 'ನಾರಾಯಣ ಶಂಕರ ನಾಡಕರ್ಣಿ'ಗಾದರೂ ಓದಲು ತಕ್ಕುದಾಗಿದೆ.

—ತೊ. ಸು. ಸುಬ್ರಹ್ಮಣ್ಯಂ

ತಾಪೇದಾರಿ ಅಥವಾ ಎನ್. ಜಿ. ಒ. ಸಂಜೀವಯ್ಯ: (ಸಾಮಾಜಿಕ ನಾಟಕ) ಲೇಖಕರು: ಶ್ರೀ ಸಿ. ಆರ್. ವಿ. ಆಚಾರ್ಯ, ಪ್ರಕಾಶಕರು: ಮಧುರ ಸಾಹಿತ್ಯ ನಂ. ೨೯. ೬ನೆಯ ರಸ್ತೆ ಚಾಮರಾಜಪೇಟೆ, ಬೆಂಗಳೂರು ೧೮. ಸೈಜು ಕಿರೀಟ ಅಷ್ಟದಳ, ಪುಟಗಳು ೬೪, ಬೆಲೆ ರೂ. ೧-೦೦.

ಈಗಾಗಲೇ ಅನೇಕ ನಾಟಕಗಳನ್ನು ಬರೆದು ಹೆಸರುವಾಸಿಯಾಗಿರುವ ಶ್ರೀ ಸಿ. ಆರ್. ವಿ. ಆಚಾರ್ಯರು ತಾಪೇದಾರಿ ಎಂಬ ಸಾಮಾಜಿಕ ನಾಟಕವನ್ನು ಬರೆದು ಕನ್ನಡಿಗರ ಮುಂದಿಟ್ಟಿದ್ದಾರೆ. ಮೊದಲೇ ಈ ನಾಟಕಕ್ಕೆ 'ಎನ್. ಜಿ. ಒ. ಸಂಜೀವಯ್ಯ' ಎಂಬ ಹೆಸರನ್ನಿಟ್ಟಿದ್ದರೆಂದು ಲೇಖಕರೇ ತಿಳಿಸಿದ್ದಾರೆ. ವಾಸ್ತವವಾಗಿ ನೋಡಿದರೆ ಈಗಲೂ ಅದೇ ಹೆಸರೇ ಒಪ್ಪುತ್ತದೆ. ತಾಪೇದಾರಿ ಎಂಬುದು ಇಂಗ್ಲೀಷ್‌ನಲ್ಲಿ ಬಳಕೆಯಲ್ಲಿರುವ Subordination ಎಂಬ ಪದಕ್ಕೆ ಸರಿಹೋಗುತ್ತದೆ. ಈ ನಾಟಕವನು "ಸುಖ ಸಂಪತ್ತುಗಳು ತಮಗಿಲ್ಲವೆಂದು ತಿಳಿದು ಎಲ್ಲಾ ಆಸೆಗಳನ್ನೂ ತೊರೆದು, ಹಗಲಿರುಳು ಸತತವಾಗಿ ಸರ್ಕಾರಕ್ಕೆ ದುಡಿಯುತ್ತಿರುವ ಎಲ್ಲ ಎನ್. ಜಿ. ಒ. ಗಳಿಗೆ" ಲೇಖಕರು ಅರ್ಪಿಸಿದ್ದಾರೆ. ಅಲ್ಲದೆ "ಯಾವ ಒಂದು ವ್ಯಕ್ತಿಯನ್ನೇ ಆಗಲಿ, ಮೇಲ್ಮಟ್ಟ ಯಾವ ಸರ್ಕಾರಿ ಅಧಿಕಾರಿಗಳನ್ನೇ ಆಗಲಿ ಅಥವಾ, ಒಂದು ಸರ್ಕಾರದ ರೀತಿ ನೀತಿಗಳನ್ನು ಆಗಲಿ ಕುರಿತು ಬರೆದುದಲ್ಲ" ಎಂಬುದಾಗಿ ಲೇಖಕರು ತಿಳಿಸಿರುತ್ತಾರೆ. ಸಬ್ ಡಿವಿಜನ್ ಆಫೀಸಿನಲ್ಲಿ ಗುಮಾಸ್ತರಾದ ಸಂಜೀವಯ್ಯನವರು ಈ ನಾಟಕದ ಕಥಾನಾಯಕರಾಗಿದ್ದಾರೆ. ಈತನ ಮಿತ್ರರಾದ ಶಿವರಾಮಯ್ಯ, ಸುಬ್ಬಣ್ಣ ಈ ನಾಟಕದ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ. ಕೃಷ್ಣಸ್ವಾಮಿ ಎಂಬುವರು ಅಧಿಕಾರಿಗಳಾಗಿ ಶೋಭಿಸುತ್ತಾರೆ. ಇಷ್ಟೇ ಅಲ್ಲದೆ ಎರಡು ಸ್ತ್ರೀ ಪಾತ್ರಗಳೂ ಇವೆ. ಒಬ್ಬಾಕೆ-ಸುಶೀಲಮ್ಮ ಸಂಜೀವಯ್ಯನ ಹೆಂಡತಿ; ಇನ್ನೊಬ್ಬರು ಕೃಷ್ಣಸ್ವಾಮಿಯವರ ಪತ್ನಿ. ನಾಟಕ ಆಡಲು ಯೋಗ್ಯವಾಗಿದೆ. ಈ ಲೇಖಕರಿಗೆ ಉತ್ತಮ ಭವಿಷ್ಯವಿದೆ.

'ಪಾಪಾ': ಮಕ್ಕಳ ಕವನ ಸಂಗ್ರಹ. ಲೇಖಕರು: ಶ್ರೀ ಈಶ್ವರ ಹಿರೇನಂದಿಹಳ್ಳಿ. ಪ್ರಕಾಶಕರು: ನಂದೀಶ್ವರ ಪ್ರಕಾಶನ, ಹಿರೇನಂದಿಹಳ್ಳಿ. ಸೈಜು ಕಿರೀಟ ಅಷ್ಟದಳ, ಪುಟಗಳು ೩೦, ಬೆಲೆ ೦-೪೦. ನ. ಪೈ.

ಇದು ಮಕ್ಕಳಿಗಾಗಿ ಬರೆದ ಕವನ ಸಂಗ್ರಹ, ಇದರಲ್ಲಿ ೩೮ ಕವನಗಳಿವೆ. ಈ ಪುಸ್ತಕವು ಮಾನ್ಯ ಮಂತ್ರಿಗಳಾದ ಶ್ರೀ ಜೆ. ಎಚ್. ಷಂಷುದ್ದೀನ್ ಅವರಿಂದ ಧಾರವಾಡದಲ್ಲಿ ಉದ್ಘಾಟಿಸಲ್ಪಟ್ಟಿದೆ.

ಈ ಪುಟ್ಟ ಪುಸ್ತಕಕ್ಕೆ ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಅವರಾದ ಶ್ರೀ ವಿ. ಕೆ. ಜವಳಿಯವರು ಮುನ್ನುಡಿಯ ಒಡವೆಯನ್ನು ತೊಡಿಸಿ ಆಶೀರ್ವದಿಸಿದ್ದಾರೆ. 'ಪ್ರಾರ್ಥನೆ,' 'ನಮ್ಮ ತೋಟ-ಸಾಲೆಯು,' ಇವೆರಡು ಕವನಗಳು ಅತ್ಯುತ್ತಮದಾಗಿವೆ. 'ಪಾಪಾ' 'ಡಾಕ್ಟರ ನಾಗುವೆ,' 'ಅಕ್ಕನ ಶಾಲೆ,' 'ಹುಲಿಯು ಬಂತು,' 'ದಾರಿ ತೋರೋ ಚಂದಿರ,' 'ದೇವರಿಗೊಂದು ಪತ್ರ,' 'ರಾಯ-ರಾಯ ಬಾವುಗರ ಸಂವಾದ'- ಈ ಕವನಗಳು ಉತ್ತಮವಾಗಿವೆ. ಇಲ್ಲಿ 'ಬಾವುಗ'- ಎಂಬ ಪದ ಮೈಸೂರು ಕನ್ನಡದಲ್ಲಿ ಹೆಚ್ಚು ಬಳಕೆಯಲ್ಲಿಲ್ಲವಾದ್ದರಿಂದ, ಆ ಪದ್ಯ ಪೂರ್ತಿ ಓದಿಯಾದ ಮೇಲೆ-ಬಾವುಗ–ಎಂದರೆ ಬೆಕ್ಕು ಎಂದು ತಿಳಿದು ಕೊಳ್ಳಬೇಕಾಗಿದೆ. ಪದ್ಯದ ಕೊನೆಯಲ್ಲಿ ಅದರ ಅರ್ಥ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಪದ್ಯಗಳೆಲ್ಲ ಮಕ್ಕಳಿಗೆ ಹಾಡಲು ಯೋಗ್ಯವಾಗಿವೆ. ಈ ಲೇಖಕರಿಂದ ಶಿಶು ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಸೇವೆ ದೊರೆಯಲೆಂದು ಹಾರೈಸುತ್ತೇನೆ.

—ಬ. ನ. ಸುಂ.

ಸಾರ್ಥಕ ಮನೆಯ ಲಕ್ಷಣಗಳು: ಲೇಖಕರು: ಶ್ರೀ ಹರಿದಾಸ ಕೀರ್ತನಕೇಸರಿ, ವೆಂಕಟದಾಸ ಅಚ್ಯುತಕಾಮತ, ಕಾರವಾರ. ಬೆಲೆ ೦-೧೯. ನ. ಪೈ.

"ಗೃಹಿಣೀ ಗೃಹಮುಚ್ಯತೆ" ಎನ್ನುವಂತೆ ಸಂತುಷ್ಟಳಾದ ಗೃಹಿಣಿಯೇ ಮನೆಯ ಲಕ್ಷ್ಮಿ, ಮನೆಯ ವೈಭವಕ್ಕೆ ಆದರಾತಿಥ್ಯಗಳೇ ಲಕ್ಷಣಗಳು. ವ್ಯವಸ್ಥೆ ಮತ್ತು ಧಾರ್ಮಿಕತೆಗಳೇ ಪುರೋಭಿವೃದ್ಧಿಯ ದ್ಯೋತಕಗಳು, ಎಂಬ ನೀತಿ ವಾಕ್ಯಗಳು ಈ ಪಠದಲ್ಲಿ ನಮೂದಿಸಿವೆ. ಪುಸ್ತಕಗಳನ್ನು ಓದಿ ವಿಷಯಗಳನ್ನು ಮನನಮಾಡಿ ಆಚರಣೆಗೆ ತರುವುದು ಸಾವಕಾಶವಾಗಬಹುದು. ಎಲ್ಲರೂ ಸರ್ವ ನೋಡಿ ಆಚರಿಸುವಂತೆ ಸಾರ್ಥಕ ಮನೆಯ ಲಕ್ಷಣಗಳನ್ನು ದೊಡ್ಡ ಅಕ್ಷರದಲ್ಲಿ ಕಾಣುವಂತೆ ಅಚ್ಚಿಟ್ಟು ಪ್ರಕಟಿಸಿದ್ದಾರೆ. ಅನೇಕ ನೀತಿ ವಾಕ್ಯಗಳು ಈ ರೀತಿ ಬರೆಯಲ್ಪಟ್ಟು ಪಾಠಶಾಲೆಗಳ ಉಪಯೋಗಕ್ಕೆ ಬರುವುದಾದರೆ ಇದರಿಂದ ಹೆಚ್ಚಿನ ಉಪಯೋಗವುಂಟಾಗುವುದು. ಈ ರೀತಿಯ ಉದ್ಯಮವು ದೊಡ್ಡ ಗ್ರಂಥಗಳ ಪ್ರಕಟನೆಗಿಂತ ಹೆಚ್ಚಿನ ಫಲದಾಯಕವೆಂಬುದರಲ್ಲಿ ಸಂದೇಹವಿಲ್ಲ.

ಆರ್ಯರ ದಿನಚರ್ಯೆ: ಲೇಖಕರು: ಡಾ॥ ದತ್ತೋಪಂತ ವಿನಾಯಕ ಪಟವರ್ಧನಬುವಾ ವಾಯಿ, ಭಾಷಾಂತರಕಾರರು: ಶ್ರೀ ಹ. ಭ. ಪ. ಶ್ರೀ ಹರಿದಾಸ ಕೀರ್ತನ ಕೇಸರಿ, ವೆಂಕಟದಾಸ ಅಚ್ಯುತಕಾಮತ, ಕಾರವಾರ. ಸೈಜು ೧/೮ ಕ್ರೌನ್, ಪುಟಗಳು ೧೪೨ ಬೆಲೆ ರೂ. ೧–೨೫. ನ. ಪೈ.

ಚತುರ್ವಿಧ ಪುರುಷಾರ್ಥಗಳಿಗೆ ಸಾಧನವಾದದ್ದು ಈ ದೇಹ. ಇಂಥ ಅಮೂಲ್ಯವಾದ ದೇಹವನ್ನು ಹೊಂದಿದಮೇಲೆ ಇದರ ಸದುಪಯೋಗವನ್ನು ಪ್ರತಿಯೊಬ್ಬನೂ ಮಾಡಿಕೊಂಡು ಮುಕ್ತನಾಗಬೇಕು. 'ದುರ್ಲಭಂ ಮಾನುಷಂ ಜನ್ಮ' ಎಂಬ ಆರ್ಯೋಕ್ತಿಯನ್ನು ಮನಸ್ಸಿನಲ್ಲಿಟ್ಟು ದೇಹವನ್ನು ಶುದ್ಧವಾಗಿಟ್ಟುಕೊಂಡು ಅದನ್ನು ಆಶ್ರಯಿಸಿರುವ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಬೇಕು. ಇವುಗಳ ಸಾಧನೆಗೆ ಮಹರ್ಷಿಗಳ ಉಪದೇಶಗಳೂ ಶಾಸ್ತ್ರಗಳೂ ಸಾಧಕಗಳಾಗಿರುವುವು. ಪ್ರಕೃತ ಗ್ರಂಥದಲ್ಲಿ ಅಂಥ ಅನೇಕ ಶಾಸ್ತ್ರಾಧಾರಗಳು ನಿರೂಪಿತವಾಗಿವೆ. ಶಾಸ್ತ್ರಾನುಷ್ಠಾನವು ಜನ ಜೀವಿಕೆಗೆ ಹೇಗೆ ಹೊಂದಿಕೊಂಡಿದೆ ಎಂಬ ವಿಷಯವು ಉದಾಹರಣೆಯೊಡನೆ ಉಪಪಾದಿತವಾಗಿದೆ. ಪುರಾತನ ಪದ್ಧತಿಗಳ ಮೇಲ್ಮೆ, ಈಗಿನ ಸ್ವೇಚ್ಛಾಪ್ರವರ್ತನದಿಂದುಂಟಾಗುವ ಅನಾಹುತ ಇವುಗಳೆಲ್ಲವನ್ನೂ ತಿಳಿಯಲು ಈ ಗ್ರಂಥ ಮಾರ್ಗದರ್ಶಕವಾಗಿದೆ. ಪ್ರತಿಯೊಬ್ಬರೂ ಆಚರಿಸುತ್ತಿರುವ ಕರ್ಮಗಳ ಅರ್ಥಗಳು ಸುಲಭರೀತಿಯಿಂದ ನಿರೂಪಿತವಾಗಿವೆ. ದೇಹ ಪೋಷಣೆಗೆ ಅಗತ್ಯವಾಗಿರುವ ಆಹಾರ, ನಿದ್ದೆ, ವ್ಯಾಯಾಮ, ಜಾಡ್ಯಗಳಿಗೆ ಚಿಕಿತ್ಸೆ, ಇವುಗಳೆಲ್ಲವನ್ನು ಹಿತಮಿತವಾಗಿ ಶ್ರೀಯುತರು ವಿವರಿಸಿದ್ದಾರೆ. ಪ್ರತಿ ಕನ್ನಡಿಗನೂ ಸಂಗ್ರಹಿಸಿಡಬೇಕಾದ ಗ್ರಂಥವಿದು. ಇಂಥ ಪರಿವರ್ತನ ಗ್ರಂಥಗಳು ಬಂದಷ್ಟೂ ಕನ್ನಡ ಭಾಷೆಯು ವೀರ್ಯವತ್ತಾಗುವುದರಲ್ಲಿ ಸಂದೇಹವಿಲ್ಲ. ಶ್ರೀಯುತರು ಕನ್ನಡಿಗರಿಗೂ ಕನ್ನಡನಾಡಿಗೂ ಬಹಳ ಉಪಕಾರ ಮಾಡಿದ್ದಾರೆ.

—ಸುದರ್ಶನ

ಶುಕ್ರದೆಸೆ: (ಕಥಾಸಂಕಲನ) ಅನುವಾದಕರು: ಸರಸಪ್ರಿಯ. ಪ್ರಕಾಶಕರು: ಶ್ರೀ ಗೌರೀಶಂಕರ ಬುಕ್ ಡಿಪೊ, ದೇವರಾಜ ಮಾರ್ಕೆಟ್, ಮೈಸೂರು. ಪುಟಗಳು ೧೦೬. ಬೆಲೆ ರೂ. ೧–೫೦. ನ. ಪೈ.

ಕಾದಂಬರಿಯಂತೆ ಕಥಾ ಸಾಹಿತ್ಯವು ಹಿಂದಿನಿಂದ ಕನ್ನಡಕ್ಕೆ ಹೆಚ್ಚಾಗಿ ಬಂದಿಲ್ಲ. ಪ್ರೇಮಚಂದರ ಕೆಲವು ಕಥಾ ಸಂಗ್ರಹಗಳನ್ನು ಬಿಟ್ಟರೆ ಹಿಂದೀ ಸಾಹಿತ್ಯದ ಕಥಾಕ್ಷೇತ್ರದ ವೈವಿಧ್ಯಮಯ ಬೆಳಸು ಕನ್ನಡಿಗರಿಗೆ ಪರಿಚಿತವಾಗಿಲ್ಲ. ಆ ದೃಷ್ಟಿಯಿಂದ ಸರಸಪ್ರಿಯರ ಈ ಪ್ರಯತ್ನವು ವಿಶೇಷವಾಗಿ ಯಶಸ್ವಿಯಾಗಿದೆ. ಆಧುನಿಕ ಹಿಂದೀ ಸಾಹಿತ್ಯದ ಪ್ರಮುಖ ಲೇಖಕರ ಹತ್ತು ಕಥೆಗಳನ್ನು ಅನುವಾದಿಸಿ 'ಶುಕ್ರದೆಸೆ'ಯಲ್ಲಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಬಹುಸಂಖ್ಯೆಯ ಕತೆಗಳು ಉತ್ತಮ ಮಟ್ಟದವು. ವನಫೂಲ್ ಅವರ 'ನಿಪುಣತೆ' ಕತೆಯು ಅತ್ಯುತ್ತಮವಾದದ್ದು. ಮುಖ್ಯೋಪಾಧ್ಯಾಯರ 'ಸರ್ಟಿಫಿಕೇಟ' ಅನ್ನಪೂರ್ಣಾನಂದ ವರ್ಮ ಅವರ 'ಅಕ್ಬರನ ಹೂಜಿ' ಹಾಸ್ಯಪೂರ್ಣ ಕತೆಗಳು. ಸುದರ್ಶನ ಅವರ 'ಪ್ರೇಮತರು' ಕಥೆಯೂ ಸೊಗಸಾದ ಕೃತಿ. ಹಿಂದೀ ಕಥಾ ಸಾಹಿತ್ಯದ ಇಂತಹ ವೈವಿಧ್ಯಪೂರ್ಣ ಸಂಗ್ರಹವನ್ನು ಕನ್ನಡಕ್ಕೆ ತೊಡಿಸಿದ ಈ ತರುಣ ಲೇಖಕರು ಅಭಿನಂದನಾರ್ಹರು. ಅವರ ಸಾಹಿತ್ಯಸೇವೆ ಹೀಗೆಯೇ ಮುಂದುವರೆಯಲಿ.

—ವೆಂ.

ಪರಿಷತ್ತಿನ ಸುದ್ದಿಗಳು

ಕನ್ನಡ ಸಾಹಿತ್ಯ ಪರೀಕ್ಷೆಗಳು–೧೯೬೨

೧೯೬೨ನೇ ಫೆಬ್ರವರಿ ಮೊದಲನೆ ವಾರದಲ್ಲಿ ನಡೆಯಬೇಕಾಗಿದ್ದ ಕನ್ನಡ ಸಾಹಿತ್ಯ (ಕಾವ, ಜಾಣ) ಪರೀಕ್ಷೆಗಳನ್ನು ಕಾರಣಾಂತರಗಳಿಂದ ೧೯೬೨ನೇ ಏಪ್ರಿಲ್ ಮಾಹೆಗೆ ಮುಂದುವರಿಸಲಾಗಿದೆ. ನಿರ್ದಿಷ್ಟವಾದ ತಾರೀಖುಗಳನ್ನು ಮುಂದೆ ತಿಳಿಸಲಾಗುವುದು.

೧೯೬೨ರ ಗಮಕ ಪ್ರವೇಶ ಪರೀಕ್ಷೆಗಳು

೧೯೬೨ನೇ ಫೆಬ್ರವರಿ ೧೧ನೇ ಭಾನುವಾರದಲ್ಲಿ ನಡೆಯಬೇಕಾಗಿದ್ದ ಗಮಕ ಪ್ರವೇಶ (ಲಿಖಿತ ಭಾಗ) ಪರೀಕ್ಷೆಯನ್ನು ಕಾರಣಾಂತರಗಳಿಂದ ಮಾರ್ಚಿ ಮಾಹೆಯ ೪ನೇ ತಾರೀಕಿಗೆ (ಭಾನುವಾರಕ್ಕೆ) ಮುಂದುವರಿಸಲಾಗಿದೆ. ವಾಚನ ಪರೀಕ್ಷೆಗಳು ಮಾತ್ರ ಫೆಬ್ರವರಿ ಮಾಹೆಯಲ್ಲಿಯೇ ನಡೆಯುತ್ತವೆ. ಆಯಾ ಕೇಂದ್ರಗಳಲ್ಲಿ ನಡೆಯುವ ನಿರ್ದಿಷ್ಟವಾದ ತಾರೀಕು ಮತ್ತು ಕಾಲವನ್ನು ಕೇಂದ್ರಗಳ ಅಧ್ಯಾಪಕರಿಂದ ವಿದ್ಯಾರ್ಥಿಗಳು ತಿಳಿದುಕೊಳ್ಳಬಹುದು.

ಅನ್ನದಾನಯ್ಯ ಪುರಾಣಿಕ,
ಕೆ. ಎಂ. ಕೃಷ್ಣರಾವ್,
ಗೌ|| ಕಾರ್ಯದರ್ಶಿಗಳು.

ಪರಿಷತ್ತು ಈ ವರ್ಷ ನಡೆಸಿದ ಕೆಳಗೆ ಕಂಡ ಸ್ಪರ್ಧೆಗಳ ಫಲಿತಾಂಶ ಹೀಗಿದೆ.

೧. ಶ್ರೀ ತೂಬುಗೆರೆ ನಂಜಪ್ಪನವರ ದತ್ತಿ ಪ್ರಬಂಧ ಸ್ಪರ್ಧೆ :

ವಿಷಯ: "ಷಡಕ್ಷರಿದೇವ ಮತ್ತು ಆತನ ಕೃತಿಗಳು"
ಬಹುಮಾನ ಪಡೆದವರು : ಶ್ರೀ ಮ. ಮಲ್ಲಪ್ಪನವರು, ಜ್ಞಾನಮಂದಿರ, ಹಲಗೂರು ಪೋಸ್ಟು, ಮಳವಳ್ಳಿ ತಾ||, ಮಂಡ್ಯ ಜಿಲ್ಲೆ.

೨. ದಿ|| ಶೇಷಮ್ಮ ಭಾಸ್ಕರರಾಯರ ದತ್ತಿ ಸ್ಪರ್ಧೆ :
"**ಸಣ್ಣಕಥೆ**" ಪ್ರಥಮ ಬಹುಮಾನ ಪಡೆಯಲರ್ಹವಾದ ಸಣ್ಣ ಕಥೆಗಳಿಲ್ಲ.
ದ್ವಿತೀಯ ಬಹುಮಾನ:—(೧) "ಕಣ್ಣು" ಎಂಬ ಸಣ್ಣಕಥೆ ಬರೆದ ಶ್ರೀಮತಿ ಸೋನುತಾಯಿ ಜಿ. ತೋರಗಲ್ C/o ವಿ. ಜಿ. ತೋರಗಲ್ ೩೫/೧ ಭಂಡೂರ್ ಬೀದಿ, ಬೆಳಗಾಂವ್, ಜಿಲ್ಲೆ.
(೨) "ಗಂಡನ ಪೂಜೆ" ಬರೆದ ಶ್ರೀಮತಿ ಎಂ. ಎಸ್. ಶಾರದ, ನಂ. ೯. III ಕ್ರಾಸ್ ರಸ್ತೆ ಗವೀಪುರ, ಬೆಂಗಳೂರು–೧೯.

ಅನ್ನದಾನಯ್ಯ ಪುರಾಣಿಕ,
ಕೆ. ಎಂ. ಕೃಷ್ಣರಾವ್,
ಗೌ|| ಕಾರ್ಯದರ್ಶಿಗಳು.

ಪರಿಷತ್ತಿನ ಸದಸ್ಯರಲ್ಲಿ ವಿನಂತಿ

೧೯೬೨ರ ಪರಿಷತ್ತಿನ ಸದಸ್ಯತ್ವದ ಚಂದಾ ಆರು ರೂಪಾಯಿಗಳನ್ನು ದಯೆಯಿಟ್ಟು ಈ ಕೂಡಲೇ ಕಳಿಸಿ ಪರಿಷತ್ತಿಗೆ ನೆರವು ನೀಡಬೇಕೆಂದು ವಿನಯದಿಂದ ವಿನಂತಿಸುತ್ತೇವೆ.

ಅನ್ನದಾನಯ್ಯ ಪುರಾಣಿಕ,
ಕೆ. ಎಂ. ಕೃಷ್ಣರಾವ್,
ಗೌ|| ಕಾರ್ಯದರ್ಶಿಗಳು.

ಕನ್ನಡದ ಸುದ್ದಿಗಳು

ಬೆಂಗಳೂರು

ಫೆ. ದಿನಾಂಕ ೪ರಂದು ಬೆಂಗಳೂರು ನಗರದಲ್ಲಿ ಕನ್ನಡ ಯುವಜನ ಸಮ್ಮೇಳನ ನಡೆಯಿತು. ಶ್ರೀ ಆದ್ಯ ರಂಗಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀ ಅ. ನ. ಕೃಷ್ಣರಾಯರು ಸ್ವಾಗತಭಾಷಣ ಮಾಡಿದರು. ಹಲವಾರು ನಿರ್ಣಯಗಳಾದವು. ರಾಜ್ಯವನ್ನು ಕರ್ನಾಟಕ ಎಂದು ಕರೆದು ರಾಜ್ಯದ ಆಡಳಿತ ಭಾಷೆ, ನ್ಯಾಯಾಲಯದ ಭಾಷೆ ಕನ್ನಡವೆಂದು ಸಾರಬೇಕಾಗಿ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವಾಯಿತು. ಗೋವಾವನ್ನು ಮೈಸೂರಿನೊಡನೆ ಮಿಳನಗೊಳಿಸಬೇಕೆಂಬ ಇನ್ನೊಂದು ನಿರ್ಣಯವಾಯಿತು. ಕನ್ನಡಿಗರ ಹಿತಾಸಕ್ತಿಗಳನ್ನು ಪ್ರತಿಪಾದಿಸುವವರಿಗೇ ಮುಂಬರುವ ಚುನಾವಣೆಗಳಲ್ಲಿ ಮತ ವೀಯುವಂತೆ ಮತದಾರರನ್ನು ಪ್ರಾರ್ಥಿಸುವ ಮತ್ತೊಂದು ನಿರ್ಣಯ ಆಯಿತು. ಪ್ರಶಸ್ತಿ ಗಳಿಸಿದ ಡಾ॥ ಡಿ. ವಿ. ಗುಂಡಪ್ಪ, ಶ್ರೀ ಸಿ. ಕೆ. ವೆಂಕಟರಾಮಯ್ಯ ಇವರನ್ನೂ ಮತ್ತು ವೆಸ್ಟ್ ಇಂಡೀಸ್ ಕ್ರಿಕೆಟ್ ಪಂದ್ಯಗಳಿಗೆ ಆಯ್ಕೆಗೊಂಡ ಕನ್ನಡಿಗ ಕ್ರಿಕೆಟ್ ಆಟಗಾರರಾದ ಪ್ರಸನ್ನ, ಜಯಸಿಂಹ, ಕುಂದೇರಾವ್ ಇವರನ್ನು ಅಭಿನಂದಿಸುವ ನಿರ್ಣಯವನ್ನೂ ಸಹ ಅಂಗೀಕರಿಸಲಾಯಿತು. ಇದೇ ಸಂದರ್ಭದಲ್ಲಿ 'ಕನ್ನಡ ಯುವಜನ' ಎಂಬ ವಾರಪತ್ರಿಕೆಯನ್ನು ಶ್ರೀ ಖಾದ್ರಿ ಶಾಮಣ್ಣನವರು ಉದ್ಘಾಟಿಸಿದರು.

ನಗರದ ಶಶಿಕಲಾವಿದರ ಸಂಘದವರು ಜ. ದಿನಾಂಕ ೨೮ ರಂದು ಅಖಿಲ ಕರ್ನಾಟಕ ನಾಟಕಸ್ಪರ್ಧೆಯ ಆರಂಭೋತ್ಸವವನ್ನು ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಏರ್ಪಡಿಸಿದ್ದರು. ಇದೇ ಸಂದರ್ಭದಲ್ಲಿ ಖ್ಯಾತ ನಾಟಕಕಾರರಾದ ಶ್ರೀ ಬೆಳ್ಳಾವೆ ನರಹರಿಶಾಸ್ತ್ರಿಗಳ ಭಾವಚಿತ್ರ ಅನಾವರಣೋತ್ಸವವೂ ಹಾಗೂ ಹಿರಿಯ ನಾಟಕ ಕಲಾವಿದರಾದ ಶ್ರೀ ಎಂ. ಜಿ. ಮರಿರಾವ್ ಮತ್ತು ಶ್ರೀಮತಿ ಮಳವಳ್ಳಿ ಸುಂದರಮ್ಮ ಇವರನ್ನು ಸನ್ಮಾನಿಸುವ ವ್ಯವಸ್ಥೆಯೂ ಆಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಸಾಹಿತಿ ಡಾ॥ ಡಿ. ವಿ. ಗುಂಡಪ್ಪನವರು ವಹಿಸಿದ್ದರು. ನಾಟಕ ಸ್ಪರ್ಧೆಯನ್ನು ನಗರದ ಮೇಯರ್ ಶ್ರೀ ವಿ. ಎಸ್. ಕೃಷ್ಣ ಅಯ್ಯರ್ ಅವರು ನೆರವೇರಿಸಿದರು. ಜ. ೨೮ರಿಂದ ಫೆ. ೪ರವರೆಗೆ ನಾಟಕಸ್ಪರ್ಧೆಗಳು ನಡೆದವು.

ದಿನಾಂಕ ೨೭-೧-೧೯೬೨ ರಂದು ಬೆಂಗಳೂರಿನಲ್ಲಿ ಮಕ್ಕಳ ಸಾಹಿತ್ಯ ರಚನಾಲಯದ ಮುಕ್ತಾಯ ಸಮಾರಂಭವು ಶ್ರೀ ಎ. ಸಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಮುಕ್ತಾಯ ಭಾಷಣ ಮಾಡಿ ಮಕ್ಕಳ ಶಿಕ್ಷಣ ಮತ್ತು ಸಾಹಿತ್ಯ ರಚನೆ ಕುರಿತು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ತರಗತಿ ಮುಕ್ತಾಯ ಸಮಾರಂಭವು ದಿನಾಂಕ ೫-೧-೧೯೬೨ರಂದು ಪರಿಷನ್ಮಂದಿರದಲ್ಲಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಸಮ್ಮುಖದಲ್ಲಿ ನಡೆಯಿತು.

ದಿನಾಂಕ ೨೧-೧-೧೯೬೨ರಂದು ಬಸವನಗುಡಿ ಅಬಲಾಶ್ರಮದಲ್ಲಿ ಗಮಕ ಕಲಾ ಮಹೋತ್ಸವ ನಡೆಯಿತು. ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ವಿದ್ಯಾರ್ಥಿಗಳಿಗೆ 'ಗಮಕಕಲೆಯ ಹುಟ್ಟು ಗುಟ್ಟು' ಕುರಿತು ಭಾಷಣ ಮಾಡಿದರು.

ದಿನಾಂಕ ೩೦-೧-೧೯೬೨ರಂದು ಬೆಂಗಳೂರು ಗೌ॥ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ ಶ್ರೀ ಪು. ತಿ. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿ ಕವಿಸಮ್ಮೇಳನ ನಡೆಯಿತು.

ಬೆಂಗಳೂರು ನಗರಭವದಲ್ಲಿ ದಿನಾಂಕ ೨೭-೧-೬೨ ರಿಂದ ೨-೨-೬೨ ರವರೆಗೆ ರವೀಂದ್ರನಾಥ ಠಾಕೂರರ ಶತಮಾನೋತ್ಸವ ಸಪ್ತಾಹ ನಡೆಯಿತು. ರಾಜ್ಯಪಾಲರಾದ ಮೈಸೂರು ಮಹಾರಾಜರು ಇದರ ಪ್ರಾರಂಭೋತ್ಸವ ನಡೆಸಿದರು. ಇದರ ಅಂಗವಾಗಿ ವಿದ್ವಾಂಸರ ಭಾಷಣ, ಕವಿಸಮ್ಮೇಳನ, ಸಂಗೀತ, ನಾಟಕ, ನೃತ್ಯ ಮೊದಲಾದುವು ನಡೆದವು.

ದಿನಾಂಕ ೨೬-೧-೬೨ರ ದಿನ ಬೆಂಗಳೂರು ನಗರಭವನದಲ್ಲಿ ಸಾಹಿತ್ಯ ಸಂಸ್ಕೃತಿ ಇಲಾಖೆಯ ನೂತನ ಕನ್ನಡ ಕೃತಿಗಳಾದ ಭಾರತೀಯ ಸಂಸ್ಕೃತಿದರ್ಶನ, ಭಾಸ್ಕರಾಚಾರ್ಯರ ಲೀಲಾವತಿ, ಕರ್ನಾಟಕದ ಸ್ವಾತಂತ್ರ್ಯ ಚಳುವಳಿ ಇತಿಹಾಸ (ಭಾಗ ೧) ಎಂಬ ಮೂರು ಗ್ರಂಥಗಳನ್ನು ಮಾನ್ಯ ಮುಖ್ಯಮಂತ್ರಿ ಬಿ. ಡಿ. ಜತ್ತಿಯವರು ಉದ್ಘಾಟಿಸಿದರು.

ದಿನಾಂಕ ೧೮-೧-೬೨ರಂದು ಬೆಂಗಳೂರು ಜೌಗುಪಾಳ್ಯದ ಕಾರ್ಪೊರೇಷನ್ ಹೈಸ್ಕೂಲ್ ಕರ್ನಾಟಕ ಸಂಘದ ಉದ್ಘಾಟನೆಯನ್ನು ಸೌ॥ ಲೀಲಾದೇವಿ ಪ್ರಸಾದ್‌ರವರು ನೆರವೇರಿಸಿದರು. ಶ್ರೀ ಅರ್ಚಕ ವೆಂಕಟೇಶ್ ಅವರು ಅಧ್ಯಕ್ಷರಾಗಿದ್ದರು.

ಭಾರತದ ಗಣರಾಜ್ಯೋತ್ಸವ ಸಂದರ್ಭದಲ್ಲಿ ಕೇಂದ್ರ, ಸರ್ಕಾರ ಇತ್ತಿರುವ ಪ್ರಶಸ್ತಿಗಳ ಪೈಕಿ ಕನ್ನಡಿಗರಾದ ರಿಜರ್ವ್ ಬ್ಯಾಂಕಿನ ಗವರ್ನರಾದ ಶ್ರೀ ಎಚ್. ವಿ. ಆರ್. ಅಯ್ಯಂಗಾರ್ಯರಿಗೆ 'ಪದ್ಮವಿಭೂಷಣ' ಮತ್ತು ಖ್ಯಾತ ಸಾಹಿತಿ ಶ್ರೀ ಸಿ. ಕೆ. ವೆಂಕಟರಾಮಯ್ಯನವರಿಗೆ 'ಪದ್ಮಶ್ರೀ' ಬಂದಿವೆ.

ಧಾರವಾಡ

ಧಾರವಾಡದ ಕರ್ಣಾಟಕ ವಿದ್ಯಾಭಿವೃದ್ಧಿ ಸಂಸ್ಥೆಯ ಹೈಸ್ಕೂಲಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಶ್ರೀ ಎಸ್. ಡಿ. ಇಂಚಲ ಅಧ್ಯಕ್ಷರಾಗಿದ್ದರು. ಶ್ರೀ ಎಸ್. ಬಿ. ಶಾಪೇಟ ಇವರು ಉದ್ಘಾಟಕರಾಗಿದ್ದರು.

ತುಮಕೂರು

ದಿನಾಂಕ ೧೮-೧-೬೨ ರಂದು ಇಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಪ್ರೊ॥ ಕೆ. ಜಿ. ಕುಂದಣಗಾರರಿಗೆ ಸಾರ್ವಜನಿಕರು ಸನ್ಮಾನಿಸಿದರು. ಕನ್ನಡ ಸಾಹಿತ್ಯ ಪರಿಷದಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಸಭಾಧ್ಯಕ್ಷತೆ ವಹಿಸಿ ಶ್ರೀ ಕುಂದಣಗಾರರ ಸಾಹಿತ್ಯ ಸೇವೆ ಕುರಿತು ಪ್ರಶಂಸಿಸಿದರು.

ಸಂಪಾದಕೀಯ

ನುಡಿದಂತೆ ನಡೆಯಲಿ

ಎರಡು ಪಂಚವಾರ್ಷಿಕ ಯೋಜನೆಗಳು ಮುಗಿದವು. ಸಹಸ್ರಾರು ಕೋಟಿ ಹಣ ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿ ವ್ಯಯವಾಯಿತು. ದೇಶದಲ್ಲಿ ಹೊಸ ಹೊಸ ಜಲಾಶಯಗಳು, ವಿದ್ಯುದಾಗರಗಳು, ಕಾರ್ಖಾನೆಗಳು, ರೈಲು ಮಾರ್ಗಗಳು, ಹೆದ್ದಾರಿಗಳು, ನಗರಗಳು ನಿರ್ಮಾಣವಾದುವು; ಆಗುತ್ತಲೂ ಇವೆ. ಹತ್ತು ವರ್ಷಗಳ ಅವಧಿಯಲ್ಲಿ ಒಂದು ಮೈಲಿಯಾದರೂ ಹೊಸ ರೈಲು ಮಾರ್ಗವನ್ನು ಪಡೆಯದ ದುರದೃಷ್ಟದ ನಾಡೆಂದರೆ ಕರ್ನಾಟಕ. ಪಶ್ಚಿಮ ಕರಾವಳಿಯಲ್ಲಿರುವ ಕರ್ನಾಟಕದ ಒಂದು ಬಂದರವೂ ಅಭಿವೃದ್ಧಿ ಹೊಂದಲಿಲ್ಲ. ಹಾಸನ–ಮಂಗಳೂರು ರೈಲುದಾರಿ, ಹುಬ್ಬಳ್ಳಿ–ಕಾರವಾರ ರೈಲು ಮಾರ್ಗಗಳ ನಿರ್ಮಾಣದ ಬಗ್ಗೆ ನೀಡಲಾದ ಆಶ್ವಾಸನೆಗಳು ಇನ್ನೂ ಆಶ್ವಾಸನಗಳಾಗಿಯೇ ಉಳಿದಿವೆ. ಇತ್ತೀಚಿಗೆ ಅವು ಕೂಡ ಮಾಯವಾಗುವ ಚಿಹ್ನೆಗಳು ಕಾಣುತ್ತಲಿವೆ. ಗೋವೆಯು ಭಾರತಕ್ಕೆ ಸೇರಿದಮೇಲೆ ಸುಸಜ್ಜಿತವಾದ ಮರ್ಮಗೋವಾ ಬಂದರು ದೊರೆತಿದೆ. ಈ ಬಂದರಿನ ಮೂಲಕ ಕರ್ನಾಟಕದ ಆಯಾತ ನಿರ್ಯಾತ ವ್ಯವಹಾರ ನಿರಾಂತಕವಾಗಿ ಸರ್ವ ಕಾಲದಲ್ಲಿಯೂ ನಡೆಯಬಹುದು. ಕಾರವಾರ ಮತ್ತು ಮಂಳಗೂರು ಬಂದರಗಳನ್ನು ಅಭಿವೃದ್ಧಿಗೊಳಿಸುವ ಅವಶ್ಯಕತೆ ಇನ್ನು ಉಳಿಯಲಿಲ್ಲ. ಮಂಗಳೂರು ಬಂದರು ಅಭಿವೃದ್ಧಿ ಕಾರ್ಯವನ್ನು ಕೈಬಿಟ್ಟಮೇಲೆ ಹಾಸನ–ಮಂಗಳೂರು ರೈಲುದಾರಿಯ ರಚನೆಯ ಪ್ರಶ್ನೆ ಅದರೊಂದಿಗೇ ಮಾಯವಾಗುವುದು. ಹುಬ್ಬಳ್ಳಿ ಕಾರವಾರ ರೈಲ್ವೆ ನಿರ್ಮಾಣದ ಅಗತ್ಯವಾದರೂ ಇನ್ನೆಲ್ಲಿ? ಎಂಬ ಅರ್ಥ ಬರುವ ರೀತಿಯಲ್ಲಿ ಕೇಂದ್ರದಲ್ಲಿರುವ ಸಂಬಂಧಿಸಿದ ಮಂತ್ರಿಗಳು ಮಾತನಾಡಿಕೊಳ್ಳುತ್ತಿರುವುದು ತೀರ ವಿಚಿತ್ರವಾಗಿದೆ. ಕಳೆದ ತಿಂಗಳು ೨೩ನೇ ತಾರೀಕಿಗೆ ಬೆಂಗಳೂರು–ಸೇಲಂ ರೈಲ್ವೆ ಮಾರ್ಗದ ನಿರ್ಮಾಣ ಕಾರ್ಯದ ಉದ್ಘಾಟನೆಯು ನಡೆಯಿತು. ಆಗ ಅಲ್ಲಿ ಸೇರಿದ್ದ ಕೇಂದ್ರ ಸಂಚಾರ ಸಾರಿಗೆಯ ಸಚಿವರಾದ ಡಾ|| ಪಿ. ಸುಬ್ಬರಾಯನ್‌ರು, ಕೇಂದ್ರದ ರೈಲ್ವೆಖಾತೆಯ ಉಪಸಚಿವರಾದ ಶ್ರೀ ಎಸ್. ವಿ. ರಾಮಸ್ವಾಮಿಯವರು ಮತ್ತು ರೈಲ್ವೆ ಬೋರ್ಡಿನ ಅಧ್ಯಕ್ಷರಾದ ಶ್ರೀ ಕರ್ನಲ್ ಸಿಂಗರು ಮಂಗಳೂರು–ಹಾಸನ ರೈಲ್ವೆ ಮಾರ್ಗ ನಿರ್ಮಾಣದ ಬಗ್ಗೆ ತಾಳಿದ ಮೌನವನ್ನು ನೋಡಿದರೆ ತೃತೀಯ ಯೋಜನೆಯಲ್ಲಿ ರೈಲುದಾರಿಯನ್ನು ಸೇರಿಸಿದ್ದರೂ ಅದನ್ನು ಪ್ರಾರಂಭಿಸುವ ಇಚ್ಛೆ ಕೇಂದ್ರ ಸರ್ಕಾರಕ್ಕಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಬೆಂಗಳೂರು–ಸೇಲಂ ರೈಲ್ವೆ ಮಾರ್ಗ ರಚನೆಯ ಕಾರ್ಯ ಪ್ರಾರಂಭವಾದದ್ದು ಅತ್ಯಂತ ಆನಂದದ ಸಂಗತಿ. ಈ ಭಾಗ್ಯವನ್ನು ಪಡೆದ ತಮಿಳು ಬಂಧುಗಳನ್ನು ನಾವು ಅಭಿನಂದಿಸುತ್ತೇವೆ. ಕೇಂದ್ರದಲ್ಲಿ ಈ ಖಾತೆಯನ್ನು ನಡಸುತ್ತಿರುವ ಮಂತ್ರಿಗಳು ಈ ಪ್ರದೇಶದವರಾದ್ದರಿಂದ ಈ ಕೆಲಸ ಇಷ್ಟು ಬೇಗ ಪ್ರಾರಂಭವಾಯಿತು, ಎನ್ನುವುದನ್ನು ಕೇಳಿ ಮಾತ್ರ ನಾವು ವ್ಯಸನಪಡುತ್ತೇವೆ.

ಬಲವಿದ್ದವನಿಗೆ ಭೂಮಿ, ಎನ್ನುವ ನೀತಿ ಪ್ರಜಾಸತ್ತಾತ್ಮಕವಾಗಿಲ್ಲ. ಕೇಂದ್ರದಲ್ಲಿರುವವರು ರಾಷ್ಟ್ರದ ಅವಿಭಾಜ್ಯ ಅಂಗಗಳಾದ ಎಲ್ಲ ರಾಜ್ಯಗಳ ಆವಶ್ಯಕತೆಗಳನ್ನೂ ತೆರೆದ ಕಣ್ಣುಗಳಿಂದ ನೋಡಬೇಕು, ವಿಶಾಲ ದೃಷ್ಟಿಯಿಂದ ಪರಿಶೀಲಿಸಬೇಕು, ಅಖಂಡ ದೇಶಾಭಿಮಾನದಿಂದ ಪೂರೈಸಬೇಕು. ಯಾವುದೋ ಕುಂಟು ನೆಪಗಳನ್ನು ಹೇಳಿ ಕರ್ತವ್ಯದಿಂದ ನುಣುಚಿಕೊಳ್ಳುವುದು ಸರ್ವಥಾ ಭೂಷಣವಾಗಲಾರದು. ಬೆಂಗಳೂರು–ಸೇಲಂ ರೈಲ್ವೆಮಾರ್ಗ ನಿರ್ಮಾಣದ ಕಾರ್ಯದೊಡನೆಯೇ ಹಾಸನ–ಮಂಗಳೂರು ರೈಲುದಾರಿಯ ರಚನೆಯ ಕಾರ್ಯ ಪ್ರಾರಂಭವಾಗಬೇಕಾಗಿತ್ತು. ಹುಬ್ಬಳ್ಳಿ–ಕಾರವಾರ ರೈಲುಹಾದಿಯ ಅಗತ್ಯವನ್ನು ಕುರಿತು ಕಳೆದ ಕಾಲು ಶತಮಾನದಿಂದ ಹೇಳುತ್ತಲೇ ಬಂದಿದ್ದಾರೆ ಕನ್ನಡಿಗರು. ಕೇಂದ್ರದಲ್ಲಿರುವ ಕನ್ನಡ ಸಚಿವರು, ಸಂಸತ್ತಿನ ಸದಸ್ಯರು ಗಟ್ಟಿಗರಾಗಿದ್ದರೆ, ಐಕಮತ್ಯದಿಂದ ನಾಡಹಿತಕ್ಕಾಗಿ ಅಂತಃಕರಣಪೂರ್ವಕವಾಗಿ ವರ್ತಿಸಿದ್ದರೆ, ರಾಜ್ಯ ಸರ್ಕಾರವು ಈ ಕಾರ್ಯಗಳುಆಗಲೇಬೇಕೆಂದು ಪಟ್ಟು ಹಿಡಿದು ಕುಳಿತಿದ್ದರೆ ಈ ದುರ್ದಶೆ ನಮಗೆ ಒದಗುತ್ತಿರಲಿಲ್ಲ, ಎಂದು ಜನ ಆಡಿಕೊಳ್ಳುವಂತಾಗಿದೆ. ಈ ಕಾರ್ಯಗಳು ಮುಂದೆ ಬೀಳುವುದಕ್ಕೆ ಯಾರೇ ಕಾರಣರಾಗಿರಲಿ, ಮುಂದೂಡುವ ನೀತಿ ಮಾತ್ರ ಸರಿಯಾದುದಲ್ಲ. ಅಪಾರವಾದ ಜಲ, ವನ, ಖನಿಜ ಸಂಪತ್ತುಗಳಿಂದ ಕೂಡಿದ ಕರ್ನಾಟಕವನ್ನು ಕಡೆಗಣಿಸುವುದು ದೇಶಾಭಿವೃದ್ಧಿಯ ದೃಷ್ಟಿಯಿಂದ ದೊಡ್ಡ ದೋಷ. ಕರ್ನಾಟಕದ ಒಂದು ಬಂದರು ಅಭಿವೃದ್ಧಿಯಾದರೆ, ಇಲ್ಲಿ ಹೊಸ ರೈಲು ಮಾರ್ಗ

ನಿರ್ಮಾಣವಾದರೆ, ನವೀನ ಕಾರ್ಖಾನೆಗಳು ಹುಟ್ಟಿಕೊಂಡರೆ ಅವು ಭಾರತದಲ್ಲಿಯೇ ಆದ ಹಾಗೆ. ಯಾವುದೋ ಅನ್ಯದೇಶದ ಜನಕ್ಕೆ ಇದರಿಂದ ಉಪಕಾರವಾಗುವುದೆಂಬ ಭಯ, ಸಂಶಯ, ನಿರಾಧಾರವಾದುವುಗಳು.

ಯಾವ ಕಾರಣದಿಂದಲೂ ಕಾರವಾರ, ಮಂಗಳೂರು ಬಂದರುಗಳ ಅಭಿವೃದ್ಧಿ ಮತ್ತು ಬೆಂಗಳೂರು–ಹಾಸನ, ಹುಬ್ಬಳ್ಳಿ–ಕಾರವಾರ ರೈಲ್ವೆಮಾರ್ಗ ನಿರ್ಮಾಣ ಯೋಜನೆಗಳನ್ನು ಕೇಂದ್ರ ಸರ್ಕಾರವು ಕೈಬಿಡಕೂಡದು. ಕೇಂದ್ರ ಸರ್ಕಾರ ತಾನು ನುಡಿದಂತೆ ನಡೆಯಲಿ.

ರಾಜ್ಯದ ಮಟ್ಟದಿಂದ ವಿಚಾರಿಸಿದಾಗಲೂ ನಮ್ಮ ರಾಜ್ಯ ಸರ್ಕಾರವು ತಾನು ನುಡಿದಂತೆ ಕೆಲವು ಸಂದರ್ಭಗಳಲ್ಲಿ ನಡೆದುಕೊಂಡಿಲ್ಲ. ರಾಜ್ಯದ ಹೆಸರು, ಆಡಳಿತ ಭಾಷೆ, ಶಿಕ್ಷಣ ಮಾಧ್ಯಮ, ಗಡಿ ಸಮಸ್ಯೆಗಳು, ಈ ಪ್ರಶ್ನೆಗಳನ್ನು ಬಿಡಿಸಲು ಸಮರ್ಥವಾಗಲಿಲ್ಲ. ಶ್ರೀ ಜತ್ತಿ ಮಂತ್ರಿ ಮಂಡಲವು ಅಧಿಕಾರಕ್ಕೆ ಬಂದಮೇಲೆ ಕೆಲವು ಮಹತ್ವದ ಕಾರ್ಯಗಳನ್ನು ಅದು ಸಾಧಿಸಿರುವುದನ್ನು ಇಲ್ಲಿ ನೆನೆಯದಿರಲಾರೆವು. ರಾಜ್ಯದ ಕೈಗಾರಿಕೆ, ಶಿಕ್ಷಣ ಮೊದಲಾದ ರಂಗಗಳಲ್ಲಿ ಅಭೂತಪೂರ್ವ ಕಾರ್ಯವಾಗಿದೆ. ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಅಣ್ಣಾರಾವ ಗಣಮುಖಿ ಅವರ ಕಾಲದಲ್ಲಿ ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ಪ್ರಶಂಸಾರ್ಹವಾದ ಕಾರ್ಯಗಳಾಗಿವೆ. ಅವರ ಕಾಲದಲ್ಲಿ ಆದ ಕನ್ನಡ ನಿಘಂಟಿನ ಒಪ್ಪಂದದಿಂದ ಸುಮಾರು ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ನೂತನ ಅಚ್ಚುಕೂಟವನ್ನು ಕನ್ನಡ ಸಾಹಿತ್ಯ ಪರಿಷತ್ತು ಪಡೆಯಲು ಸಹಾಯವಾಗಿದೆ, ಎಂಬುದನ್ನು ನಾವಿಲ್ಲಿ ಕೃತಜ್ಞತೆಯೊಂದಿಗೆ ಸ್ಮರಿಸದಿರಲಾರೆವು.

ಜತ್ತಿ ಮಂತ್ರಿ ಮಂಡಲವು ರಾಜ್ಯದ ಹೆಸರಿನ ಪ್ರಶ್ನೆ ಮೊದಲಾದ ಮೂಲಭೂತ ಪ್ರಶ್ನೆಗಳನ್ನು ಬಿಡಿಸಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿಕೊಳ್ಳಬಹುದಾಗಿತ್ತು. ಇದು ಅವರ ಪಾಲಿಗೆ ಒದಗಲಿಲ್ಲವಲ್ಲ, ಎಂದು ನಮಗೆ ವ್ಯಸನ. ಇಲ್ಲಿಯ ಅಸ್ಥಿರ ರಾಜಕೀಯವೂ ಇದಕ್ಕೆ ಕೆಲ ಮಟ್ಟಿಗೆ ಕಾರಣವಾಗಿರಬಹುದು. ಇಂದಿನ ಮಂತ್ರಿ ಮಂಡಲವು ಹೋಗಿ ಮುಂದಿನ ತಿಂಗಳು ಹೊಸ ಮಂತ್ರಿ ಮಂಡಲವು ಅಧಿಕಾರಕ್ಕೆ ಬರುವುದು. ನೂತನ ಶಾಸನ ಸಭೆಗಳು ರಚಿತವಾಗುವುವು. ಇಂದಿನ ಮಂತ್ರಿ ಮಂಡಲವನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಮತ್ತು ಮುಂದೆ ಬರುವ ಮಂತ್ರಿ ಮಂಡಲವು ನುಡಿದಂತೆ ನಡೆಯುವುದೇ ತನ್ನ ನೀತಿ ಎಂದು ಘಂಟಾಘೋಷವಾಗಿ ಸಾರಲಿ, ಎಂದು ಹಾರೈಸುತ್ತೇವೆ.

ಅಭಿನಂದನೆಗಳು

ರಾಜಾಸೇವಾಸಕ್ತ ಶ್ರೀ ಸಿ. ಕೆ. ವೆಂಕಟರಾಮಯ್ಯನವರಿಗೆ ಈ ಸಲ 'ಪದ್ಮಶ್ರೀ' ಎಂಬ ಪ್ರಶಸ್ತಿ ದೊರೆಕಿರುವುದು ಸಂತೋಷದ ಸಂಗತಿಯಾಗಿದೆ. ಶ್ರೀ ವೆಂಕಟರಾಮಯ್ಯನವರ ಸಾಹಿತ್ಯಸೇವೆ ಬಹು ಮುಖವಾದುದು. ಕಥೆ, ಕಾದಂಬರಿ, ನಾಟಕ, ಜೀವನಚರಿತ್ರೆ, ಅನುವಾದ, ವಿಮರ್ಶೆ, ಈ ಮೊದಲಾದ ಸಾಹಿತ್ಯದ ಪ್ರಾಕಾರಗಳಲ್ಲಿ ಅವರು ಲೇಖನಿಯನ್ನು ಬಳಸಿದ್ದಾರೆ, ಮತ್ತು ಎಲ್ಲದರಲ್ಲೂ ತಮ್ಮದೇ ಆದ ಸ್ಥಾನವನ್ನು ಸ್ಥಾಪಿಸಿದ್ದಾರೆ. ಅವರ ಸಾಹಿತ್ಯ ಸೇವೆಯೆಷ್ಟೇ ಅವರ ವ್ಯಕ್ತಿತ್ವವೂ ಹಿರಿಯದು. ಸದಾ ಹಸನ್ಮುಖ, ವಿನಯ, ತೆರೆದ ಮನಸ್ಸು, ಔದಾರ್ಯ, ತುಂಬು ಪಾಂಡಿತ್ಯ, ಇವು ಶ್ರೀ ವೆಂಕಟರಾಮಯ್ಯನವರಿಗೆ ದೇವನಿತ್ತ ವರಗಳು. ಇವುಗಳ ಜೊತೆಗೆ ಗಂಗಾಸಲಿಲದಂತೆ ನಿರರ್ಗಳವಾಗಿ ಹರಿಯುವ ಅವರ ವಾಕ್ಪ್ರವಾಹವನ್ನು ಸೇರಿಸಬಹುದು. ಶ್ರೀಯುತರನ್ನು ಕುರಿತು "ಕನ್ನಡ ಸಾಹಿತ್ಯವೃಕ್ಷ ಚಿಗುರಿ, ಪೂತು ಫಲಿಸುವುದಕ್ಕೆ ಸಿ. ಕೆ. ವೆಂ. ಮಾಡಿರುವ ಸೇವೆ ಅಪಾರ. ಆದರೆ ಅದಕ್ಕೂ ಹೆಚ್ಚಿನದು ಕನ್ನಡ ಜನಜೀವನ ವಿಕಾಸವಾಗುವುದಕ್ಕೆ ಅವರು ಮಾಡಿರುವ ಸೇವೆ," ಎಂದು ಶ್ರೀ ಅ. ನ. ಕೃ. ಹೇಳಿರುವುದು ಯಥಾರ್ಥವಾಗಿದೆ.

೧೯೫೭ರಲ್ಲಿ ನಡೆದ ಹರಪನಹಳ್ಳಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪೀಠವನ್ನು ಈ ಉಜ್ಜ್ವಲ ನಾಡು ನುಡಿಯ ಭಕ್ತರಿಗೆ ಒಪ್ಪಿಸಿ ತನ್ನ ಗೌರವವನ್ನು ಪ್ರದರ್ಶಿಸಿತು ಕನ್ನಡ ಜನತೆ.

'ಕನ್ನಡ ನುಡಿ'ಯ ಸಂಪಾದಕರಾಗಿಯೂ ಕೆಲವು ತಿಂಗಳು ಅವರು ಸೇವೆ ಸಲ್ಲಿಸಿರುವುದನ್ನು ನಾವಿಲ್ಲಿ ಹೆಮ್ಮೆಯಿಂದ ಸ್ಮರಿಸುತ್ತೇವೆ.

ಶ್ರೀ ಸಿ. ಕೆ. ವೆಂಕಟರಾಮಯ್ಯನವರಿಗೆ ದೊರೆತ ಗೌರವಕ್ಕಾಗಿ ಅವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತ ಅವರಿಂದ ಹೆಚ್ಚುಕಾಲ ಸಾಹಿತ್ಯ ಸೇವೆ ನಡೆಯುವಂತೆ ತಾಯಿ ಭುವನೇಶ್ವರಿಯು ಅವರಿಗೆ ಆರೋಗ್ಯಭಾಗ್ಯವನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಸಂಪಾದಕರು: ಅನ್ನದಾನಯ್ಯ ಪುರಾಣಿಕ, ಬಿ.ಕಾವ್., ಎಲ್‌ಎಲ್.ಬಿ. ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ. ಮುದ್ರಕರು: ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಬೆಂಗಳೂರು–೧೮.